ಅಧ್ಯಾಯ 3

# ನೀಲಿಯ ವ್ಯಾಪಾರ: ಸ್ಥಳೀಯ ಹಾಗೂ ಜಾಗತಿಕ ಬೇಡಿಕೆ

ಬಂಗಾಳದಲ್ಲಿ ಕೂಲಿ ಕೆಲಸವು ಎಷ್ಟು ಅಗ್ಗವಾಗಿದೆ ಹಾಗೂ ಅಲ್ಲಿನ ವಾತಾವರಣವು ಎಷ್ಟು ಅನುಕೂಲಕರವಾಗಿದೆ ಎಂಬುದನ್ನು ಗಮನಿಸಿದಾಗ ನೀಲಿಯನ್ನು ಅತ್ಯಂತ ಬೆಲೆಬಾಳುವ ಆಮದು ಸರಕನ್ನಾಗಿ ಮಾಡುವ ಕುರಿತು ನಮ್ಮಲ್ಲಿ ಯಾವ ಸಂದೇಹಕ್ಕೂ ಅವಕಾಶವಿರಲು ಸಾಧ್ಯವಿಲ್ಲ.

-ಗವರ್ನರ್ ಜನರಲ್‌ಗೆ ನ್ಯಾಯಾಲಯ ಬರೆದ ಪತ್ರದಿಂದ ಆಯ್ದ ಸಾಲುಗಳು , 12 ಏಪ್ರಿಲ್, 1786, ಪುಟ: 5

ನೀಲಿಯನ್ನು ಉತ್ಪಾದಿಸಿದ ಪ್ರದೇಶದಿಂದ ಅದರ ಬಳಕೆದಾರರವರೆಗಿನ ಸಾಗಾಟವನ್ನು ನೀಲಿಯ ವ್ಯಾಪಾರ ಎಂದು ಕರೆಯಬಹುದಾಗಿದ್ದು ಅದು ಆ ಸರಕಿನ ಸರಪಣಿಯ (ಕಮೋಡಿಟಿ ಚೈನ್) ಒಂದು ಅತ್ಯಂತ ಮಹತ್ವದ ಘಟಕವಾಗಿತ್ತು. ಈ ಘಟಕದ ಕುರಿತು ಸುಸಂಗತವಾದ ಹಾಗೂ ವಿಶ್ವಾಸಾರ್ಹವಾದ ಮಾಹಿತಿಯನ್ನು ನೀಡುವ ಆಕರಗಳು ಕೂಡ ನಮಗೆ ಲಭ್ಯವಿವೆ. ಇದರಿಂದಾಗಿ ನಾವು ಸಾಕಷ್ಟು ದೀರ್ಘಕಾಲದವರೆಗಿನ ವ್ಯಾಪಾರದ ಸರಾಸರಿಯನ್ನು ನಿಶ್ಚಯಿಸಬಲ್ಲೆವು, ಹಾಗೂ ಅದರ ಬೆಳವಣಿಗೆಯ ಹಾಗೂ ಅವನತಿಯ ವಿನ್ಯಾಸಗಳನ್ನು ಅವುಗಳ ಸ್ಥಳೀಯ ಹಾಗೂ ಜಾಗತಿಕ ಸಂದರ್ಭದಲ್ಲಿಟ್ಟು ವಿಶ್ಲೇಷಣೆ ಮಾಡಿ ಗುರುತಿಸಬಲ್ಲೆವು. ನೀಲಿಯ ವ್ಯಾಪಾರದ ಗಾತ್ರದ ಹಿಗ್ಗುವಿಕೆ ಅಥವಾ ಕುಗ್ಗುವಿಕೆಯು ಒಂದೆಡೆ ಭಾರತದಲ್ಲಿ ಅದರ ಉತ್ಪಾದನೆ ಮತ್ತು ಪೂರೈಕೆಯ ಸಾಧ್ಯತೆಗಳನ್ನು ಪ್ರತಿಫಲಿಸಿದರೆ ಮತ್ತೊಂದೆಡೆ ಆಂತರಿಕ ಹಾಗೂ ಬಾಹ್ಯ ಬೇಡಿಕೆಗಳ ಚಲನಶೀಲತೆಯನ್ನು ಪ್ರತಿಫಲಿಸುತ್ತದೆ. ಹದಿನಾರನೆಯ ಶತಮಾನದ ಅಂತ್ಯಭಾಗ ಹಾಗೂ ಇಪ್ಪತ್ತನೆಯ ಶತಮಾನದ ಆರಂಭದ ನಡುವೆ ಭಾರತದಲ್ಲಿ ನೀಲಿಯ ವ್ಯಾಪಾರವು ಹಿಗ್ಗು ಕುಗ್ಗುಗಳ ಅನೇಕ ಏರಿಳಿತಗಳನ್ನು ಕಂಡಿತು. ಭಾರತ ದೇಶದೊಳಗೆ ಹಾಗೂ ಯುರೋಪು ಮತ್ತು ಅಮೇರಿಕಾಗಳಲ್ಲಿನ ರಾಜಕೀಯ ಮತ್ತು ಆರ್ಥಿಕ ಸನ್ನಿವೇಶಗಳ ಸಂಯೋಜನೆಯಿಂದಾಗಿ ಇಂಥ ಏರಿಳಿತಗಳು ಕಂಡು ಬಂದವು. ಈ ಕೆಳಗಿನ ಭಾಗದಲ್ಲಿ ಭಾರತದ ನೀಲಿ ಬೆಳೆಗೆ ಇದ್ದ ಸ್ಥಳೀಯ ಹಾಗೂ ಜಾಗತಿಕ ಬೇಡಿಕೆಗಳು, ನೀಲಿಯ ವ್ಯಾಪಾರಕ್ಕಿದ್ದ ಅಡೆತಡೆಗಳು ಹಾಗೂ ಸವಾಲುಗಳು, ಹಾಗೂ ಜಾಗತಿಕ ನೀಲಿ ಮಾರುಕಟ್ಟೆಯ ಮೇಲೆ ಅದರ ಪರಿಣಾಮಗಳನ್ನು ಕುರಿತು ವಿಸ್ತೃತವಾದ ವಿಶ್ಲೇಷಣೆ ನೀಡಲಾಗಿದೆ.

ಹದಿನೇಳು ಮತ್ತು ಹದಿನೆಂಟನೆಯ ಶತಮಾನದಲ್ಲಿ ಅಸ್ತಿತ್ವದಲ್ಲಿದ್ದ ಭಾರತದ ನೀಲಿ ಬೆಳೆಯ ಸರಕು ಸರಪಣಿಯ ವಿಶಿಷ್ಟ ಲಕ್ಷಣವೆಂದರೆ ಅದು ಕೇವಲ ಯುರೋಪಿನ ಮಾರುಕಟ್ಟೆಯನ್ನೇ ನೆಚ್ಚಿಕೊಂಡಿರಲಿಲ್ಲ.[1] ಇಐಸಿ (EIC -ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿ) ಮತ್ತು ವಿಒಸಿಗಳು (VOC- ಡಚ್ ಈಸ್ಟ್ ಇಂಡಿಯಾ ಕಂಪೆನಿ Verenigde Oost-Indische Compagnie) ಅದನ್ನು ಯುರೋಪಿಗೆ ರಫ್ತು ಮಾಡುವುದನ್ನು ನಿಲ್ಲಿಸಿದಾಗಲೂ ಸಾಕಷ್ಟು ಪ್ರಮಾಣದಲ್ಲಿದ್ದ ಸ್ಥಳೀಯ ಬೇಡಿಕೆಯಿಂದಾಗಿ ಆ ಉದ್ಯಮ ಮುಂದುವರೆಯುತ್ತಿತ್ತು. ಬಂಗಾಲ, ಸಿಂಧ್, ಆಗ್ರಾ, ಅವಧ, ಗುಜರಾತ್, ದಕ್ಷಿಣ

[1]ನೀಲಿಯನ್ನು ಉತ್ಪಾದಿಸುವ ಬಹುತೇಕ ಇತರ ಪ್ರದೇಶಗಳಲ್ಲಿ ಹೇಳಿಕೊಳ್ಳುವಂಥ ಸ್ಥಳೀಯ ಬೇಡಿಕೆ ಇರಲಿಲ್ಲ, ಹಾಗಾಗಿ,ಅವು ಯುರೋಪಿನ, ಹಾಗೂ ಕೆಲವು ಸಂದರ್ಭಗಳಲ್ಲಿ ಏಶಿಯಾದ ಮಾರುಕಟ್ಟೆಗಳನ್ನು ಅವಲಂಬಿಸಿದ್ದವು.

ಮತ್ತು ಕೋರಮಂಡಲದ ಕರಾವಳಿಗಳಲ್ಲಿದ್ದ ಹತ್ತಿ ಬಟ್ಟೆಯ ಕೈಗಾರಿಕೆಗಳು ಗಣನೀಯ ಪ್ರಮಾಣದ ನೀಲಿಯನ್ನು ವರ್ಷಂಪ್ರತಿ ಬಳಸುತ್ತಿದ್ದವು. ಈ ದೇಶೀ ಬೇಡಿಕೆಯೂ ಹದಿನೇಳು ಮತ್ತು ಹದಿನೆಂಟನೆಯ ಶತಮಾನದಲ್ಲಿ ಬಟ್ಟೆ ಉತ್ಪಾದನೆಯು ವಿಸ್ತರಣೆಯಾದಂತೆಲ್ಲ ವೃದ್ಧಿಸಿತು. ನೀಲಿ ಬೆಳೆಯನ್ನು ದೊಡ್ಡ ಪ್ರಮಾಣದಲ್ಲಿ ಪ್ರತಿವರ್ಷ ಪರ್ಶಿಯನ್ ಖಾರಿ, ಕೆಂಪು ಸಮುದ್ರ, ಈಶಾನ್ಯ ಮೆಡಿಟರೇನಿಯನ್ ಹಾಗೂ ಯುರೋಪುಗಳ ಮಾರುಕಟ್ಟೆಗಳಿಗೂ ರಫ್ತು ಮಾಡಲಾಗುತ್ತಿತ್ತು. ಕೆಲವು ಭಾಗ ನೀಲಿಯನ್ನು ಪಶ್ಚಿಮ ಏಷ್ಯಾ ಹಾಗೂ ಓಟ್ಟೋಮನ್ ಟರ್ಕಿ ಬಳಸುತ್ತಿದ್ದವು ಮತ್ತು ಕೆಲವು ಅಲ್ಲಿಂದ ಯುರೋಪಿಗೆ ಮರು ರಫ್ತಾಗುತ್ತಿದ್ದವು. ದೇಶೀ ಬಳಕೆಯ ಅಗಾಧ ಪ್ರಮಾಣಕ್ಕೆ ವ್ಯತಿರಿಕ್ತವಾಗಿ, ಯುರೋಪಿನಲ್ಲಿ ಭಾರತದ ನೀಲಿಗೆ ಹೆಚ್ಚಿದ ಬೇಡಿಕೆಗಳು ಗಣನೀಯ ಪ್ರಮಾಣದಲ್ಲಿ ಏರಿಳಿತವಾಗುತ್ತಿದ್ದವು.

ಹದಿನಾರನೆಯ ಶತಮಾನದ ಅಂತ್ಯಭಾಗದಿಂದ ಹದಿನೇಳನೆಯ ಶತಮಾನದ ಮಧ್ಯಭಾಗದವರೆಗೆ ನೀಲಿಯನ್ನು ಪೋರ್ತುಗೀಸ ಎಸತಾಡೊ ದ ಇಂಡಿಯಾ,[2] ಇಐಸಿ ಹಾಗೂ ವಿಓಸಿಗಳು ಅತೀ ದೊಡ್ಡ ಪ್ರಮಾಣದಲ್ಲಿ ಯುರೋಪಿಗೆ ರಫ್ತು ಮಾಡುತ್ತಿದ್ದವು. ಈ ಕಾಲಾವಧಿಯ ಕೊನೆಯ ಹೊತ್ತಿಗೆ, ನೀಲಿಗೆ ಒಂದು ಜಾಗತಿಕ ಮಾರುಕಟ್ಟೆಯು ರೂಪುಗೊಂಡಿತ್ತು ಹಾಗೂ ಅದರಲ್ಲಿ ಭಾರತವು ನೀಲಿಯ ಏಕಮೇವ ಪೂರೈಕೆದಾರನಾಗಿ ಉಳಿದಿರಲಿಲ್ಲ. ನೀಲಿಯು ಜಾಗತಿಕ ವಾಣಿಜ್ಯ ಸರಕಾಗಿ ಬದಲಾಗಿತ್ತು ಹಾಗೂ ಇದುವರೆಗೆ ಅಜ್ಞಾತವಾಗಿದ್ದ ಪ್ರದೇಶಗಳಿಗೂ ನೀಲಿಯನ್ನು ವಾಣಿಜ್ಯ ಬೆಳೆಯಾಗಿ ಬೆಳೆಯುವ ಹಾಗೂ ಪೂರೈಸುವ ಜಾಲವು ವಿಸ್ತರಣೆಗೊಂಡಿತು. ಬಹುಮುಖ್ಯವಾಗಿ ಯುರೋಪಿನ ವಸಾಹತು ಆಕ್ರಮಣಗಳು ಹಾಗೂ ಅದರಿಂದಾದ ವಸಾಹತುಗಳ ಕೃಷಿ ಆರ್ಥಿಕತೆಯ ಪುನರ್ರಚನೆಗಳ ಕಾರಣದಿಂದ ನೀಲಿ ಬೆಳೆಯ ಪೂರೈಕೆಯ ಸರಪಣಿಯಲ್ಲಿ ಸ್ಪರ್ಧೆ ಹುಟ್ಟಿಕೊಂಡಿತು. ಬ್ರಿಟಿಷರು ಬಂಗಾಳವನ್ನು ಹಾಗೂ ಉತ್ತರ ಭಾರತವನ್ನುಆಕ್ರಮಿಸಿಕೊಂಡು ಆ ಪ್ರದೇಶದ ಕೃಷಿ ಆರ್ಥಿಕತೆಯನ್ನು ಪುನರ್ರಚಿಸಿದ ನಂತರ ನೀಲಿ ಬೆಳೆಯ ಸರಕು ಸರಪಣಿಯು ಕೂಡ ಪುನರ್ರಚನೆಗೊಂಡು ಭಾರತವು ಜಾಗತಿಕ ಮಾರುಕಟ್ಟೆಯಲ್ಲಿ ಮತ್ತೊಮ್ಮೆ ಪ್ರಭಾವಶಾಲಿಯಾಯಿತು.[3] ಹತ್ತೊಂಬತ್ತನೆಯ ಶತಮಾನದಲ್ಲಿ ಇಐಸಿ (ಈಸ್ಟ್ ಇಂಡಿಯಾ ಕಂಪೆನಿ), ಯುರೋಪು ಮತ್ತು ಅಮೇರಿಕಾದ ಖಾಸಗಿ ವ್ಯಾಪಾರಿಗಳು ಹಾಗೂ ಭಾರತ ಮತ್ತು ಏಶಿಯಾದ ವ್ಯಾಪಾರಿಗಳು ಅನೇಕ ಸಾಗರೋತ್ತರ ಮಾರುಕಟ್ಟೆಗಳಿಗೆ ಅಗಾಧ ಪ್ರಮಾಣದ ನೀಲಿಯನ್ನು ರಫ್ತು ಮಾಡಿದರು ಎಂಬ ಸಂಗತಿಯನ್ನು ಮುಂದಿನ ಭಾಗದಲ್ಲಿ ನಾವು ಕಾಣುತ್ತೇವೆ.

**ವಸಾಹತುಪೂರ್ವ ಭಾರತದಲ್ಲಿ ಸ್ಥಳೀಯ ಬಳಕೆ**

---

[2]ಹದಿನಾರನೆಯ ಶತಮಾನದ ಪ್ರಾರಂಭದಲ್ಲಿ ಪೋರ್ಚುಗೀಸರು ಹೊರ್ಮುಜ್, ಡಿಯು, ಗೋವಾ ಹಾಗೂ ಮಲಾಕ್ಕಾ ಮುಂತಾದ ಹಿಂದೂ ಮಹಾಸಾಗರದ ಕೆಲವು ಆಯಕಟ್ಟಿನ ಬಂದರುಗಳನ್ನು ಗೆದ್ದುಕೊಂಡ ನಂತರ ಏಶಿಯಾದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯವನ್ನು ಸ್ಥಾಪಿಸಲಾಯಿತು.

[3]ಹತ್ತೊಂಭತ್ತನೆಯ ಶತಮಾನದುದ್ದಕ್ಕೂ, ಭಾರತವು ಯುರೋಪು, ಉತ್ತರ ಅಮೇರಿಕಾ ಹಾಗೂ ಏಶಿಯಾದಲ್ಲಿ ತ್ವರಿತವಾಗಿ ವಿಸ್ತಾರಗೊಳ್ಳುತ್ತಿದ್ದ ಬಟ್ಟೆ ಕೈಗಾರಿಕೆಗಳಿಗೆ ನೀಲಿಯ ದೊಡ್ಡಪ್ರಮಾಣದ ಬೇಡಿಕೆಯನ್ನು ಪೂರೈಸಿತು. ಬ್ರಿಟನ್ ಅತ್ಯಂತ ದೊಡ್ಡ ಮಾರುಕಟ್ಟೆಯಾಗಿದ್ದರೆ, ಫ್ರಾನ್ಸ್, ಮತ್ತು ಇಟಲಿಗಳಿಗೂ ದೊಡ್ಡ ಪ್ರಮಾಣದಲ್ಲಿ ಭಾರತೀಯ ನೀಲಿಯನ್ನು ರಫ್ತು ಮಾಡಲಾಗುತ್ತಿತ್ತು. ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಜಪಾನಿಗೂ ಗಣನೀಯ ಪ್ರಮಾಣದ ನೀಲಿಯನ್ನು ರಫ್ತು ಮಾಡಲಾಗುತ್ತಿತ್ತು.

ಈಗಾಗಲೇ ತಿಳಿಸಿದಂತೆ, ಭಾರತದ ಅನೇಕ ಭಾಗಗಳಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಬಟ್ಟೆ ಕೈಗಾರಿಕೆಗಳಿಂದಾಗಿ ಈ ಅವಧಿಯುದ್ದಕ್ಕೂ ನೀಲಿಗೆ ಬೇಡಿಕೆಯು ನಿರಂತರವಾಗಿತ್ತು. ಅಂದಿನ ಸಮಕಾಲೀನ ಲೆಕ್ಕಾಚಾರಗಳು ಲಭ್ಯವಿಲ್ಲದ್ದರಿಂದ ಬಳಕೆಯ ಪ್ರಮಾಣವನ್ನು ನಿಗದಿಪಡಿಸಲು ಸಾಧ್ಯವಿಲ್ಲವಾದರೂ, ಭಾರತದ ಅಗಾಧ ಪ್ರಮಾಣದ ಬಟ್ಟೆ ಕೈಗಾರಿಕೆಗಳನ್ನು ಗಮನಿಸಿದರೆ ನೀಲಿ ಮಾರುಕಟ್ಟೆಯು ವಿಶಾಲವಾಗಿತ್ತು ಹಾಗೂ ಕೆಲವು ಸ್ಥಳೀಯ ಉತ್ಪಾದಕರು ಈ ಸಂಭವನೀಯ ಬೇಡಿಕೆಯನ್ನು ಗುರಿಯಾಗಿಟ್ಟುಕೊಂಡಿದ್ದರು ಎಂಬುದನ್ನಂತೂ ಊಹಿಸಿಕೊಳ್ಳಬಹುದು.

ಬಹು ಹಿಂದಿನ ಕಾಲದಿಂದಲೂ ಭಾರತದ ವರ್ಣಕಾರರು ನೀಲಿಯನ್ನು ಬಳಸಿ ನೀಲಿ, ಹಸಿರು ಹಾಗೂ ಅದರಿಂದ ಹುಟ್ಟಬಹುದಾದ ವಿವಿಧ ಮಿಶ್ರ ಬಣ್ಣಗಳನ್ನು ತಯಾರಿಸುತ್ತಿದ್ದರು.[4] ದೆಹಲಿ ಸುಲ್ತಾನರ ಕಾಲದಲ್ಲಿ ಹದಿಮೂರು ಹದಿನೈದನೆಯ ಶತಮಾನಗಳ ನಡುವೆ ನೀಲಿ ಬಣ್ಣ ತಯಾರಿಸುವುದು ಒಂದು ಮುಖ್ಯ ವೃತ್ತಿಯಾಗಿತ್ತು ಹಾಗೂ ಅದು ಪ್ರಭುತ್ವಕ್ಕೆ ಆದಾಯದ ಒಂದು ಮೂಲವಾಗಿತ್ತು. 1375 ರಲ್ಲಿ ದೆಹಲಿಯ ಫಿರೋಜ್ ಶಾ (1351-1388) ಸುಲ್ತಾನನು ನೀಲ್ಗಾರಿಯನ್ನು (ನೀಲಿ ಬಣ್ಣ ತಯಾರಿಕೆ)[5] ಒಳಗೊಂಡಂತೆ ಕೆಲವು ವೃತ್ತಿಗಳ ಮೇಲಿನ ಕರವನ್ನು ರದ್ದು ಮಾಡಿದ್ದನು. ಹದಿನಾಲ್ಕು ಹಾಗೂ ಹದಿನೈದನೆಯ ಶತಮಾನಗಳಲ್ಲಿ ನೀಲಿಬಣ್ಣದ ವೈವಿಧ್ಯಮಯ ಬಟ್ಟೆಗಳು ಭಾರತದ ಬೇರೆ ಬೇರೆ ಭಾಗಗಳಲ್ಲಿ ಬಳಕೆಯಲ್ಲಿದ್ದವು ಹಾಗೂ ಅವುಗಳನ್ನು ಪಶ್ಚಿಮ ಮತ್ತು ಆಗ್ನೇಯ ಏಶಿಯಾಗಳಿಗೂ ರಫ್ತು ಮಾಡಲಾಗುತ್ತಿತ್ತು.[6] ಹದಿನಾರನೆಯ ಶತಮಾನದ ಅಂತ್ಯಭಾಗದಲ್ಲಿ ನೀಲಿ ಮತ್ತು ಅದರ ಬಣ್ಣವನ್ನು ಬಟ್ಟೆಗೆ ಹಾಕುವ ವಿಧಾನ ಮತ್ತು ತಂತ್ರಗಳ ಉಲ್ಲೇಖಗಳು ಹೇರಳವಾಗಿವೆ. ಮುಘಲ್ ಮತ್ತು ಮುಘಲ್ ಕೊನೆಗಾಲದ ಪರ್ಶಿಯನ್ ಗ್ರಂಥಗಳು ನೀಲಿಯನ್ನು ಬಣ್ಣ ತಯಾರಿಕೆಗೆ ಹಾಗೂ ಬಟ್ಟೆಗಳ ಮೇಲೆ ಮುದ್ರಿಸಲಿಕ್ಕೆ ಉಪಯೋಗಿಸುತ್ತಿದ್ದುದನ್ನು ಪ್ರಮಾಣೀಕರಿಸುತ್ತವೆ. ಹದಿನೇಳನೆಯ ಶತಮಾನದ ಅಂತ್ಯಭಾಗದ ಪರ್ಶಿಯನ್ ಗ್ರಂಥವಾದ *ಬಯಜ್ -ಇ ಖುಷ್ಬು ಯಿ* ತಿಳಿಸುವಂತೆ ನೀಲಿ ಸಸ್ಯವು ನೀಲಿ ಬಣ್ಣ ಹಾಗೂ ಇತರ ಮಿಶ್ರ ಬಣ್ಣಗಳನ್ನು ತಯಾರಿಸಲಿಕ್ಕೆ ಮುಖ್ಯವಾದ ಮೂಲವಸ್ತುವಾಗಿತ್ತು.[7] ಮತ್ತೊಂದು ಪರ್ಶಿಯನ್ ಗ್ರಂಥವಾದ *ನುಷ್ಕಾ ಖುಲಾಸತುಲ್ ಮುಜುರ‍್ರಿಬತ್* ತಿಳಿಸುವಂತೆ ವರ್ಣಕಾರರು ನೀಲಿ, ಪಚ್ಚೆ ಹಸಿರು, ಹಾಗೂ ಮಜ್ಮುವಾತ್ (ದಟ್ಟ ಅಥವಾ ಕಪ್ಪು ನೀಲಿ ) ಬಣ್ಣಗಳಿಗಾಗಿ ವಿಭಿನ್ನ ಪ್ರಕಾರದ ನೀಲಿ ಸಸ್ಯಗಳನ್ನು ಬಳಸುತ್ತಿದ್ದರು.[8] ಮಜ್ಮುವಾತ್-ಅಸ್ ಸನಾಯೆ ತಿಳಿಸುವಂತೆ ನೀಲಿಯನ್ನು

---

[4] Mira Roy, 'Dyes in Ancient and Medieval India' *Indian Journal Of History of Science*, vol.13, no.2(1978). 83-112.

[5] *Sirat-i-Firuz Shahi*, c.1370-71 (MS. Persian, Centre of Advanced Study in hIstory, Aligarh Muslim University, Aligarh), Rotograph 168, f. 61a; Edward Thomas, *The Revenue Resources of the Mughal Empire in India*, from A.D. 1593 to A.D. 1707: *A Supplement to the Chronicles of the Pathan Kings of Delhi* (London: Trubner & Co.,1871), 5-6; Moti Chandra, ' Costumes and Textiles in the Sultanate Period', *Journal of Indian Textile History*, vol. 6(1961), 12.

[6] Chandra, 'Costumes and Textiles in the Sultanate Period'

[7] *Bayaz-I Khushbui*, [ Notebook on Fragrance] (ed.) Mirza Mu'tamid Khan, copied by Muhammad Azam, (Shaban 1109 A.H. 42 RR Aurangzeb Alamgir), c. 1698 (BL, Islamic Manuscript), ff.114 a-b, 116b, 117b,121b, 141b, 150b, 152b-153a.

[8] *Nuskha Khulasatul Mujarribat* [ Manuscript-copy of the summary of prescriptions] copied by Shaikh Ahmad(*katib*), 1189 A.H. (c. 1790) (BL. Islamic Manuscript), ff.113 a-b, 116 b, 118 a, 124 b, 134 a. See also *Risala mushtamil bar nuskhahai ataria wa talween-I parcha* [ Essay based on treatises on perfumes and textile dying], copied by Sayad Hussain, Rajab 1121 A.H.

ಉಪಯೋಗಿಸಿ ಕಲ್ಲು, ದಂತ, ಬಟ್ಟೆಗಳು ಮತ್ತು ಕೈಕಾಲು ಹಾಗೂ ಕೂದಲುಗಳಿಗೆ ಬಣ್ಣ ಹಾಕುತ್ತಿದ್ದರು.[9] ಹದಿನೇಳನೆಯ ಶತಮಾನದಲ್ಲಿ ನೀಲಿಯ ಸ್ಥಳೀಯ ಬಳಕೆಗಳ ವಿವಿಧ ಮಾಹಿತಿಗಳನ್ನು ನೀಡುವ ಸಾಕ್ಷ್ಯಾಧಾರಗಳು ಹೇರಳವಾಗಿ ದೊರೆಯುತ್ತವೆ, ಏಕೆಂದರೆ ಆಗ ಯುರೋಪಿಯನ್ನರ ವಾಣಿಜ್ಯಾಸಕ್ತಿಯಿಂದಾಗಿ ಅದರ ಉತ್ಪಾದನೆ, ವ್ಯಾಪಾರ ಹಾಗೂ ಬಳಕೆಗಳ ಕುರಿತು ದಾಖಲಾತಿಗಳು ಪ್ರಾರಂಭವಾದವು. ಇಐಸಿ ಹಾಗೂ ವಿಒಸಿ ಗಳಿಗೆ ಸಂಬಂಧಿಸಿದ ದಾಖಲೆಗಳಲ್ಲಿ ಅಧಿಕಾರಿಗಳು ನೀಲಿಯ ಉತ್ಪಾದನೆ, ಬೆಲೆ ಮತ್ತು ಮಾರುಕಟ್ಟೆಯಲ್ಲಿ ಅದರ ಲಭ್ಯತೆಯ ಕುರಿತು ವರದಿ ಮಾಡಿದಾಗೆಲ್ಲ ಅವು ಅದರ ಸ್ಥಳೀಯ ಬಳಕೆಯ ಕುರಿತು ತಿಳಿಸುತ್ತಿರುತ್ತವೆ.

ನೀಲಿಯ ಉತ್ಪಾದನೆಯು ಭಾರತದಲ್ಲಿ ವ್ಯಾಪಕವಾಗಿದ್ದರೂ ಕೂಡ, ಬಹುತೇಕ ಬಟ್ಟೆ ಕೈಗಾರಿಕೆಗಳು ಇಂಥ ಸ್ಥಳೀಯ ಮೂಲಗಳನ್ನೇ ನೆಚ್ಚಿಕೊಂಡಿದ್ದರೂ, ವಾಣಿಜ್ಯಕ ಉದ್ದೇಶದಿಂದ ಬೃಹತ್ ಪ್ರಮಾಣದ ಬಟ್ಟೆ ಉತ್ಪಾದನೆಗಾಗಿ ಬಯಾನಾ ಹಾಗೂ ಸಾರ್ಖೇಜ್ ಪ್ರಾಂತ್ಯಗಳಿಂದ ತರಿಸಿದ ಒಳ್ಳೆಯ ಗುಣಮಟ್ಟದ ನೀಲಿಯನ್ನು ಬಳಸುವ ಅವಶ್ಯಕತೆ ಹುಟ್ಟಿಕೊಂಡಿತು. ಪರ್ಶಿಯನ್ ಗ್ರಂಥಗಳಿಂದ ತಿಳಿದುಬರುವುದೇನೆಂದರೆ ಬಣ್ಣಗಳ ಉತ್ಕೃಷ್ಟತೆ ಹಾಗೂ ವೈವಿಧ್ಯಮಯ ಬಣ್ಣ ಹಾಕುವುದು ನೀಲಿ ಬಣ್ಣದ ಗುಣಮಟ್ಟವನ್ನು ಅವಲಂಬಿಸಿತ್ತು.[10] ಪೂರ್ವಭಾರತ ಹಾಗೂ ಬಂಗಾಲದ ವರ್ಣಕಾರರು ಬಯಾನಾ ಹಾಗೂ ಸಾರ್ಖೇಜ್‌ಗಳಿಂದ ಪೂರೈಕೆಯಾಗುವ ನೀಲಿಯನ್ನೇ ಮುಖ್ಯವಾಗಿ ಅವಲಂಬಿಸಿದ್ದರು. ವಾಯುವ್ಯ ಭಾರತದ ಬಟ್ಟೆ ತಯಾರಕರು ಕೂಡ ಬಯಾನಾ ನೀಲಿಯನ್ನೇ ಬಳಸುತ್ತಿದ್ದರು. ಬಯಾನ ಮತ್ತು ಖುರ್ಜಾದ ನೀಲಿಯ ಬಹುಭಾಗವನ್ನು ಮುಲ್ತಾನಿಗೆ ಸಾಗಿಸಿ ಅಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು ಎಂಬುದನ್ನು ಈಸ್ಟ್ ಇಂಡಿಯಾ ಕಂಪೆನಿಯ ಅಧಿಕಾರಿಗಳು ಗಮನಿಸಿದರು.[11] ಸಿಂಧ್ ಪ್ರಾಂತ್ಯದ ಕೆಲವು ಜಾಗಗಳಲ್ಲಿ (ಬುಬಕ್, ನಸರ್ಪುರ್ ಹಾಗೂ ಸನ್) ನೀಲಿಯನ್ನು ಬೆಳೆಯುತ್ತಿದ್ದರೂ ಕೂಡ ಥಟ್ಟಾ ಹಾಗೂ ಸಿಂಧ್‌ಗಳ ಸ್ಥಳೀಯ ವರ್ಣಕಾರರು ಬಯಾನಾ ಹಾಗೂ ಸಾರ್ಖೇಜ್ ನೀಲಿಯನ್ನೂ ಬಳಸುತ್ತಿದ್ದರು. ಅಂದರೆ ಗಣನೀಯ ಪ್ರಮಾಣದಲ್ಲಿ ಸ್ಥಳೀಯ ವ್ಯಾಪಾರವಿದ್ದು ಸ್ಥಳೀಯ ವರ್ತಕರು ಅದರಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದರು. ಯುರೋಪಿನ ದಾಖಲೆಗಳಲ್ಲಿ ಗುಜರಾತಿ ಬನಿಯಾಗಳು ಹಾಗೂ ಮುಸ್ಲಿಂ ವರ್ತಕರು ಬಯಾನಾ ಹಾಗೂ ಸಾರ್ಕೇಜ್ ಪ್ರಾಂತ್ಯಗಳಲ್ಲಿ ಸ್ಥಳೀಯ ವರ್ಣಕಾರರಿಗಾಗಿ ಹಾಗೂ ರಫ್ತಿಗಾಗಿ ನೀಲಿಯನ್ನು ಖರೀದಿಸುವ ಉಲ್ಲೇಖ ಆಗಾಗ್ಗೆ ಬರುತ್ತದೆ. ಹದಿನಾರನೆಯ ಶತಮಾನದಲ್ಲಿ ಫ್ರಾಂಕಾಯ್ಸ್ ಪೈರಾರ್ಡ್ ಹಾಗೂ ಜಾನ್

---

(c.1709), (BL, Islamic Manuscript), ff.12 a-b, 15 a-b, 22 a, 28 b-29 a; Hamida Khatoon Naqvi, 'Colour Making and Dying of Cotton Textiles in Medieval Hindustan' *Indian Journal of History of Science*, vol. 15, no.1 (1980), 58-70.

[9] *Majmu'at-us Sanaye* [A Compendium of Artifices] by an anonymous author from Morocco, (Hakim Philosoph-i-magaribi), copied by Sayid Ghulam Murtaza Jafri, 22 RY of Aurangzeb Alamgir (c. 1679), ( BL, Islamic Manuscript), pp. 29, 32-3, 58, 71, 188, 192-4.

[10] *Nuskha Khulasat-ul Majarribat; Risala mushtamil bar nushkahai ataria wa talween-l parcha* ; *Majmu'at-us Sanaye*. ನೀಲ್ ಖಸ್ಸಾ (ವಿಶೇಷ ಅಥವಾ ಶುದ್ಧ ನೀಲಿ), ಖುಮ್ ನೀಲ್ ( ಕಚ್ಚಾ ಅಥವಾ ಕಳಪೆ ನೀಲಿ), ನೀಲ್ ಖಿಸಂ ಇ ಅವ್ವಾಲ್ ( ಮೊದಲನೆಯ ದರ್ಜೆಯ ನೀಲಿ), ನೀಲ್ ಬಯಾಬನಿ ( ಕಾಡು ನೀಲಿ) ಮುಂತಾದವುಗಳ ಉಲ್ಲೇಖಗಳು ಸೂಚಿಸುವಂತೆ ವರ್ಣಕಾರರು ವಿಭಿನ್ನ ಗುಣಮಟ್ಟದ ನೀಲಿಯನ್ನು ಉಪಯೋಗಿಸುತ್ತಿದ್ದರು ಹಾಗೂ ಅವು ವಿಭಿನ್ನ ಗುಣಮಟ್ಟದ ಬಣ್ಣಗಳನ್ನು ಉತ್ಪಾದಿಸುತ್ತಿದ್ದರು.

[11] ಬಯಾನಾ ನೀಲಿಯನ್ನು ಮುಲ್ತಾನಿನಲ್ಲಿ ಮಣಕ್ಕೆ 85 ರೂಪಾಯಿಗಳು ಹಾಗೂ ಖುರ್ಜ ನೀಲಿಯನ್ನು ಮಣಕ್ಕೆ 80 ರೂಪಾಯಿಗಳಂತೆ ಮಾರಲಾಗುತ್ತಿತ್ತು. EFI 1637-41, Henry Bornford's Account of his Journey from Agra to Tatta [Thatta], March 1619, pp, 135-6.

ಹುಯ್ಘೆನ್ ವಾನ್ ಲಿನ್‌ಶೊಟೆನ್ ಎಂಬವರು, ವರ್ತಕರು ಗುಜರಾಥ್ ಮತ್ತು ಗೋವಾದ ನಡುವೆ ಗಣನೀಯ ಪ್ರಮಾಣದ ನೀಲಿಯನ್ನು ಸಾಗಿಸುವ ವಿಷಯವನ್ನು ಉಲ್ಲೇಖಿಸುತ್ತಾರೆ.[12] ಆಗ ಗೋವಾವು ಒಂದು ಮಹಾ ವ್ಯಾಪಾರೀ ಕೇಂದ್ರವಾಗಿತ್ತು. 1610 ರಲ್ಲಿ ಮಸಲಿಪಟ್ನಮ್ ನ ಒಬ್ಬ ಮುಸ್ಲಿಂ ವರ್ತಕನು ಆಗ್ರಾದಿಂದ 18 ಒಂಟೆಗಳ ಮೇಲೆ ಹೇರಬಹುದಾದ ಪ್ರಮಾಣದ ಬಯಾನಾ ನೀಲಿಯನ್ನು ತರಿಸುತ್ತಿದ್ದನೆಂಬುದಾಗಿ ಹೇಳಲಾಗಿದೆ.[13] 1640 ರಲ್ಲಿ ಭಾರತೀಯ ವರ್ತಕರು ಬಿಜಾಪುರ ಮತ್ತು ಬರ್ಹನ್‌ಪುರ ಮಾರುಕಟ್ಟೆಗಳಿಗಾಗಿ ಕೋರಮಂಡಲ್ ನೀಲಿಯನ್ನು ಖರೀದಿಸುತ್ತಿದ್ದರೆಂಬುದಾಗಿ ವರದಿಮಾಡಲಾಗಿದೆ.[14] ಬಂಗಾಲ ಮತ್ತು ಇಡೀ ಪೂರ್ವ ಭಾರತಕ್ಕೆ ಸ್ಥಳೀಯ ವರ್ತಕರು ಹಾಗೂ ಸಂಚಾರಿ ವ್ಯಾಪಾರಿಗಳು ನೀಲಿಯನ್ನು ಪೂರೈಸುತ್ತಿದ್ದರು. 1609 ರಲ್ಲಿ ವಿಒಸಿಯು ಅರಕಾನ್ ರಾಜ್ಯದ (ಈಗ ಆಗ್ನೇಯ ಬಾಂಗ್ಲಾದೇಶ) ಚಿತ್ತಗಾಂಗ್‌ನಲ್ಲಿ ಒಂದು ಫ್ಯಾಕ್ಟರಿಯನ್ನು ಸ್ಥಾಪಿಸುವ ಯೋಜನೆಯನ್ನು ಕೂಡ ಮಾಡಿತ್ತು. ಮುಖ್ಯವಾಗಿ ಭಾರತೀಯ ವ್ಯಾಪಾರಿಗಳು ಉತ್ತರ ಭಾರತದಿಂದ ಬೃಹತ್ ಪ್ರಮಾಣದಲ್ಲಿ ಅಲ್ಲಿಗೆ ತರುತ್ತಿದ್ದ ನೀಲಿಯನ್ನು ಖರೀದಿಸುವ ಸಲುವಾಗಿ ಆ ಯೋಜನೆಯನ್ನು ಮಾಡಲಾಗಿತ್ತು.[15] ವರ್ಣಕಾರರು ಹಾಗೂ ವರ್ತಕರು ನೀಲಿ ಪೂರೈಕೆಯಲ್ಲಿನ ಅನಿಶ್ಚಿತತೆ ಹಾಗೂ ಬೆಲೆಗಳ ಏರಿಳಿತಗಳಿಂದಾಗಿ ನೀಲಿಯನ್ನು ಸ್ಥಳೀಯವಾಗಿ ಉತ್ಪಾದಿಸುವ ಹಾಗೂ ಅದನ್ನು ತಾವೇ ಉತ್ಪಾದಿಸುವ ಸಾಧ್ಯತೆಯನ್ನು ಪ್ರಯತ್ನಿಸುವ ಕೆಲಸಕ್ಕೆ ಹಚ್ಚಿದ್ದವು. ಯುರೋಪಿನ ಬಂಡವಾಳ ಹಾಗೂ ನೀಲಿಯ ಬೇಡಿಕೆಯೂ ಇದಕ್ಕೆ ಪೂರಕವಾಗಿತ್ತು. ಉದಾಹರಣೆಗೆ 1640 ಹಾಗೂ 1650 ರಲ್ಲಿ ಇಐಸಿಯು ನೀಲಿಗಾಗಿ ತೊಡಗಿಸಿದ ಬಂಡವಾಳವು ಸಿಂಧ್‌ನ ನೀಲಿ ಕೃಷಿಕರು ಹಾಗೂ ಉತ್ಪಾದಕರಿಗೆ ದೊಡ್ಡ ಪ್ರಮಾಣದ ಪ್ರೋತ್ಸಾಹವನ್ನು ನೀಡಿತ್ತು.[16]

ಖುರ್ಜಾ, ಮೇವಾತ್, ಬಸವಾರ್, ಬ್ರಹ್ಮಾಬಾದ್, ಕೋಲ್, ಜಲಾಲಿ, ಸಾರ್ಖೇಜ್, ಬ್ರೋಚ್, ಜಂಬುಸರ್, ಕ್ಯಾಂಬೆ, ಬರೋಡಾ ಮತ್ತು ಸಿಂಧ್‌ಗಳಲ್ಲಿ ಉತ್ಪಾದಿಸಲಾಗುತ್ತಿದ್ದ ನೀಲಿಯ ಗಣನೀಯ ಭಾಗವನ್ನು ಸ್ಥಳೀಯವಾಗಿಯೇ ಬಳಸಲಾಗುತ್ತಿತ್ತು.[17] ಏಶಿಯಾದ ವರ್ತಕರು ಹಾಗೂ ಕಂಪೆನಿಗಳು ಅದರಲ್ಲಿ ಸ್ವಲ್ಪ ಭಾಗವನ್ನು ಪಶ್ಚಿಮ ಏಶಿಯಾಕ್ಕೆ, ಅದರಲ್ಲೂ ಮುಖ್ಯವಾಗಿ ಪರ್ಶಿಯನ್ ಖಾರಿಯ ಬಸ್ರಾ ಹಾಗೂ ಗೊಂಬ್ರೂಮ್‌ಗಳಿಗೆ ಕೂಡ ರಫ್ತು ಮಾಡುತ್ತಿದ್ದರು.

---

[12] Francois Pyrard, *The Voyage of Francois Pyrard of Laval to the East Indies, the Maldives, the Moluccas and Brazil*, vol.II, tr.,&ed., Albert Gray ( London: Hakluyt Society, 1887), p. 247; Jan Huyghen van Linschoten, *The Voyage of John Huyghen van Linschoten ti the East Indies*, vol. 1, ed. A.C.Burnell (London: Hakluyt Society, 1885), p. 252; Surendra Gopal, *Commerce and Crafts in Gujarath, 16th and 17th Centuries: A Study in the Impact of European Expansion on Pre-capitalist Economy* (New Delhi: People's Publishing House, 1975), 8304.

[13] VOC 1055, Masulipatnam, 15th June 1610, p. 121

[14] Tapan Raychaudhuri, *Jan Company in Coromandal, 1605-1690: A Study in the Interrelations of European Commerce and Traditional Economies* ('s-Gravenhaag:Martinus Nijhoff, 1962), 164.

[15] ಪ್ರತೀವರ್ಷವೂ ಅರಕಾನಿಗೆ, ಲಾಹೋರ್, ಆಗ್ರಾ, ದೆಹಲಿ ಮತ್ತು ಇತರ ಸ್ಥಳಗಳಿಂದ ಹಿಂದುಸ್ತಾನದ ಬನಿಯ ಮತ್ತು ಖತ್ರಿ ವರ್ತಕರು ನೀಲಿಯನ್ನು ಹೊತ್ತು ಬರುತ್ತಿದ್ದರು. ಕಂಪೆನಿಯು ಸಾಂಬಾರು ಪದಾರ್ಥಗಳು ಹಾಗೂ ಚೈನೀ ಸರಕುಗಳಿಗೆ ಅದನ್ನು ವಿನಿಮಯಮಾಡಿಕೊಳ್ಳಲು ಉದ್ದೇಶಿಸಿತ್ತು. VOC 1055, Masulipatnam to Batavia, 25 May 1608, p.18.

[16] EFI 1646-50, passim:EFI 1651-54 passim.

[17] 1640ರ ದಶಕದ ಪ್ರಾರಂಭದಲ್ಲಿ ಅಂದಾಜಿಸಿದಂತೆ ಸರ್ಖೆಜ್ ಪ್ರಾಂತ್ಯದ ಒಟ್ಟೂ ಉತ್ಪಾದನೆಯ ಒಂದು-ಆರಾಂಶ (ಸುಮಾರು 6,000 ಮಣ) ವನ್ನು ಸ್ಥಳೀಯ ವರ್ಣಕಾರರೇ ಬಳಸುತ್ತಿದ್ದರು. EFI 1642-45, Surat to Landon, 26th March 1644, pp. 163-4.

ವಿಲಿಯಮ್ ಫಿಂಚ್ ಉಲ್ಲೇಖಿಸುವಂತೆ ಕೋಲ್ ನಲ್ಲಿ ಉತ್ಪಾದಿಸಿದ ನೀಲಿಯನ್ನು ಸ್ಥಳೀಯವಾಗಿ ಬಳಸುವುದಲ್ಲದೇ ಮಧ್ಯ ಏಶಿಯಾದ ಸಮರಖಂಡ್, ಕಶ್ಘರ್ ಹಾಗೂ ಇತರ ಪ್ರದೇಶಗಳಿಗೆ ಕೂಡ ಕಳುಹಿಸಲಾಗುತ್ತಿತ್ತು.[18] ಇವುಗಳಲ್ಲಿ ಬಹುತೇಕ ಸ್ಥಳಗಳ ನೀಲಿಯು ಕಡಿಮೆ ಗುಣಮಟ್ಟದ್ದಾಗಿದ್ದು ಕಂಪೆನಿಗಳ ಲಂಡನ್ ಹಾಗೂ ಅಮಸ್ಟರ್‌ಡ್ಯಾಂ ಅಧಿಕಾರಿಗಳು ಅವುಗಳನ್ನು ಯುರೋಪಿಗೆ ತರದಂತೆ ತಡೆದಿದ್ದರು.[19] ಪ್ರಾರಂಭದಲ್ಲಿ ಇಐಸಿಯು ಕೋರಮಂಡಲ್ ನೀಲಿಯ ಕೆಲಭಾಗವನ್ನು ಯುರೋಪಿಗೆ ರಫ್ತು ಮಾಡುತ್ತಿತ್ತು, ಆದರೆ ಬಯಾನಾ ಹಾಗೂ ಸಾರ್ಖೇಜ್‌ಗಳಿಂದ ನೀಲಿಯನ್ನು ಬೃಹತ್ ಪ್ರಮಾಣದಲ್ಲಿ ಖರೀದಿಸಲು ಪ್ರಾರಂಭಿಸಿದ್ದೇ ತಡ ಆ ರಫ್ತನ್ನು ನಿಲ್ಲಿಸಿತು. ವಿಒಸಿಯು ಹದಿನೇಳನೆಯ ಶತಮಾನದಲ್ಲಿ ಕೋರಮಂಡಲ್ ನೀಲಿಯನ್ನು ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ರಫ್ತು ಮಾಡಿತು. ಸಾಮಾನ್ಯವಾಗಿ ಐರೋಪ್ಯ ವರ್ಣಕಾರರು ಭಾರತದ ಯಾವುದೇ ಇತರ ಪ್ರಕಾರದ ನೀಲಿಗಳಿಗಿಂತ ಬಯಾನಾ ಹಾಗೂ ಸಾರ್ಖೇಜ್‌ಗಳ ನೀಲಿಗೇ ಪ್ರಾಶಸ್ತ್ಯ ನೀಡುತ್ತಿದ್ದರು. ಕೋರಮಂಡಲ್ ನೀಲಿಯನ್ನು ಮುಖ್ಯವಾಗಿ ಸ್ಥಳೀಯ ವರ್ಣಕಾರರರೇ ಉಪಯೋಗಿಸುತ್ತಿದ್ದರು ಹಾಗೂ ಕೆಲವನ್ನು ಪಶ್ಚಿಮ ಹಾಗೂ ಮಧ್ಯ ಏಶಿಯಾಗಳಿಗೆ ರಫ್ತು ಮಾಡುತ್ತಿದ್ದರು. ನೀಲಿಯ ಸ್ಥಳೀಯ ವ್ಯಾಪಾರವು ಕೂಡ ಗಣನೀಯ ಪ್ರಮಾಣದಲ್ಲಿ ಇತ್ತು ಹಾಗೂ ಅದರ ಬಹುಭಾಗವನ್ನು ಕರಾವಳಿ ಹಾಗೂ ಒಳನಾಡಿನ ನೇಕಾರರು ಹಾಗೂ ವರ್ಣಕಾರರು ಬಳಸುತ್ತಿದ್ದರು.[20]

ಹದಿನೇಳನೆಯ ಶತಮಾನದಲ್ಲಿ ಐರೋಪ್ಯ ಕಂಪೆನಿಗಳು ತಮ್ಮ ಕೆಲವು ಬಟ್ಟೆಗಳಿಗೆ ಭಾರತದಲ್ಲೇ ಬಣ್ಣ ಹಾಕಿಸುತ್ತಿದ್ದವು. 1638 ಹಾಗೂ 1639 ರಲ್ಲಿ ವಿಒಸಿಯು, ಆಗ್ರಾದಲ್ಲಿ ಬಟ್ಟೆಗಳಿಗೆ ಬಣ್ಣ ಹಾಕಿಸುವ ಸಲುವಾಗಿ 165 ಹಾಗೂ 157 ಮಣ ( ಸುಮಾರು 8250 ಹಾಗೂ 7850 ಡಚ್ ಪೌಂಡ್‌ಗಳು) ನೀಲಿಯನ್ನು ( ಹೆಚ್ಚಿನದಾಗಿ ಖುರ್ಜಾದಿಂದ) ಆಮದು ಮಾಡಿಕೊಂಡಿತ್ತು.[21] ಇಐಸಿಯು ಕೂಡ ಆಗ್ರಾದಲ್ಲಿ ತನ್ನ ಕೆಲವು ಬಟ್ಟೆಗಳಿಗೆ ಬಣ್ಣ ಹಾಕಿಸುತ್ತಿತ್ತು. ಕಂಪೆನಿಗಳು ಸ್ಥಳೀಯ ವರ್ಣಕಾರರಿಗೆ ಸಂಬಳ ಕೊಟ್ಟು ಅವರಿಗೆ ನೀಲಿ ಹಾಗೂ ಇತರ ಸಾಮಗ್ರಿಗಳನ್ನು ಒದಗಿಸಿ ಕಂಪೆನಿಯ ಅಧಿಕಾರಿಗಳ ಸುಪರ್ದಿನಲ್ಲಿ ಕೆಲಸ ಮಾಡಿಸುತ್ತಿದ್ದರು. ಅಂಥ ಚಟುವಟಿಕೆಗಳಿಂದಾಗಿ ನೀಲಿಗೆ ಹೆಚ್ಚಿದ ಬೇಡಿಕೆಯ ಮಹತ್ವವನ್ನು ಉಪೇಕ್ಷಿಸುವಂತಿಲ್ಲ. ಹದಿನೇಳನೆಯ ಶತಮಾನದ ಉತ್ತರಾರ್ಧ ಹಾಗೂ ಹದಿನೆಂಟನೆಯ ಶತಮಾನಗಳಲ್ಲಿ ಯುರೋಪಿನ ಬೇಡಿಕೆಯ ಹೆಚ್ಚಳ ಹಾಗೂ ತತ್ಪರಿಣಾಮವಾಗಿ ಬಟ್ಟೆ ಉತ್ಪಾದನೆಯ ಹೆಚ್ಚಳದಿಂದಾಗಿ ಸ್ಥಳೀಯವಾಗಿ ನೀಲಿಯ ಬಳಕೆಯೂ ಹೆಚ್ಚಾಗಿರಬಹುದು.[22] ಯುರೋಪಿನಲ್ಲಿ ಹದಿನೇಳನೆಯ

---

[18] William Finch, Early Travels in India, 1583-1619,(ed.) William Foster (Oxford:OUP, 1921), 179.

[19] H.W.van Santen, 'De Vereenigde)Ost-Indische Compagnie in Gujarat hen Hindustan, 1620-1660' (PhD dissertation, Leiden University, 1982).

[20] Raychaudhuri, *Jan Company in Coromandel*, 162-4.

[21] Collectie Geleynssen de Jongh, 117-118, Copie-Negotiejournalen van het comptoir Agra [Copy of the trade journals of the Agra factory], 1 Feb. 1638-31 Jan 1639 and 1 Feb 1639-31 Jan. 1640(not foliated).

[22] ಭಾರತದಿಂದ VOC ಯು ರಫ್ತು ಮಾಡಿದ ಬಟ್ಟೆಗಳ ವಾರ್ಷಿಕ ಸರಾಸರಿ ಮೌಲ್ಯವು 1648-50 ರಲ್ಲಿ f. 0.89 ಮಿಲಿಯನ್ ಇದ್ದದ್ದು 1668-70 ರಲ್ಲಿ f. 3.49 ಮಿಲಿಯನ್ ಹಾಗೂ 1698-1700 ರಲ್ಲಿ f. 8.20 ಮಿಲಿಯನ್‌ಗೆ ಏರಿತು. EIC ಯು ಇಂಗ್ಲೆಂಡ್‌ಗೆ ಮಾಡಿದ ರಫ್ತುಗಳ ವಾರ್ಷಿಕ ಸರಾಸರಿ ಮೌಲ್ಯವು ಕೂಡ ಇದೇ ರೀತಿಯಲ್ಲಿ 1668-70 ರಲ್ಲಿ 0.20 ಮಿಲಿಯನ್ ಪೌಂಡ್‌ನಿಂದ 1698-1700 ರಲ್ಲಿ 0.85 ಮಿಲಿಯನ್ ಪೌಂಡ್ ಹಾಗೂ 1738-40 ರಲ್ಲಿ 1.33 ಮಿಲಿಯನ್ ಪೌಂಡ್‌ಗಳಿಗೇರಿತು. Om Prakash, European Commercial Enterprise in Pre-colonial India ( Cambridge: CUP, 1998), 115, 120 (Tables 4.1 and 4.2), 268.

ಶತಮಾನದ ಅಂತ್ಯ ಹಾಗೂ ಹದಿನೆಂಟನೆಯ ಶತಮಾನಗಳಲ್ಲಿ ಹತ್ತಿ ಮತ್ತು ರೇಷ್ಮೆ ಬಟ್ಟೆಗಳ ಬಳಕೆಯು ಅಭೂತಪೂರ್ವವಾಗಿ ಏರಿಕೆ ಕಂಡದ್ದರಿಂದ ಅದು 'ಕ್ಯಾಲಿಕೋ ಕ್ರೇಝ್' ಎಂಬುದಾಗಿ ಸುಪ್ರಸಿದ್ಧವಾಗಿದೆ.[23] ಆಗ ಬಂಗಾಲವು ಇಂಡಿಯಾದ ಇತರ ಬಟ್ಟೆ ತಯಾರಿಕೆಯ ಪ್ರದೇಶಗಳಿಗಿಂತ ಅತ್ಯಂತ ಹೆಚ್ಚಿನ ಲಾಭವನ್ನು ಕಂಡಿತು. ಭಾರತದಿಂದ ವಿಒಸಿಯ ಸರಾಸರಿ ವಾರ್ಷಿಕ ರಫ್ತಿನ ಮೌಲ್ಯದಲ್ಲಿ ಬಂಗಾಲದ ಪಾಲು 1675-76 ರಲ್ಲಿ 0.31 ಮಿಲಿಯನ್ ಇದ್ದದ್ದು 1698-1700 ರಲ್ಲಿ 2.40 ಮಿಲಿಯನ್ ಹಾಗೂ 1720 ರಲ್ಲಿ 3.5 ಮಿಲಿಯನ್ ಏರಿಕೆಯನ್ನು ಕಂಡಿತು.[24] ಭಾರತದಿಂದ ರಫ್ತಾಗುತ್ತಿದ್ದ ಇಐಸಿಯ ಒಟ್ಟೂ ಸರಕಿನಲ್ಲಿ ಬಂಗಾಲದ ಪಾಲು ಕೂಡ 1668-70 ರಲ್ಲಿ ಶೇಕಡಾ 13 ರಷ್ಟು ಇದ್ದದ್ದು 1758-60 ರಲ್ಲಿ ಶೇಕಡಾ 53 ಕ್ಕೆ ಹೆಚ್ಚಿತು.[25] ಹದಿನೆಂಟನೆಯ ಶತಮಾನದ ಪ್ರಾರಂಭದ ಹೊತ್ತಿಗೆ ಬಂಗಾಲವು ಭಾರತದ ಅತ್ಯಂತ ಮಹತ್ವದ ಬಟ್ಟೆ ಉತ್ಪಾದನೆಯ ಪ್ರದೇಶವಾಗಿ ಹೊರಹೊಮ್ಮಿತು ಹಾಗೂ ಅದು ಯುರೋಪು ಮತ್ತು ಅಮೇರಿಕಾಕ್ಕೆ ಬೇಕಾದ ದೊಡ್ಡ ಪ್ರಮಾಣದ ಹತ್ತಿ ಮತ್ತು ರೇಷ್ಮೆ ಬಟ್ಟೆಗಳನ್ನು ಪೂರೈಸುವ ಸಾಮರ್ಥ್ಯವನ್ನು ಹೊಂದಿತ್ತು. ಆದ್ದರಿಂದ ನೀಲಿಯ ಬಳಕೆಯೂ ಕೂಡ ಹೆಚ್ಚಿತು. ಕೆ.ಎನ್. ಚೌಧುರಿಯವರು ಗುರುತಿಸಿದ ಪ್ರಕಾರ ಭಾರತ ಮತ್ತು ಮಧ್ಯ ಪ್ರಾಚ್ಯದಲ್ಲಿ ನೀಲಿಯ ಬಳಕೆಯು ಈ ಎರಡೂ ಪ್ರದೇಶಗಳಲ್ಲಿ 1660 ರಿಂದ 1760 ರ ನಡುವೆ ಅಭೂತಪೂರ್ವವಾಗಿ ಬೆಳೆದ ಬಟ್ಟೆ ಕೈಗಾರಿಕೆಯ ಕಾರಣದಿಂದ ವರ್ಧಿಸಿತು. [26]

ಹದಿನೆಂಟನೆಯ ಶತಮಾನದ ಅಂತ್ಯದವರೆಗೆ ಬಂಗಾಲವು ಮುಖ್ಯವಾಗಿ ಆಗ್ರಾ, ಅವಧ ಹಾಗೂ ದೆಹಲಿಗಳಿಂದ ನೀಲಿಯನ್ನು ತರಿಸಿಕೊಳ್ಳುತ್ತಿತ್ತು. ಅದಕ್ಕೂ ಪೂರ್ವದಲ್ಲಿ ಈ ಸ್ಥಳಗಳಿಂದ ಪಶ್ಚಿಮ ದಿಕ್ಕಿನ ಗುಜರಾತ್, ಪಶ್ಚಿಮ ಏಶಿಯಾ ಹಾಗೂ ಯುರೋಪಿಗೆ ಹರಿಯುತ್ತಿದ್ದ ನೀಲಿಯು ಈಗ ಸ್ಥಳೀಯ ಬಳಕೆಗಾಗಿ ಬಂಗಾಲಕ್ಕೆ, ಪೂರ್ವ ಮುಖವಾಗಿ ಹರಿಯತೊಡಗಿತು. ಈ ಆಂತರಿಕ ಬೇಡಿಕೆಯಿಂದಾಗಿ ನೀಲಿಯ ಉತ್ಪಾದನೆ ನಿರಂತರವಾಗಿ ನಡೆಯಿತು. ಹದಿನೆಂಟನೆಯ ಶತಮಾನ ಹಾಗೂ ಆನಂತರವೂ ಆಗ್ರಾ ಮತ್ತು ಅವಧ ಪ್ರಾಂತ್ಯಗಳು ನೀಲಿಯನ್ನು ಬಹು ದೊಡ್ಡ ಪ್ರಮಾಣದಲ್ಲಿ ಬೆಳೆಯುವುದನ್ನು ಮುಂದುವರಿಸಿದವು. 1780ರ ಪ್ರಾರಂಭದಲ್ಲಿ ಯಾವಾಗ ಈಸ್ಟ್ ಇಂಡಿಯಾ ಕಂಪೆನಿಯು ತನ್ನ ನೀಲಿ ವ್ಯಾಪಾರಕ್ಕೆ ಪುನಶ್ಚೇತನವನ್ನು ನೀಡಿತೋ ಆಗ, ಪ್ರಾರಂಭದಲ್ಲಿ ಅದು ಲಂಡನ್ನಿಗೆ ರಫ್ತು ಮಾಡುತ್ತಿದ್ದ ಬಹುಭಾಗ ನೀಲಿಯು ಈ ಪ್ರದೇಶಗಳಿಂದಲೇ ಬರುತ್ತಿತ್ತು.

**ಭಾರತದ ನೀಲಿಗೆ ಪಶ್ಚಿಮ ಏಶಿಯಾದ ಬೇಡಿಕೆ**

ಭಾರತದ ನೀಲಿಗೆ ಪಶ್ಚಿಮ ಏಶಿಯಾವು ಪ್ರಮುಖ ಮಾರುಕಟ್ಟೆಯಾಗಿತ್ತು.[27] ಈ ಪ್ರದೇಶದ ಬಗ್ಗೆ, ಹತ್ತರಿಂದ ಹದಿನೈದನೆಯ ಶತಮಾನದವರೆಗಿನ ಪ್ರಾಚೀನ ಅರೇಬಿಕ್ ಹಾಗೂ ಪರ್ಶಿಯನ್ ವರ್ಣನೆಗಳ ಪ್ರಕಾರ ನೀಲಿಯು

---

[23]Beverly Lemire, *Fashion's Favourite:The Cotton Trade and the Consumer in Britain,1660-1800* (Oxford:OUP, 1991)chapter 1.

[24] Prakash, *European Commercial Enterprise in Pre-colonial India*, 203.

[25] *Ibid.*,121

[26] K.N.Chaudhuri, *The Trading World of Asia and the English East India Company, 1660-1760* (Cambridge:CUP, 1978), 334.

[27] ನೀಲಿಯನ್ನು ಮುಖ್ಯವಾಗಿ ನೂಲು ಮತ್ತು ಬಟ್ಟೆಗೆ ಬಣ್ಣ ಹಾಕಲಿಕ್ಕೆ ಉಪಯೋಗಿಸಲಾಗುತ್ತಿತ್ತು.ಅದನ್ನು ತುಂಬಾ ಮಹತ್ವದ ಶೃಂಗಾರ ಸಾಧನವೆಂಬುದಾಗಿ ಕೂಡ ಪರಿಗಣಿಸಲಾಗಿತ್ತು ಹಾಗೂ ಅರಬ್-ಪರ್ಶಿಯನ್ ಜಗತ್ತಿನಲ್ಲಿ ಸ್ತ್ರೀ ಪುರುಷರು ಅದನ್ನು ಅನೇಕ ರೀತಿಯಲ್ಲಿ ಬಳಸುತ್ತಿದ್ದರು. Fatema Soudavar Farmanfarmaian, "Haft Qalam Arayish": Cosmetics in the Iranian World, *Irranian Studies*,

ಭಾರತದಿಂದ ಆಮದಾಗುತ್ತಿದ್ದ ಸರಕುಗಳಲ್ಲಿ ಪ್ರಮುಖವಾದುದಾಗಿತ್ತು. ಹತ್ತನೆಯ ಶತಮಾನದಲ್ಲಿ ಕಾಬೂಲ್ ಪ್ರತಿವರ್ಷ ಭಾರತದಿಂದ ದೊಡ್ಡ ಪ್ರಮಾಣದಲ್ಲಿ ನೀಲಿಯನ್ನು ತರಿಸಿಕೊಂಡು ಮಧ್ಯ ಏಶಿಯಾ ಹಾಗೂ ಪಶ್ಚಿಮ ಏಶಿಯಾಗಳ ವಿಭಿನ್ನ ಭಾಗಗಳಿಗೆ ರಫ್ತು ಮಾಡುತ್ತಿತ್ತು.[28] ಅದರಲ್ಲಿ ಒಂದು ಭಾಗವು ಮೆಡಿಟರೇನಿಯನ್ ಪ್ರದೇಶಕ್ಕೆ, ಅದರಲ್ಲೂ ಪೂರ್ವ ಯುರೋಪಿಗೆ  ಸಾಗಾಟವಾಗುತ್ತಿತ್ತು. ಹದಿನಾಲ್ಕನೆಯ ಶತಮಾನದಲ್ಲಿ ಫ್ಲೋರೆಂಟೈನ್‌ನ ವರ್ಣಕಾರರು ತಮ್ಮ ಬಟ್ಟೆಗಳಿಗೆ ಬಣ್ಣ ಹಾಕಲಿಕ್ಕೆ ಭಾರತೀಯ ನೀಲಿಯನ್ನು ಬಳಸುತ್ತಿದ್ದರೆಂಬುದಾಗಿ ಹೇಳಲಾಗುತ್ತದೆ.[29] ಹದಿನೈದು ಹಾಗೂ ಹದಿನಾರನೆಯ ಶತಮಾನಗಳಲ್ಲಿ ಪರ್ಶಿಯಾ ಹಾಗೂ ಒಟ್ಟೋಮನ್ ಟರ್ಕಿಗಳು ಅರ್ಮೇನಿಯಾ, ಭಾರತ ಹಾಗೂ ಏಶಿಯಾದ ಇತರ ವ್ಯಾಪಾರಿಗಳು ಭಾರತದಿಂದ ತಂದ ನೀಲಿಯನ್ನು ಬಹು ದೊಡ್ಡ ಪ್ರಮಾಣದಲ್ಲಿ ಬಳಸುತ್ತಿದ್ದವು. 1548 ರಲ್ಲಿ ಗುಜರಾತಿನ ಮೂರನೆಯ ಸುಲ್ತಾನ್ ಮುಹಮ್ಮದನು  ತನ್ನ ಆಸ್ಥಾನಿಕರಲ್ಲೊಬ್ಬನಾದ ಅಸಫ್ ಖಾನ್‌ನಿಗೆ 100  ಸುಂಡಾ ಸಾರ್ಖೇಜ್ ನೀಲಿಯನ್ನು ಕಳುಹಿಸಿದ್ದನು. ಅಸಫ್ ಖಾನನು ಆಗ ಸುಲ್ತಾನನ ರಾಣಿವಾಸದ (ಬಹುಶಃ ಹಜಿಸ್) ಜೊತೆಗೆ ಮೆಕ್ಕಾದಲ್ಲಿದ್ದನು ಹಾಗೂ ಆ ನೀಲಿಯನ್ನು ಮಾರಿ ಒಂದು ಹಡಗನ್ನು ಕೊಂಡುಕೊಂಡು ಗುಜರಾತಿಗೆ ವಾಪಸಾಗುವ  ಪ್ರಯಾಣದ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಿತ್ತು. ಈ ಘಟನೆಯು ಮೆಕ್ಕಾ ಹಾಗೂ ಜೆಡ್ಡಾಗಳಲ್ಲಿ ನೀಲಿಯು ಎಷ್ಟು ಬೆಲೆಬಾಳುವ ವಸ್ತುವಾಗಿತ್ತೆಂಬುದನ್ನು ನಿದರ್ಶಿಸುತ್ತದೆ.[30] ಹದಿನಾರನೆಯ ಶತಮಾನದ ಅಂತ್ಯದಲ್ಲಿ ಅಬುಲ್ ಫಜಲ್ ದಾಖಲಿಸುವ ಪ್ರಕಾರ ಭಾರತದಲ್ಲಿ ಬಹಳ ನೀಲಿಯನ್ನು ಬೆಳೆದು ಟರ್ಕಿಗೆ ರವಾನಿಸಲಾಗುತ್ತಿತ್ತು.[31] ಗುಜರಾತಿನ ಅರೇಬಿಕ್ ಹಿಸ್ಟರಿಯು ತಿಳಿಸುವಂತೆ ಹದಿನಾರನೆಯ ಶತಮಾನದ ಅಂತ್ಯಭಾಗದಲ್ಲಿ ಗುಜರಾತಿನ ಗೋಘಾ ಬಂದರಿನಿಂದ  ಹಡಗುಗಳು ಜೆಡ್ಡಾಕ್ಕೆ ದೊಡ್ಡ ಪ್ರಮಾಣದಲ್ಲಿ ನೀಲಿಯನ್ನು ಸಾಗಿಸುತ್ತಿದ್ದವು.[32] ಹದಿನಾರನೆಯ ಶತಮಾನದ ಅಂತ್ಯದವರೆಗೆ ಈ ಮೇಲಿನ ಪ್ರದೇಶಗಳು, ಯುರೋಪಿನಲ್ಲಿ ಭಾರತದ ನೀಲಿಬಣ್ಣ ವ್ಯಾಪಕವಾಗುವವರಗೆ ನೀಲಿಯ ಅತ್ಯಂತ ಪ್ರಮುಖ ಮಾರುಕಟ್ಟೆಗಳಾಗಿದ್ದವು.[33] ಹದಿನಾರನೆಯ ಶತಮಾನದ ಅಂತ್ಯಭಾಗ ಹಾಗೂ ಹದಿನೇಳನೆಯ ಶತಮಾನದ

---

vol.33,nos.3-4 (2000), 285-326; Willem Floor, *Agriculturein Qajar Iran* (Washington DC: Mage Publishers, 2003), Jenny Balfour-Paul, *Indigo*(London:British Museum, 1998).

[28] G,Le Strange, *The Lands of the Eastern Caliphate: Mesopotamia,Persia, and Central Asia from the Moslem Conquest to the time of Timur*(Cambridge:CUP,1905), 349.

[29] 1338 ರಲ್ಲಿ ಫ್ಲೋರೆನ್ಸ್‌ನಲ್ಲಿ 200ಕ್ಕೂ ಹೆಚ್ಚು ಕಮ್ಮಟಗಳಿದ್ದವು. ಅವುಗಳಲ್ಲಿ ವಾರ್ಷಿಕವಾಗಿ 70,000 ದಿಂದ 80,000 ಬಟ್ಟೆಗಳಿಗೆ ಬಣ್ಣ ಹಾಕಲಾಗುತ್ತಿತ್ತು. ಔರ್ಣಕಾರರು ಭಾರತದಿಂದ ತರಿಸಿದ ನೀಲಿ ಬಣ್ಣವನ್ನು ಬಳಸುತ್ತಿದ್ದರು. Ernst Samhaber, *Merchents Make History: How Trade has Influenced the Course of History Throughout the World* (tr.), E. Osers(London:George G. Harrap & Co.,1963), 116.

[30] M.S.Commissariat, *A History of Gujarat, 1297-1573*, vol.I (Bombay: Longmans, Green & Co., 1938), 425-6.  ಮೆಕ್ಕಾದಲ್ಲಿ ನೀಲಿಯನ್ನು  ದುಬಾರಿ ಬೆಲೆಗೆ ಮಾರಾಟಮಾಡಲಾಗುತ್ತಿತ್ತು.(  ನೀಲಿಯ ಪ್ರತೀ ಸುಂಡವೂ ಕೂಡ 200 ಬಂಗಾರದ ನಾಣ್ಯಗಳಷ್ಟು ಬೆಲೆಬಾಳುತ್ತಿತ್ತು) ಏಕೆಂದರೆ ಪೋರ್ಚುಗೀಸರು ಅದನ್ನು ಗುಜರಾಥಿನಿಂದ ಆಮದು  ಮಾಡಿಕೊಳ್ಳುವುದನ್ನು ನಿಲ್ಲಿಸಿದ್ದರು. *ಅದೇ.*

[31] Abul Fazl, *Ain-i-Akbari*, vol. 2 (tr.), H.S. Jarret (Calcatta:Baptist Mission Press, 1891), p. 241.

[32] Abdullah Muhammad bin Omar al-Asafi Ulughkhani, *Zafar ul-Waleh bi Muzaffar ul Alih*, vol. I, (ed.) Sir E. Denison Ross (London: John Murray, 1910), 313.

[33] W.H. Moreland, *From Akbar to Aurangzeb: A Study in Economic History* (London: Macmillan Press, 1923), 108; Balfour-Paul, *Indigo.*

ಆದಿಭಾಗದಲ್ಲಿ ಅಲೆಪ್ಪೋ ಬಹು ಮುಖ್ಯ ವ್ಯಾಪಾರೀಕೇಂದ್ರವಾಗಿದ್ದು, ಬಹುತೇಕ ನೀಲಿಯು ಯುರೋಪಿಗೆ ಅಲ್ಲಿಂದ ರಫ್ತಾಗುತ್ತಿತ್ತು.[34] ಲೆವಾಂಟ್‌ನಲ್ಲಿ ವ್ಯಾಪಾರ ಮಾಡುತ್ತಿದ್ದ ಇಂಗ್ಲಿಷ್ ಮತ್ತು ಫ್ರಂಚ್ ವರ್ತಕರು ಈ ವ್ಯಾಪಾರೀ ಕ್ಷೇತ್ರದಲ್ಲಿ ತುಂಬಾ ಕ್ರಿಯಾಶೀಲರಾಗಿದ್ದರು. ಲಿಸ್ಬನ್ ಹಾಗೂ ಅಮಸ್ಟರ್‌ಡ್ಯಾಂಗಳಲ್ಲಿ ಪೋರ್ಚುಗೀಸರು ಹಾಗೂ ಡಚ್ಚರು ಭಾರತದಿಂದ ಆಮದು ಮಾಡಿಕೊಂಡ ದೊಡ್ಡ ಪ್ರಮಾಣದ ನೀಲಿಯನ್ನೂ ಆಮದು ಮಾಡಿಕೊಳ್ಳುತ್ತಿದ್ದರೂ, ನೀಲಿ ವ್ಯಾಪಾರದಲ್ಲಿ ಲೆವಾಂಟ್ ಎಷ್ಟು ಪ್ರಭಾವಶಾಲಿಯಾಗಿತ್ತೆಂದರೆ ಲಂಡನ್ ಮಾರುಕಟ್ಟೆಯಲ್ಲಿ ನೀಲಿಯ ಬೆಲೆ ಮತ್ತು ಗುಣಮಟ್ಟಗಳನ್ನು ಅಲೆಪ್ಪೋ ನಿರ್ಧರಿಸುತ್ತಿತ್ತು.[35] ಇಐಸಿಯೇ ಸ್ವತಃ ತನ್ನ ಪ್ರಾರಂಭಿಕ ವರ್ಷಗಳಲ್ಲಿ ಲಂಡನ್ನಿನ ಮಾರುಕಟ್ಟೆಗಳಿಗಾಗಿ ಅಲೆಪ್ಪೊ ಹಾಗೂ ಮೋಛಾಗಳಿಂದ ನೀಲಿಯನ್ನು ಖರೀದಿಸುತ್ತಿತ್ತು.[36] ಆನಂತರ ಪೋರ್ಚುಗೀಸರು ಕೇಪ್ ಆಫ್ ಗುಡ್ ಹೋಪ್ ಮೂಲಕ ಯುರೋಪಿಗೆ ನೀಲಿಯನ್ನು ಒಯ್ಯತೊಡಗಿದರು, ಅದನ್ನೇ ಇಐಸಿ ಹಾಗೂ ವಿಒಸಿಗಳು ಕೂಡ ಅನುಸರಿಸಿದವು.

ಪರ್ಶಿಯಾದಲ್ಲೇ ನೀಲಿಗೆ ಸಾಕಷ್ಟು ದೊಡ್ಡ ಪ್ರಮಾಣದ ಬೇಡಿಕೆಯಿತ್ತು. ಹದಿನಾರು ಮತ್ತು ಹದಿನೇಳನೆಯ ಶತಮಾನದಲ್ಲಿ ಭಾರತದಿಂದ ಹೊರ್ಮುಝ್, ಬಂದರ್ ಅಬ್ಬಾಸ್ ಹಾಗೂ ಬಸ್ರಾಗಳಿಗೆ ಆಮದಾದ ನೀಲಿಯ ಬಹುಭಾಗವು ಇರಾನೀಯರ ನೂಲು ಹಾಗೂ ಬಟ್ಟೆಗಳಿಗೆ ಬಣ್ಣಹಾಕಲು ಬಳಕೆಯಾಗುತ್ತಿತ್ತು.[37] ಇರಾನಿನಲ್ಲಿ

---

[34] ವೆನೀಸ್ ಬಹುಶಃ ತನ್ನ ಲೆವಂಟೈನ್ ವ್ಯಾಪಾರ ಸಂಪರ್ಕದಿಂದ ಭಾರತೀಯ ನೀಲಿಯನ್ನು ಪಡೆಯುತ್ತಿತ್ತು. ವೆನೀಸ್‌ನ ವರ್ಣಕಾರರು 1590 ರ ದಶಕದಲ್ಲಿ ಪ್ರಭುತ್ವದ ನಿಷೇಧವಿದ್ದರೂ ಭಾರತದ ನೀಲಿಯನ್ನು ಬಳಸುತ್ತಿದ್ದರು. Archivio di Stato di Venezia, Collegio, Risposte di dentro, filza 10: n. 159 [ Venetian State Archives, Collegio, Risposte di dentro, volume 10, document 159] petition by the dyer's guild, 14 November 1597. ನಾನು, ಈ ಮಾಹಿತಿಯತ್ತ ನನ್ನ ಗಮನವನ್ನು ಸೆಳೆದ ಹಾಗೂ ಈ ಮಹತ್ವಪೂರ್ಣ ಆಕರದ ಪ್ರತಿಲಿಪಿಯನ್ನು ಒದಗಿಸಿದ ಲ್ಯುಕಾ ಮೊಲಾ ಅವರಿಗೆ ಮತ್ತು ಆ ದಾಖಲೆಯನ್ನು ಅನುವಾದಿಸಿಕೊಟ್ಟ ನಿಕ್ ವಿಲ್ಡಿಂಗ್ ಅವರಿಗೆ ಕೃತಜ್ಞನಾಗಿದ್ದೇನೆ.

[35] Moreland, *From Akbar to Aurangzeb*, 109. ನೀಲಿಯ ಒಂದು ಭಾಗವು ಲಿಸ್ಬನ್‌ನಿಂದ ಇಂಗ್ಲೆಂಡಿಗೆ ಮರು ರಫ್ತಾಗುತ್ತಿತ್ತು. ಅದರ ಮೌಲ್ಯವು ಎಷ್ಟೆಂಬುದು ನಿಖರವಾಗಿ ಗೊತ್ತಿಲ್ಲ. K.N.Chaudhuri, *The English East India Company: The Study of an Early Joint-Stock Company, 1600-1640* ( London:Frank Cass & Co., 1965), 174-5. ಲಂಡನ್ ಹಾಗೂ ಖಂಡಾಂತರ ಯುರೋಪಿನ ಮಾರುಕಟ್ಟೆಗೆ ಅಲೆಪ್ಪೋನಿಂದ ನೀಲಿಯು ಎಷ್ಟು ದೊಡ್ಡ ಪ್ರಮಾಣದಲ್ಲಿ ಆಮದಾಗುತ್ತಿತ್ತೆಂದರೆ ಹದಿನೇಳನೆಯ ಶತಮಾನದ ಮೊದಲನೆಯ ಪಾದದಲ್ಲಿ ಅದು EIC ಯ ವ್ಯಾಪಾರಕ್ಕೆ ಪೋರ್ಚುಗೀಸ್ ಹಾಗೂ ಡಚ್ ಆಮದುಗಳಿಗಿಂತ ಹೆಚ್ಚಿನ ಹಾನಿಯನ್ನು ತಂದಿತು. Chaudhuri, *The English East India Company* , 174-5.

[36] John Jourdain, The Journal of John Jourdain, 1608-1617, (ed.), William Foster (Cambridge: Hakluyt Society, 1905), xxv, xliv, 69, 205,207. In 1616, the Company's letter to Surat refers to the practice of buying indigo in Aleppo and re-packing it into square chests 1616 ರಲ್ಲಿ ಕಂಪೆನಿಯಿಂದ ಸೂರತ್‌ಗೆ ಕಳುಹಿಸಲಾದ ಪತ್ರದ ಪ್ರಕಾರ ಅಲೆಪ್ಪೋದಿಂದ ನೀಲಿಯನ್ನು ಖರೀದಿಸಿ ಅದನ್ನು ಇಂಗ್ಲೆಂಡಿನ ಹಡಗಿಗೆ ಹೇರಲು ಮತ್ತೊಮ್ಮೆ ಚೌಕಾಕಾರದ ಪೆಟ್ಟಿಗೆಗಳಲ್ಲಿ ತುಂಬಿಸಲಾಗುತ್ತಿತ್ತು. BL, FRS, 84, company's letter from England, Surat, 1616, f. 90 a.

[37] ಈ ಕಾಲದ ಅನೇಕ ಐರೋಪ್ಯ ಪ್ರವಾಸಿಗರು ಹಾಗೂ EIC ಅಧಿಕಾರಿಗಳು ಉಲ್ಲೇಖಿಸುವ ಪ್ರಕಾರ ಈ ಬಂದರುಗಳು ಭಾರತದಿಂದ ದೊಡ್ಡ ಪ್ರಮಾಣದಲ್ಲಿ ನೀಲಿಯನ್ನು ಆಮದು ಮಾಡಿಕೊಳ್ಳುತ್ತಿದ್ದವು.Willem Floor, The Persian Gulf: A Political and Economic Histroy of Five Port Cities, 1500-1730 ( Washington: Mage, 2006), 59, 14708, 508-9. ನೀಲಿಯನ್ನು ಪುಸ್ತಕಗಳ ಚಿತ್ರಗಳಿಗೂ, ವರ್ಣಚಿತ್ರಗಳಿಗೂ ಹಾಗೂ ಇತರ ವಸ್ತುಗಳಿಗೆ ಬಣ್ಣ ಹಾಕಲಿಕ್ಕೂ ಬಳಸಲಾಗುತ್ತಿತ್ತು. ಹದಿನಾರನೆಯ ಶತಮಾನದ ಅನೇಕ ಪುಸ್ತಕಗಳ ಚಿತ್ರಗಳ ರಾಸಾಯನಿಕ ವಿಶ್ಲೇಷಣೆಯು ಪರ್ಶಿಯಾ ಮತ್ತು ಟರ್ಕಿಯ ಕಲಾಕಾರರು ನೀಲಿಯನ್ನು ಇತರ ಬಣ್ಣಗಳ ಜೊತೆಗೆ ಉಪಯೋಗಿಸಿರುವುದನ್ನು ಖಚಿತಪಡಿಸಿದೆ. Alicia Jurado-Lopez, Omela Demko, Robin J.H. Clark, mtftu David Jacobs, 'Analysis of the palette of a precious 16th century illustrated Turkish manuscript by Raman microscopy', *Journal of Raman Spectroscopy*, vol. 35. no. 2 (2004), 119-24; Robin J.H.Clark and Sigrid Mirabaud, 'Identification of the pigments on a sixteenth century Persian book of poetry by Raman microscopy', *Journal of Raman Spectroscopy*, vol. 37, nos 1-3 (2006), 235-39.

ಉಚ್ಛ್ರಾಯಾವಸ್ಥೆಯಲ್ಲಿದ್ದ ಹತ್ತಿ ಮತ್ತು ರೇಷ್ಮೆ ಬಟ್ಟೆ ಕೈಗಾರಿಕೆಗಳು ಹಾಗೂ ಅಲ್ಲಿ ಗಟ್ಟಿಯಾಗಿ ಬೇರೂರಿದ್ದ ರತ್ನಗಂಬಳಿಗಳನ್ನು ನೇಯುವ ಕೈಗಾರಿಕೆಗಳ ಕಾರಣದಿಂದಾಗಿ ಇಪ್ಪತ್ತನೆಯ ಶತಮಾನದ ಪ್ರಾರಂಭದವರೆಗೂ ಅಲ್ಲಿ ನೀಲಿಗೆ ಬೇಡಿಕೆ ಜಾಸ್ತಿಯಿತ್ತು.[38] ಕಿರ್ಮಾನ್, ಖುಝೆಸ್ತಾನ್, ಬಾಮ್ ಪ್ರಾಂತ್ಯಗಳ ಕೆಲವು ಪ್ರದೇಶಗಳು ನೀಲಿಯನ್ನು ಉತ್ಪಾದಿಸಿದರೂ ಕೂಡ ಅವು ಸ್ಥಳೀಯ ಅಗತ್ಯವನ್ನು ಪೂರೈಸಲು ಸಾಕಾಗುತ್ತಿರಲಿಲ್ಲ, ಹಾಗಾಗಿ ಭಾರತದಿಂದ ನೀಲಿಯ ಆಮದು ಬೃಹತ್ ಪ್ರಮಾಣದಲ್ಲಿ ಮುಂದುವರಿಯಿತು.[39]

1600 ರ ಹೊತ್ತಿಗೆ ಪಶ್ಚಿಮ ಏಶಿಯಾದಲ್ಲಿ ಮೋಛಾವು ಒಂದು ವ್ಯಾಪಾರೀ ಕೇಂದ್ರವಾಗಿ ಬೆಳೆಯಿತು. ಅಲ್ಲಿಗೆ ಎಲ್ಲಾ ಕಡೆಯಿಂದಲೂ ವ್ಯಾಪಾರಿಗಳು ಬರುತ್ತಿದ್ದರು ಹಾಗೂ ಅಲ್ಲಿ ವೈವಿಧ್ಯಮಯ ಸರಕುಗಳು ವಿನಿಮಯವಾಗುತ್ತಿದ್ದವು ಮತ್ತು ವಿವಿಧ ಸ್ಥಳಗಳಿಗೆ ಅದರಲ್ಲೂ ವಿಶೇಷವಾಗಿ ಅಲೆಪ್ಪೋಗೆ ಮರು ರಫ್ತಾಗುತ್ತಿದ್ದವು. ಮೋಛಾದಲ್ಲಿ ನೀಲಿಯು ಹೇರಳವಾಗಿ ದೊರೆಯುತ್ತಿತ್ತು, ನೀಲಿಯನ್ನು ಭಾರತದ, ಅರ್ಮೇನಿಯಾದ, ಪರ್ಶಿಯಾದ ವ್ಯಾಪಾರಿಗಳು ಹಾಗೂ ಯುರೋಪಿನ ಕಂಪೆನಿಗಳು ಅಲ್ಲಿಗೆ ಒಯ್ಯುತ್ತಿದ್ದವು. ಏಶಿಯಾದ ಅನೇಕ ವ್ಯಾಪಾರಿಗಳು ಭೂಮಾರ್ಗದ ಮೂಲಕ ಬಯಾನಾದ ನೀಲಿಯನ್ನು ಸಾಗಿಸುತ್ತಿದ್ದರು, ಆದರೆ ಕೆಲವರು ಕ್ಯಾಂಬೆ ಮತ್ತು ಸೂರತ್‌ನಿಂದ ಪರ್ಶಿಯನ್ ಖಾರಿ ಹಾಗೂ ಕೆಂಪು ಸಮುದ್ರ ಮಾರ್ಗವನ್ನು ಕ್ರಮಿಸುತ್ತಿದ್ದರು. ಅರ್ಮೇನಿಯಾ ಹಾಗೂ ಇತರ ಪ್ರದೇಶಗಳ ವ್ಯಾಪಾರಿಗಳು ಬಯಾನಾ ನೀಲಿಯನ್ನು ಖರೀದಿಸಿ ಅದನ್ನು ಕಾರವಾನ್‌ಗಳ ಮೂಲಕ ಪರ್ಶಿಯಾಕ್ಕೆ ಸಾಗಿಸುತ್ತಿದ್ದರು.[40] ಸಾರ್ಖೇಜ್ ನೀಲಿಯನ್ನು ಮುಖ್ಯವಾಗಿ ಕ್ಯಾಂಬೆ, ಬ್ರೋಚ್ ಹಾಗೂ ಸೂರತ್‌ಗಳಿಂದ ಹಡಗಿನ ಮೂಲಕ ಪಶ್ಚಿಮ ಏಶಿಯಾಕ್ಕೆ ಸಾಗಿಸಲಾಗುತ್ತಿತ್ತು. ರಾಜಕೀಯ ಗಡಿಗಳು ಎಷ್ಟು ಶಾಂತಿಯುತವಾಗಿದ್ದವು ಹಾಗೂ ಕಾರವಾನ್ ಮತ್ತು ಹಡಗುಗಳ ಮಾರ್ಗಗಳು ಎಷ್ಟು ಸುರಕ್ಷಿತವಾಗಿದ್ದವು ಎಂಬುದನ್ನು ಪರಿಗಣಿಸಿ ವ್ಯಾಪಾರಿಗಳ ಆದ್ಯತೆಗಳು ನಿರ್ಧಾರವಾಗುತ್ತಿದ್ದವು. ಉದ್ದಕ್ಕೂ, ಸುರಕ್ಷಿತ ಮಾರ್ಗಕ್ಕಾಗಿ ಹಣ ತೆರುವುದನ್ನು ಒಳಗೊಂಡಂತೆ ಸಾಗಾಟದ ಖರ್ಚು ಹಾಗೂ ಪ್ರಯಾಣದಲ್ಲಿ ಬರಬಹುದಾದ ವಿಪತ್ತುಗಳ ಸಾಧ್ಯತೆಗಳ ಮೇಲೆ, ಲಾಭಾಂಶ ಕುರಿತು ನಡೆಸಿದ ತುಂಬಾ ಎಚ್ಚರಿಕೆಯ ಲೆಕ್ಕಾಚಾರವನ್ನು ಅವರ ನಿರ್ಣಯಗಳು ಆಧರಿಸಿರುತ್ತಿದ್ದವು. ಹದಿನೇಳನೆಯ ಶತಮಾನದ ಪ್ರಾರಂಭದಲ್ಲಿ ಕೋರಮಂಡಲದ ನೀಲಿಯು ಸಾಧಾರಣವಾಗಿ ಸಮುದ್ರಮಾರ್ಗದಿಂದ ಪಶ್ಚಿಮ ಏಶಿಯಾಕ್ಕೆ ಹೋಗುತ್ತಿತ್ತು ಹಾಗೂ ಅದನ್ನು ಮುಖ್ಯವಾಗಿ ಭಾರತದ ಹಾಗೂ ಏಶಿಯಾದ ವ್ಯಾಪಾರಿಗಳು ರಫ್ತು ಮಾಡುತ್ತಿದ್ದರು.[41] 1610 ರಲ್ಲಿ ವಿಒಸಿ ಅಧಿಕಾರಿಗಳು ವರದಿ ಮಾಡಿದ ಪ್ರಕಾರ ಪರ್ಶಿಯಾದ ವ್ಯಾಪಾರಿಗಳು ಮಸುಲಿಪಟ್ನಮ್‌ನಲ್ಲಿ ಅಪಾರ ಪ್ರಮಾಣದ

---

[38] ಹದಿನೇಳನೆಯ ಶತಮಾನದಲ್ಲಿ ಜಾನ್ ಚಾರ್ಡಿನ್ ಗಮನಿಸಿದಂತೆ ಪರ್ಶಿಯಾದ ಬಣ್ಣಗಾರಿಕೆಯು ಯುರೋಪಿಗಿಂತ ಹೆಚ್ಚು ಮುಂದುವರಿದಿತ್ತು. ಹಾಗೂ ಪರ್ಶಿಯನ್ ವರ್ಣಕಾರರು ತಮ್ಮ ಬಟ್ಟೆಗಳಿಗೆ ಬಣ್ಣಹಾಕಲು ಭಾರತೀಯ ನೀಲಿಯನ್ನು ಬಳಸುತ್ತಿದ್ದರು. John Chardin, *The Travels of Sir John Chardin in Persia* (1643-1713), vol.II (tr.) Edm. Lloyd (London: J.Smith, 1720), 303-4. ಇಪ್ಪತ್ತನೆಯ ಶತಮಾನದ ಪ್ರಾರಂಭದವರೆಗೂ ಪರ್ಶಿಯನ್ ವರ್ಣಕಾರರು ತಮ್ಮ ನೂಲುಗಳಿಗೆ ಬಣ್ಣಹಾಕಲು ಭಾರತದಿಂದ ಆಮದುಮಾಡಿಕೊಂಡ ನೈಸರ್ಗಿಕ ನೀಲಿಯನ್ನುಬಳಸುತಿದ್ದರು. A. Cecil Edwards, *The Persian Carpet: A Survey of the Carpet-Weaving Industry of Persia* (London: Duckworth, 1983), 33, 213.

[39] Strange, The Lands of the Eastern Caliphate, 314, 317-18, 320; Edwards, *The Persian Carpet*, 32-3, 213; Jenny Balfour-Paul, *Indigo in the Arab World* (London:Curzon, 1997).

[40] EFI 1634-36, Surat to London, 2 Jan, 1636, p. 138.

[41] Raychaudhuri, *Jan Company in Coromandel*, 162-03.

ನೀಲಿಯನ್ನು ಖರೀದಿಸಿ ಅದನ್ನು ಹೊರ್ಮುಝ್‌ಗೆ ರಫ್ತು ಮಾಡುತ್ತಿದ್ದರು. ಅಲ್ಲಿಂದ ಮುಂದೆ ಬಸ್ರಾ ಹಾಗೂ ಬ್ಯಾಬಿಲೋನ್ ಮೂಲಕ ಅಲೆಪ್ಪೋ ಹಾಗೂ ಪೂರ್ವ ಯುರೋಪಿಗೆ ತೆಗೆದುಕೊಂಡು ಹೋಗುತ್ತಿದ್ದರು.[42]

ಗುಜರಾತ್ ಮತ್ತು ಪಶ್ಚಿಮ ಏಶಿಯಾದ ನಡುವಿನ ನೀಲಿ ವ್ಯಾಪಾರದಲ್ಲಿ ಗುಜರಾತಿಗಳು, ಅರ್ಮೇನಿಯಾದವರು, ಹಾಗೂ ಪರ್ಶಿಯನ್ನರದು ಮೇಲುಗೈಯಾಗಿತ್ತು.[43] ಇಂಗ್ಲಿಷ್ ಹಾಗೂ ಡಚ್ ಕಂಪೆನಿಗಳ ಅಧಿಕಾರಿಗಳು ಮಾಡಿದ ಅನೇಕ ವರದಿಗಳು ತಿಳಿಸುವಂತೆ ಬಯಾನಾ ಮತ್ತು ಸಾರ್ಖೇಜ್‌ಗಳ ನೀಲಿ ಮಾರುಕಟ್ಟೆಯಲ್ಲಿ ಅರ್ಮೇನಿಯನ್ನರು, ಮುಘಲರು, ಪರ್ಶಿಯನ್ನರು ಹಾಗೂ ಬನಿಯಾಗಳು ಪ್ರಬಲ ಸ್ಪರ್ಧಿಗಳಾಗಿದ್ದರು. ಅವರು ನೀಲಿಯ ಅಭಾವವನ್ನು ಸೃಷ್ಟಿಸಿ, ಬೆಲೆಯೇರಿಸಿ ಕಂಪೆನಿಗಳು ತಮಗೆ ಬೇಕಾದ ಗುಣಮಟ್ಟದ ನೀಲಿಯನ್ನು ಖರೀದಿಸಲಾಗದಂತೆ ಮಾಡುತ್ತಿದ್ದರು ಎಂಬುದಾಗಿ ಅಧಿಕಾರಿಗಳು ದೂರುತ್ತಿದ್ದರು. ಕೆಲವೊಮ್ಮೆ ಏಶಿಯಾದ ವ್ಯಾಪಾರಿಗಳು ಪಶ್ಚಿಮ ಏಶಿಯಾಕ್ಕೆ ರಫ್ತು ಮಾಡುತ್ತಿದ್ದ ನೀಲಿಯ ಪ್ರಮಾಣವೇ ಈ ಕಂಪೆನಿಯ ಅಧಿಕಾರಿಗಳ ನಿದ್ದೆಗೆಡಿಸುತ್ತಿತ್ತು. ಉದಾಹರಣೆಗೆ 1628 ರಲ್ಲಿ ಆಗ್ರಾದಲ್ಲಿ ನೀಲಿಯ ಬೆಲೆಯೇರಿಕೆಯಾದಾಗ ಅದಕ್ಕೆ ಅರ್ಮೇನಿಯಾ ವರ್ತಕರು ಹಾಗೂ ಮುಸ್ಲಿಂ ವರ್ತಕರು ಬೃಹತ್ ಪ್ರಮಾಣದ ನೀಲಿಯನ್ನು ( ಸುಮಾರು 6000 ಮಣ) ಖರೀದಿಸಿದ್ದೇ ಕಾರಣವೆಂದು ಇಐಸಿ ಅಧಿಕಾರಿಗಳು ಆರೋಪಿಸಿದರು.[44] 1630 ರಲ್ಲಿ ಅರ್ಮೇನಿಯಾ ಹಾಗೂ ಮುಸ್ಲಿಂ ವರ್ತಕರು ಸಾರ್ಖೇಜ್‌ನ ನೀಲಿಯನ್ನು ಬೃಹತ್ ಪ್ರಮಾಣದಲ್ಲಿ ಖರಿದಿಸಿದಾಗ ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು.[45] 1636 ರಲ್ಲಿ ಏಶಿಯಾದ ವರ್ತಕರು ಬಯಾನಾ ನೀಲಿಯ ಖರೀದಿಗಾಗಿ ಸುಮಾರು 350,000 ರೂಪಾಯಿಗಳಷ್ಟು ಹಣ ತೊಡಗಿಸಿ ಆ ಸರಕಿನ ಅಭಾವವನ್ನು ಸೃಷ್ಟಿಸಿ ಅದರ ಬೆಲೆ ಕೈಗೆಟುಕದಂತೆ ಮಾಡಿದ್ದಾರೆ ಎಂದು ವಿಓಸಿ ಅಧಿಕಾರಿಗಳು ಆತಂಕವನ್ನು ಹೊರಹಾಕಿದ್ದರು.[46] 1639-40 ರಲ್ಲಿ ಪಶ್ಚಿಮ ಏಶಿಯಕ್ಕೆ ಬಯಾನಾ ಹಾಗೂ ಸಾರ್ಖೇಜ್‌ಗಳಿಂದ ಸಮುದ್ರಮಾರ್ಗದ ಮೂಲಕ ರಫ್ತಾದ ನೀಲಿಯೊಂದೇ ಕ್ರಮವಾಗಿ 3120 ಮಣ ( ಸುಮಾರು 156000 ಡಚ್ ಪೌಂಡುಗಳು) ಹಾಗೂ 2580 ಮಣ(82560 ಡಚ್ ಪೌಂಡುಗಳು)ಗಳಷ್ಟಿತ್ತು.[47] ಈ ರೀತಿಯಲ್ಲಿ ಯುರೋಪಿನ ಕಂಪೆನಿಗಳು ಆಗ್ರಾ, ಅಹಮದಾಬಾದ್, ಸೂರತ್ ಹಾಗೂ ಅದನ್ನು ಬೆಳೆಯುವ ಒಳನಾಡಿನ ಇತರ ನೀಲಿ ಮಳಿಗೆಗಳಲ್ಲಿ ಏಶಿಯಾದ ವರ್ತಕರೊಂದಿಗೆ ಸ್ಪರ್ಧಿಸಬೇಕಿತ್ತು.

---

42 VOC 1055, Resoluties, Masulipatnam, 15 June 1610, p. 121.

43 Gopal, *Commerce and Crafts in Gujarat*, 43-6.

44 ಆ ವರ್ಷದಲ್ಲಿ ಅವರು EIC ಮತ್ತು VOC ಹಡಗುಗಳಲ್ಲಿ ಪರ್ಶಿಯಾಕ್ಕೆ 1,500 ಮೂಟೆ (6,000 ಮಣ) ನೀಲಿಯನ್ನು ಹೇರಿದ್ದರೆಂದು ವರದಿಮಾಡಲಾಗಿದೆ. FFI 1624-1629, Surat to London, 21 Dec. 1628, p. 307.

45 EFI 1630-1633, Ahmadabad to Surat, 31, Dec. 1630, pp.125-6.

46 VOC 1122, Directeur and Raad van Surat aan Bevindhebberen, 2 Dec. 1636, f. 518r

47 VOC 1134, Shipping lis,t Surat,1639-40, p. 231. ಸೂರತ್‌ನಲ್ಲಿಯ VOC ಅಧಿಕಾರಿಗಳು ತಯಾರಿಸಿದ ಹಡಗಿನ ಸರಕುಗಳ ಪಟ್ಟಿಯು ಸೂರತ್‌ನಿಂದ ಪಶ್ಚಿಮ ಏಶೀಯಾಕ್ಕೆ ರಫ್ತು ಮಾಡುವ ನೀಲಿಯನ್ನು ತುಂಬಿಕೊಂಡು ಹೊರಡುವ ಎಲ್ಲಾ ಹಡಗುಗಳ ಕುರಿತ ಸಂಪೂರ್ಣ ಮಾಹಿತಿಯನ್ನು ನೀಡುವುದಿಲ್ಲ. ಈ ಹಡಗುಗಳ ಸರಕುಗಳ ಪಟ್ಟೆಯಲ್ಲಿ ಕಂಡುಬರುವ ಅಂಕಿಅಂಶಗಳಿಗಿಂತ ನೀಲಿಯ ಒಟ್ಟೂ ರಫ್ತಿನ ಪ್ರಮಾಣವು ತುಂಬಾ ಹೆಚ್ಚಿರುವ ಸಂಭವವಿದೆ.

ಪಶ್ಚಿಮ ಏಶಿಯಾಕ್ಕೆ ಸಮುದ್ರ ಮಾರ್ಗವನ್ನು ಆಯ್ಕೆಮಾಡಿಕೊಂಡ ಏಶಿಯಾದ ವರ್ತಕರು ಭಾರತ ಅಥವಾ ಯುರೋಪಿನ ಹಡಗುಗಳಲ್ಲಿ ನೀಲಿಯನ್ನು ಹೇರುತ್ತಿದ್ದರು. ಹೆಚ್ಚಾಗಿ ಆ ಆಯ್ಕೆಯನ್ನು ರಾಜಕೀಯ ತಿಕ್ಕಾಟಗಳು ಹಾಗೂ ಯುದ್ಧಗಳಿಂದಾಗಿ ಕಾರವಾನ್‌ಗಳ ಭೂಮಾರ್ಗಗಳು ಅಸುರಕ್ಷಿತವಾದಾಗ ಮಾಡುತ್ತಿದ್ದರು. ಈ ಕಾರಣಕ್ಕೆ ಕಂಪೆನಿಗಳು ತಮ್ಮ ಹಡಗಿನಲ್ಲಿ ಒಂದಷ್ಟು ಟನ್ನುಗಳ ಸ್ಥಳವನ್ನು ಏಶಿಯಾದ ವರ್ತಕರಿಗೆ ಮಾರುತ್ತಿದ್ದವು. ಕಂಪೆನಿಗಳು ಕೂಡ ಪಶ್ಚಿಮ ಏಶಿಯಾಕ್ಕೆ ನೀಲಿಯನ್ನು ರಫ್ತು ಮಾಡುತ್ತಿದ್ದವು ಹಾಗೂ ಸಾಮಾನ್ಯವಾಗಿ ಮಾರುಕಟ್ಟೆಯು ಅನುಕೂಲಕರವಾಗಿದ್ದಾಗ ಒಳ್ಳೇ ಲಾಭವನ್ನೇ ಮಾಡುತ್ತಿದ್ದವು. ಹದಿನೇಳನೆಯ ಶತಮಾನದ ಪೂರ್ವಾರ್ಧದಲ್ಲಿ ಈಸ್ಟ್ ಇಂಡಿಯಾ ಕಂಪೆನಿ ಹಾಗೂ ವಿಓಸಿಗಳು ತಮ್ಮ ನೀಲಿಯಲ್ಲಿ ಒಂದು ಭಾಗವನ್ನು ಪರ್ಶಿಯನ್ ಖಾರಿಯಲ್ಲಿ ಮಾರಾಟಕ್ಕೆ ಕಳುಹಿಸುತ್ತಿದ್ದವು. ಈ ಎರಡೂ ಕಂಪೆನಿಗಳೂ ಈ ರೀತಿಯಲ್ಲಿ ಏಶಿಯಾದ ಆಂತರಿಕ ವ್ಯಾಪಾರದಲ್ಲಿ ತೊಡಗಿಕೊಂಡಿದ್ದವು ಹಾಗೂ ಅವು ಪಶ್ಚಿಮ ಏಶಿಯಾದ ಮಾರುಕಟ್ಟೆಗಳಲ್ಲಿ ನೀಲಿಗೆ ಪ್ರತಿಯಾಗಿ ರೇಷ್ಮೆ, ಬಂಗಾರ ಡ್ಯುಕಾಟ್ (ಯುರೋಪಿನ ಬಂಗಾರದ ನಾಣ್ಯ), ಎಂಟರ ರಯಲ್‌ಗಳು (ಮಧ್ಯ ಏಶಿಯಾದ ನಾಣ್ಯ) ಮುಂತಾದ ಅಮೂಲ್ಯ ಲೋಹಗಳನ್ನು ಪಡೆಯುತ್ತಿದ್ದವು, ಏಕೆಂದರೆ ಅವುಗಳ ವಿನಿಮಯದಿಂದ ಕೋರಮಂಡಲ್ ಕರಾವಳಿ ಹಾಗೂ ಭಾರತದ ಇತರ ಭಾಗಗಳಿಂದ ಬಟ್ಟೆಗಳು ಹಾಗೂ ಇತರ ವ್ಯಾಪಾರೀ ವಸ್ತುಗಳನ್ನು ಅವರು ಖರೀದಿಸಲು ಸಾಧ್ಯವಿತ್ತು. 1640 ರಲ್ಲಿ ಯುರೋಪಿನಲ್ಲಿ ನೀಲಿ ಬೆಲೆ ಇಳಿಕೆಯಾದಾಗ ಕಂಪನಿಗಳಿಗೆ ಪಶ್ಚಿಮ ಏಶಿಯಾವು ಒಂದು ಪರ್ಯಾಯ ಮಾರುಕಟ್ಟೆಯಾಯಿತು.[48] ತತ್ಪರಿಣಾಮವಾಗಿ ಆ ಕಾಲದಲ್ಲಿ ಪಶ್ಚಿಮ ಏಶಿಯಾದ ಮಾರುಕಟ್ಟೆಗಳಿಗೆ, ಅದರಲ್ಲೂ ಪರ್ಶಿಯನ್ ಕೊಲ್ಲಿಗೆ, ಇಐಸಿ ಹಾಗೂ ವಿಓಸಿಗಳ ರಫ್ತುಗಳು ಗಣನೀಯವಾಗಿ ಏರಿಕೆ ಕಂಡವು. 1640-41 ರಲ್ಲಿ ಇಐಸಿಯು 608 ಮಣ ( 33,440 ಪೌಂಡ್) ಬಯಾನಾ ನೀಲಿ ಹಾಗೂ 448 ಮಣ ( 14,336 ಪೌಂಡ್) ಸಾರ್ಖೇಜ್ ನೀಲಿಗಳನ್ನು, ವಿಓಸಿಯು 1,368 ಮಣ (43,776 ಡಚ್ ಪೌಂಡ್) ಸಾರ್ಖೇಜ್ ನೀಲಿಯನ್ನು ಗೊಂಬ್ರೂಮ್‌ಗೆ ರಫ್ತು ಮಾಡಿದವು.[49] 1650 ರ ನಂತರ ಭಾರತದಲ್ಲಿ ನೀಲಿ ಬೆಳೆಯು ಉತ್ಪತ್ತಿಯಲ್ಲಿ ಇಳಿಕೆಯುಂಟಾಗಿ ಕಂಪೆನಿಗೆ ನೀಲಿ ವ್ಯಾಪಾರದಲ್ಲಿ ನಿರಾಸಕ್ತಿ ಹುಟ್ಟಿದ ನಂತರ ಪಶ್ಚಿಮ ಏಶಿಯಾಕ್ಕೆ ಸಾಗಾಟವಾಗುತ್ತಿದ್ದ ನೀಲಿಯ ಪ್ರಮಾಣವೂ ಕುಗ್ಗಿತು. ಆದರೆ ಪರ್ಶಿಯಾವು ನೀಲಿಯ ಒಂದು ಮಹತ್ವದ ಮಾರುಕಟ್ಟೆಯಾಗಿ ಮುಂದುವರಿಯಿತು ಹಾಗೂ ಭಾರತದ, ಪರ್ಶಿಯಾದ, ಅರ್ಮೇನಿಯಾದ ವರ್ತಕರು ಆ ಪ್ರದೇಶದೊಂದಿಗೆ ತಮ್ಮ ನೀಲಿ ವ್ಯಾಪಾರವನ್ನು ಮುಂದುವರಿಸಿದರು. 1652 ರಲ್ಲಿ 7096 ಮಣ ( 331.760 ಡಚ್ಚ್ ಪೌಂಡ್) ಬಯಾನಾ ಮತ್ತು ಸಾರ್ಖೇಜ್‌ಗಳ ನೀಲಿಯು ಪಶ್ಚಿಮ ಏಶಿಯಾಕ್ಕೆ ರಫ್ತಾಯಿತು.[50] ಹದಿನೇಳನೆಯ ಶತಮಾನದ ಉತ್ತರಾರ್ಧದಲ್ಲಿ ಗುಜರಾತ್ ಮತ್ತು ಪರ್ಶಿಯಾದ ನಡುವೆ ನೀಲಿಯು ಪ್ರಮುಖ ವ್ಯಾಪಾರೀ ವಸ್ತುವಾಗಿತ್ತು. ಜಾನ್ ಫ್ರಯರ್ (1672 ರಿಂದ 1681 ರ ವರೆಗೆ ಈಸ್ಟ್

---

[48] 1641 ರಲ್ಲಿ ಇಂಗ್ಲೆಂಡಿನಲ್ಲಿ ಬಯಾನಾ ನೀಲಿಯ ಮಾರಾಟದರವು ಪೌಂಡಿಗೆ 11 ಸೆಂಟ್ ಇದ್ದದ್ದು 7 ಸೆಂಟ್ 6 d ಗೆ ಇಳಿಯಿತು. EFI 1637-41, London to Surat, 29 Nove. 1641, p. 311. ಒಂದು ವರ್ಷದ ನಂತರ VOC ಯು ಯುರೋಪಿಗೆ ರಫ್ತು ಮಾಡಿಕೊಂಡ ಅಪಾರ ಪ್ರಮಾಣದ ನೀಲಿಯಿಂದಾಗಿ ಇಂಗ್ಲೆಂಡ್‌ನಲ್ಲಿ ಅದರ ದರವು ಇಳಿಯಬಹುದು ಎಂಬುದಾಗಿ EIC ಅಧಿಕಾರಿಗಳು ಮತ್ತಷ್ಟು ನಿರೀಕ್ಷಿಸಿದ್ದರು. EFI 1742-45, Surat to London, 17 Jan.1743, p.84.

[49] Dagh-Register, 1640-1641, p. 317; VOC 1134, f.489.

[50] VOC 1188, Shipping List, Surat, 1652, ff. 371r-377v.

ಇಂಡಿಯಾ ಕಂಪೆನಿಯ ಸರ್ಜನ್ ಆಗಿದ್ದವನು) ತಿಳಿಸುವಂತೆ ಹದಿನೇಳನೆಯ ಶತಮಾನದ ಕೊನೆಯ ಪಾದದಲ್ಲಿ ಪರ್ಶಿಯನ್ ಖಾರಿ ಹಾಗೂ ಕೆಂಪು ಸಮುದ್ರದ ಹಡಗುಗಳು ಪ್ರತಿವರ್ಷವೂ ಸೂರತ್‌ನಿಂದ ನೀಲಿ, ಹತ್ತಿ, ಹತ್ತಿ ನೂಲು, ಹಾಗೂ ರೇಷ್ಮೆಗಳನ್ನು ಬೃಹತ್ ಪ್ರಮಾಣದಲ್ಲಿ ಒಯ್ಯುತ್ತಿದ್ದವು.[51] ಹೋವ್‌ಹನ್ನೆಸ್ ಎಂಬ ಅರ್ಮೇನಿಯಾದ ವರ್ತಕನೊಬ್ಬನು ಪಶ್ಚಿಮ ಏಶಿಯಾಕ್ಕೆ ಬೃಹತ್ ಪ್ರಮಾಣದ ನೀಲಿಯನ್ನು ರಫ್ತು ಮಾಡುವ ಕೆಲಸದಲ್ಲಿ ತೊಡಗಿಕೊಂಡಿದ್ದನು. ಅವನು ಬಸ್ರಾಕ್ಕೆ ರವಾನಿಸಿದ ದೊಡ್ಡ ಪ್ರಮಾಣದ ನೀಲಿಯಿಂದ ಶೇಕಡಾ 50 ರಷ್ಟು ಲಾಭವನ್ನು ಗಳಿಸಿದನು.[52] ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದಲ್ಲಿ ನೀಲಿಯ ಪರ್ಯಾಯ ಮೂಲಗಳ ಅಭಾವದಿಂದಾಗಿ ಪರ್ಶಿಯಾ ಮತ್ತು ಪಶ್ಚಿಮ ಏಶಿಯಾದ ಮಾರುಕಟ್ಟೆಗಳು ಭಾರತದಿಂದ ಪೂರೈಕೆಯಾಗುತ್ತಿದ್ದ ನೀಲಿಯನ್ನೇ ಅವಲಂಬಿಸಿಕೊಂಡಿದ್ದವು.

ಇದೇ ಕಾಲದಲ್ಲಿ ಭಾರತದ ನೀಲಿಗೆ ಟರ್ಕಿಯು ಮತ್ತೊಂದು ಪ್ರಮುಖ ಮಾರುಕಟ್ಟೆಯಾಗಿತ್ತು. ಹದಿನೇಳನೆಯ ಶತಮಾನದಲ್ಲಿ ಇಂಗ್ಲಿಷರು ಭಾರತೀಯ ನೀಲಿಯನ್ನು ಲಂಡನ್ನಿನಿಂದ ಈಜಿಪ್ಟ್ ಮತ್ತು ಟರ್ಕಿ ಮಾರುಕಟ್ಟೆಗಳಿಗೆ ಮರು ರಫ್ತು ಮಾಡುತ್ತಿದ್ದರು. ಇದು ಟರ್ಕಿ ಮಾರುಕಟ್ಟೆಯ ಮಹತ್ವವನ್ನು ನಿದರ್ಶಿಸುತ್ತದೆ.[53] ಈ ರೀತಿಯಲ್ಲಿ ಅಲೆಪ್ಪೋ ಕಡೆಗೆ ವಾಪಸು ಬರುತ್ತಿದ್ದ ನೀಲಿಯಿಂದಾಗಿ ಒಟ್ಟೋಮನ್ ಸಾಮ್ರಾಜ್ಯದ ಬಂದರುಗಳಲ್ಲಿ ವ್ಯಾಪಾರ ಮಾಡುತ್ತಿದ್ದ ಏಶಿಯಾದ ವರ್ತಕರಿಗೆ ಪ್ರತಿಕೂಲ ಪರಿಣಾಮಗಳಾಗುತ್ತಿದ್ದವು. ಹದಿನೇಳನೆಯ ಶತಮಾನದ ಅಂತ್ಯದಲ್ಲಿ ಸ್ಮೈರ್ನಾದಲ್ಲಿ ಬಯಾನಾ ನೀಲಿಯೇ ಅತ್ಯಂತ ಉತ್ಕೃಷ್ಟ ಹಾಗೂ ಬೆಲೆಬಾಳುವ ನೀಲಿಯಾಗಿತ್ತು. 1698 ಮತ್ತು 1699 ರಲ್ಲಿ ಅದಕ್ಕೆ ಗ್ವಾಟೆಮಾಲಾದ ನೀಲಿಗಿಂತ ಎರಡರಷ್ಟು ಬೆಲೆ ಇರುತ್ತಿತ್ತು.[54] ಬಹುಶಃ ಈ ಕಾಲದಲ್ಲಿ ಬಯಾನಾ ನೀಲಿಗಿಂತ ಸಾರ್ಖೇಜ್ ನೀಲಿಯನ್ನೇ ಸ್ಮೈರ್ನಾಕ್ಕೆ ಆಮದು ಮಾಡಿಕೊಳ್ಳಲಾಗುತ್ತಿತ್ತು. ಏಕೆಂದರೆ ಅದರ ಬೆಲೆ ಕಡಿಮೆಯಾಗಿತ್ತು ಹಾಗೂ ಬಯಾನಾ ಹಾಗೂ ಗ್ವಾಟೆಮಾಲಾ ನೀಲಿಗಳಿಗಿಂತ ಬಹು ಕಡಿಮೆ ದರಕ್ಕೆ ಮಾರಲ್ಪಡುತ್ತಿತ್ತು.[55] ಸ್ಮೈರ್ನಾ ಮತ್ತು ಟರ್ಕಿಯ ಇತರ ಸ್ಥಳಗಳಲ್ಲಿ ಹಾಗೂ ಅದರಂತೆಯೇ ಆಗ್ನೇಯ ಮೆಡಿಟರೇನಿಯನ್ ಕರಾವಳಿಯ ಇತರ ಪ್ರದೇಶಗಳಲ್ಲಿ ಭಾರತೀಯ ನೀಲಿಯು ಬಹುಶಃ ಗ್ವಾಟೆಮಾಲಾದ ಸೇಂಟ್ ಡೊಮಿಂಗ್‌ನಿಂದ ಬಂದ ಅಮೇರಿಕಾದ ನೀಲಿಗೆ ಸ್ಪರ್ಧೆ ನೀಡುತ್ತಿತ್ತು. ಈ ಬಂದರುಗಳು ಯುರೋಪಿನ ಆಂತರಿಕ

---

[51]John Fryer, *A New Account of East India and Persia in Eight Letters being Nine Years Travel, 1672-1681* (London: R Chiswell, 1968), p.112.

[52]Miels Steensgaard, *Carracks, Caravans and Companies : The Structural Crisis in the European -Asian Trade in the Early 17th Century* (Copenhagen : Andelsbogtrykkeriet, 1973), 26.

[53] Chaudhury, *The English East India Company* , 185-6.

[54]Chambre de Commerce Archives, Marseille, J/400-401, Tarif du des merchandises dentree et sortie Smirne pour le droit du consulat de franco en lonnee, 1698, p.9.

[55]1698ರಲ್ಲಿ ಬೋರ್ಗೋಯ್ಸ್ & ಮೊನ್ನೀ ಎಂಬ ಹೆಸರಿನ ವರ್ತಕ ಸಂಸ್ಥೆಯು ಸ್ಮೈರ್ನಾಕ್ಕೆ ಸಾರ್ಖೆಜ್‌ನಿಂದ 270 ocqueಗಳಷ್ಟು ( ಒಂದು ತೂಕದ ಅಳತೆ) ನೀಲಿಯನ್ನು ಆಮದು ಮಾಡಿಕೊಂಡಿತು ಹಾಗೂ ಅದು ಶೇಕಡಾ ಒಂದೂವರೆಯಷ್ಟು ಸುಂಕವನ್ನು ನೀಡಿತು. Chambre de Commerce Archives, Marseille, J/400, Manifest des merchandises [Manifest of merchandise], Smyrna,1698, p.8. 1699ರಲ್ಲಿ ಸಾಲ್ವಡೊರ್ & ಐಷಾಕ್ ಕಾರ್ಡೆಸೊ ಎಂಬ ಹೆಸ ರಿನ ಕಂಪೆನಿಯು 135 ocqueಗಳಷ್ಟು ಸಾರ್ಖೆಜ್ ನೀಲಿಯನ್ನು ಆಮದು ಮಾಡಿಕೊಂಡಿತು.. J/401, Manifest des merchandises, Smyrna,1698, p.8.

ವ್ಯಾಪಾರೀ ಜಾಲದ ಭಾಗವಾಗಿದ್ದುದರಿಂದ ಯುರೋಪಿನ ವರ್ತಕರು ವಸಾಹತುಗಳಿಂದ ತಂದ ಉತ್ಪಾದನೆಗಳನ್ನು ಮಾರುವ ಸಲುವಾಗಿ ಇವುಗಳಿಗೆ ಆಗಾಗ ಭೇಟಿ ನೀಡುತ್ತಿದ್ದರು.[56]

**ಭಾರತದ ನೀಲಿಗೆ ಯುರೋಪಿನ ಬೇಡಿಕೆ**

***ಪೋರ್ಚುಗೀಸರ ನೀಲಿ ವ್ಯಾಪಾರ***

ಹದಿನೈದನೆಯ ಶತಮಾನ ಹಾಗೂ ಹದಿನಾರನೆಯ ಶತಮಾನದ ಪ್ರಾರಂಭದಲ್ಲಿ ನೀಲಿಯು ಯುರೋಪಿನ ಮಾರುಕಟ್ಟೆಗಳನ್ನು ತಲುಪಿದ್ದೇ ಮೂಲತಃ ಲೆವಾಂಟ್‌ನಿಂದ. 1498 ರಲ್ಲಿ ಪೋರ್ಚುಗೀಸರು ಕೇಫ್ ಆಫ್ ಗುಡ್ ಹೋಪ್ ಬಳಸಿ ಭಾರತಕ್ಕೆ ಜಲಮಾರ್ಗವನ್ನು ಕಂಡುಹಿಡಿದ ನಂತರ ಈ ಸಾಗರಮಾರ್ಗದ ಮೂಲಕ ಯುರೋಪನ್ನು ತಲುಪತೊಡಗಿದ ನೀಲಿಯ ಪ್ರಮಾಣವು ಹೆಚ್ಚಾಗತೊಡಗಿತು. ಮೊದಲು ಪೋರ್ಚುಗೀಸರು, ಆಮೇಲೆ ಇಂಗ್ಲೀಷರು, ಡಚ್ಚರು ಹಾಗೂ ಫ್ರೆಂಚರು ಸ್ವದೇಶಕ್ಕೆ ಮರಳುವ ಹಡಗುಗಳಲ್ಲಿ ದೊಡ್ಡ ಪ್ರಮಾಣದಲ್ಲಿ ನೀಲಿಯನ್ನು ರಫ್ತು ಮಾಡತೊಡಗಿದರು. ಪ್ರಾರಂಭದಲ್ಲಿ ಎಸ್ಟಾಡೋ ಡ ಇಂಡಿಯಾವು ಮುಖ್ಯವಾಗಿ ಕಾಳುಮೆಣಸು ಹಾಗೂ ಸಾಂಬಾರು ಪದಾರ್ಥಗಳಲ್ಲಿ ಆಸಕ್ತಿ ಹೊಂದಿತ್ತು. ಪ್ರಾರಂಭದಲ್ಲಿ ನೀಲಿಯ ಕುರಿತು ಪೋರ್ಚುಗೀಸರ ಆಸಕ್ತಿಯ ಕುರಿತು ಹೆಚ್ಚೇನೂ ತಿಳಿದುಬರುವುದಿಲ್ಲ. ಅವರು ಭಾರತಕ್ಕೆ ಬರುವ ಹೊತ್ತಿಗೆ ಮೆಡಿಟರೇನಿಯನ್ ಜಗತ್ತಿನಲ್ಲಿ ನೀಲಿಯು ವೋಡ್ ಗೆ (ಹಳದಿ ಹೂಬಿಡುವ ಒಂದು ಯುರೋಪಿನ ಸಸ್ಯ) ಪರ್ಯಾಯವೆಂಬುದು ಅದಾಗಲೇ ತಿಳಿದಿತ್ತು. ಪೋರ್ಚುಗೀಸರು ಹೋರ್ಮುಜ್ ಅನ್ನು 1515 ರಲ್ಲಿ ವಶಪಡಿಸಿಕೊಂಡು ನಂತರದ ದಶಕಗಳಲ್ಲಿ ಪಶ್ಚಿಮ ಹಿಂದೂ ಮಹಾಸಾಗರದಲ್ಲಿ ನೆಲೆಯೂರಿದರು. ಆ ಕಾಲದಲ್ಲಿ ಅವರು ಲಿಸ್ಬನ್‌ಗೆ ಒಯ್ಯುತ್ತಿದ್ದ ಸರಕಿನಲ್ಲಿ ನೀಲಿ ಕೂಡ ಸೇರಿರುವಂತೆ ತೋರುತ್ತದೆ. ಹದಿನಾರನೆಯ ಶತಮಾನದ ಮಧ್ಯಭಾಗದಲ್ಲಿ ಪೋರ್ಚುಗೀಸರು ಭಾರತದಿಂದ ಪಶ್ಚಿಮ ಏಶಿಯಾಕ್ಕೆ ಒಯ್ಯುತ್ತಿದ್ದ ವ್ಯಾಪಾರೀ ವಸ್ತುಗಳ ಪಟ್ಟಿಯಲ್ಲಿ ನೀಲಿಯು ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ. ಆದಾಗ್ಯೂ ಯುರೋಪಿಗೆ ರಫ್ತು ಮಾಡುವ ನೀಲಿಯು ಅಲ್ಪಪ್ರಮಾಣದ್ದಾಗಿತ್ತು ಏಕೆಂದರೆ ಯುರೋಪಿನ ವೋಡ್ ಉತ್ಪಾದಕರು ಹಾಗೂ ವರ್ಣಕಾರರಲ್ಲಿ ನೀಲಿಯ ಕುರಿತು ಸಾರ್ವತ್ರಿಕ ಪ್ರತಿರೋಧವಿತ್ತು ಹಾಗೂ ಯುರೋಪಿನ ಕೆಲವು ಪ್ರಭುತ್ವಗಳು ಅದರ ಉಪಯೋಗವನ್ನು ನಿಷೇಧಿಸಿದ್ದವು.[57]

ಆ ಶತಮಾನದಲ್ಲಿಯೇ ಕ್ರಮೇಣವಾಗಿ ಯುರೋಪಿನ ಬಣ್ಣ ಹಾಕುವ ಕೈಗಾರಿಕೆಗಳಲ್ಲಿ ನೀಲಿಯನ್ನು ಸ್ವಾಗತಿಸತೊಡಗಿದರು. ಹಾಗಾಗಿ ಯುರೋಪಿನಲ್ಲಿ ನೀಲಿ ವ್ಯಾಪಾರದ ದೆಸೆ ಸುಧಾರಿಸಿ ಲಾಭ ಹೆಚ್ಚಾಗತೊಡಗಿದ್ದರಿಂದ ಪೋರ್ಚುಗೀಸರು ಭಾರತದಿಂದ ನೀಲಿಯನ್ನು ರಫ್ತುಮಾಡಲು ಪ್ರಾರಂಭಿಸಿದರು. ಆಗ ಅವರಿಗೆ ಪ್ರಮುಖವಾಗಿ ಸಿಗುತ್ತಿದ್ದ ವಾಣಿಜ್ಯ ಬಣ್ಣವು ಅದೊಂದೇ ಆಗಿತ್ತು. ಆದರೆ ಪೋರ್ಚುಗೀಸರು ನೀಲಿಯನು ಉತ್ಪಾದಿಸುತ್ತಿದ್ದ ಗುಜರಾತಿನ ಒಳನಾಡುಗಳು ಮತ್ತು ಮುಘಲ್ ಉತ್ತರ ಭಾರತವನ್ನು ತಲುಪಲು ಅಸಮರ್ಥರಾಗಿದ್ದರು. ಹಿಂದೂ ಮಹಾಸಾಗರದಲ್ಲಿ ನಡೆಯುವ ಸಾಗರ ವ್ಯಾಪಾರವನ್ನು ನಿಯಂತ್ರಿಸಲು ಹಿಂಸೆಯ ಪ್ರಯೋಗ ಹಾಗೂ ಆ ವ್ಯಾಪಾರಕ್ಕೆ ತೆರಿಗೆ ಹೇರುವ ಅವರ ರೀತಿಗಳಿಂದಾಗಿ ಅವರು ಮುಘಲರು ಹಾಗೂ

---

[56]ಸುಂಕ ಠಾಣೆಯಲ್ಲಿದ್ದ ಫ್ರೆಂಚ್ ಅಧಿಕಾರಿಗಳು ಸ್ಮೈರ್ನಾಕ್ಕೆ ಗ್ವಾಟೆಮಾಲಾದಿಂದ ಹೋಗುತ್ತಿದ್ದ ನೀಲಿಯ ಕುರಿತು ವರದಿ ಮಾಡುತ್ತಾರೆ. Ibid.

[57]Jamieson B.Hurry, *The Woad Plant and its Dye* (New Jersey: Augustus M. Kelly, 1973), Chapter xvi.

ಗುಜರಾತಿನ ಮುಘಲ್ ಅಧಿಕಾರಿಗಳ ಶಾಶ್ವತ ವೈರಿಗಳಾಗಿದ್ದರು. ಹಾಗಾಗಿ ಅವರಿಗೆ ನೀಲಿಯನ್ನು ಖರೀದಿಸುವ ಸಲುವಾಗಿ ಆಗ್ರಾ ಹಾಗೂ ಅಹಮದಾಬಾದಿನಲ್ಲಿ ಅಧಿಕೃತವಾದ ಸ್ಥಳ ಹಾಗೂ ವ್ಯವಸ್ಥೆಯನ್ನು ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಅವರಿಗೆ ಹೆಚ್ಚೆಂದರೆ ಕ್ಯಾಂಬೇಯಲ್ಲಿ ಸ್ಥಳೀಯ ವರ್ತಕರು ಪ್ರತಿವರ್ಷ ಬಯಾನಾ ಹಾಗೂ ಸಾರ್ಖೇಜ್‌ಗಳಿಂದ ತಂದು ಮಾರುತ್ತಿದ್ದ ನೀಲಿಯನ್ನು ಖರೀದಿಸಲು ಮಾತ್ರ ಸಾಧ್ಯವಿತ್ತು. ಅದಕ್ಕೆ ಬದಲಾಗಿ ಅವರು ಗೋವಾದಲ್ಲಿ ಅದನ್ನು ಖರೀದಿಸಬಹುದಿತ್ತು, ಅಲ್ಲಿಗೆ ಗುಜರಾತಿನಿಂದ ಬರುವ ಹಡಗುಗಳಲ್ಲಿ ದೊಡ್ಡಪ್ರಮಾಣದ ನೀಲಿ ಹಾಗೂ ಇತರ ವಸ್ತುಗಳನ್ನು ಮಾರಾಟಕ್ಕಾಗಿ ತರುತ್ತಿದ್ದರು.[58] ವಾನ್ ಲಿನ್‌ಶೊಟೆನ್ ತಿಳಿಸುವಂತೆ, ಹದಿನಾರನೆಯ ಶತಮಾನದ ಕೊನೆಯ ಪಾದದಲ್ಲಿ ಪೋರ್ಚುಗಲ್ಲಿನಲ್ಲಿ ನೀಲಿಗೆ ದೊಡ್ಡಪ್ರಮಾಣದ ಬೇಡಿಕೆಯಿತ್ತು ಹಾಗೂ ಎಸ್ಟಾಡೋ ಕಂಪೆನಿಯು ಭಾರತದಿಂದ ಗಣನೀಯ ಪ್ರಮಾಣದಲ್ಲಿ ನೀಲಿಯನ್ನು ರಫ್ತುಮಾಡುತ್ತಿತ್ತು.[59] 1580 ರಿಂದ 1620 ನಡುವಿನ ಪೋರ್ಚುಗೀಸರು ಮತ್ತು ಏಷಿಯಾ ನಡುವಿನ ವ್ಯಾಪಾರದಲ್ಲಿ ನೀಲಿಗೆ ಮಹತ್ವ ಇದ್ದದ್ದನ್ನು ಜೇಮ್ಸ್ ಬೊಯಾಜಿಯಾನ ಅವರ ಅಧ್ಯಯಯನವು ಸ್ಪಷ್ಟವಾಗಿ ತಿಳಿಸುತ್ತದೆ. ಎಸ್ಟಾಡೋ ಹಾಗೂ ಖಾಸಗಿ ವ್ಯಾಪಾರಿಗಳು ಲಿಸ್ಬನ್‌ಗೆ ನೀಲಿಯನ್ನು ದೊಡ್ಡ ಪ್ರಮಾಣದಲ್ಲಿ ಆಮದು ಮಾಡಿಕೊಂಡು ತಾವು ಖರೀದಿಸಿದ್ದಕ್ಕಿಂತಲೂ ನಾಲ್ಕರಿಂದ ಐದು ಪಟ್ಟು ಹೆಚ್ಚಿನ ಬೆಲೆಗೆ ಮಾರುತ್ತಿದ್ದರು.[60] ನೀಲಿಯು ಕೆಲವೊಮ್ಮೆ ಎಲ್ಲ ಸಾಂಬಾರು ಪದಾರ್ಥಗಳಿಗಿಂತಲೂ ಹೆಚ್ಚು ಬೆಲೆಬಾಳುವಂಥದ್ದಾಗಿತ್ತು ಹಾಗೂ ಕ್ರಮೇಣವಾಗಿ ಸಮಸ್ತ ಯುರೋಪಿನ ವೋಡ್ ಕೈಗಾರಿಕೆಯನ್ನು ಮೂಲೆಗುಂಪು ಮಾಡತೊಡಗಿತು.[61] ನೀಲಿ ವ್ಯಾಪಾರದ ಈ ಪ್ರಗತಿಯನ್ನು ಪೂರ್ವಭಾವಿಯಾಗಿ ತಿಳಿದ ಪೋರ್ಚುಗಲ್ಲಿನ ಹ್ಯಾಬ್ಸ್‌ಬರ್ಗ್ ರಾಜನು 1587 ರಲ್ಲಿ ಅದರ ಮೇಲೆ ಏಕಸ್ವಾಮ್ಯವನ್ನು ಸ್ಥಾಪಿಸಿದನು. ತದನಂತರ ಭಾರತದಿಂದ ರಫ್ತಾಗುತ್ತಿದ್ದ ಎಲ್ಲಾ ನೀಲಿಯನ್ನೂ ರಾಜನ ಪರವಾಗಿ ಎಸ್ಟಾಡೋ ಮಾರಾಟಮಾಡುತ್ತಿತ್ತು ಹಾಗೂ ಲಿಸ್ಬನ್ನಿಗೆ ಖಾಸಗಿಯವರ ರಫ್ತುಗಳಿಗೆ ಅನುಮತಿ ನಿರಾಕರಿಸಲಾಯಿತು. ಈ ಏಕಸ್ವಾಮ್ಯವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಯಿತು. ಲಿಸ್ಬನ್ನಿಗೆ ಬಂದ ಸರಕುಗಳಲ್ಲಿದ್ದ ಎಲ್ಲಾ ಪೆಟ್ಟಿಗೆಗಳು ಹಾಗೂ ಮೂಟೆಗಳನ್ನೂ ಸುಂಕಸಾಲೆಯಲ್ಲಿ ಪರೀಕ್ಷಿಸಿ ಅವುಗಳಲ್ಲಿ ಕಾಳುಮೆಣಸು, ಸಾಂಬಾರು ಪದಾರ್ಥಗಳು ಅಥವಾ ನೀಲಿಯಂಥ ಏಕಸ್ವಾಮ್ಯದ ಸರಕುಗಳಿಲ್ಲದಿದ್ದರೆ ಮಾತ್ರ ಅವುಗಳನ್ನು ಒಳಬಿಡಲಾಗುತ್ತಿತ್ತು. ಆದಾಗ್ಯೂ ಪ್ರತಿವರ್ಷ ಗೋವಾದಿಂದ ಲಿಸ್ಬನ್ನಿಗೆ ಖಾಸಗಿಯಾಗಿ ನೀಲಿಯನ್ನು ರಫ್ತು ಮಾಡುವುದು ಮುಂದುವರೆಯಿತು.

ಖಾಸಗಿ ವ್ಯಾಪಾರಿಗಳಿಂದ ರಫ್ತಾದ ನೀಲಿಯ ಕುರಿತು ಬೊಯಾಜಿಯಾನನು ನೀಡುವ ಲೆಕ್ಕವನ್ನು ಗಮನಿಸಿದರೆ ಹದಿನಾರನೆಯ ಶತಮಾನದ ಅಂತ್ಯದೊತ್ತಿಗೆ ನೀಲಿಯ ಮೇಲಿನ ಏಕಸ್ವಾಮ್ಯವು ಗಣನೀಯ ಪ್ರಮಾಣದಲ್ಲಿ ದುರ್ಬಲವಾಗಿತ್ತು. ಸಾಂಬಾರು ಪದಾರ್ಥಗಳ ಮೇಲಿನ ಏಕಸ್ವಾಮ್ಯದಂತೇ ನೀಲಿ ವ್ಯಾಪಾರದ ಏಕಸ್ವಾಮ್ಯವು ಕೂಡ

---

[58] Gopal, *Commerce and Crafts in Gujarat*, 83-4.

[59] Van Linschoten, The Voyage of Jan Huyghen van Linschoten, pp.229-30. 1580 ಮತ್ತು1590 ರ ನಡುವಿನ ಕೆಲವು ವರ್ಷಗಳಲ್ಲಿ ನೀಲಿಯ ರಫ್ತುಗಣನೀಯವಾಗಿದ್ದವು.

[60] James C. Boyajian, Portuguese Trade in Asia under the Habsburgs, 1580-1640 (Baltimore: Johns Hopkins, 1993), 45-6.

[61] Jenny Balfour-Paul, ' India's Trade in Indigo: Its Ups and Downs' in Rosemary Crill (ed.), Textiles from India: The Global Trade (Calcutta:Seagull Books, 2005), 361. ಕೆಲವೊಮ್ಮೆ ಖಾಸಗಿ ಹಡಗುಗಳ ಸಾಗಣೆಯ 'ದ್ರೋಗಗಳ'( ನೀಲಿಯನ್ನು ಒಳಗೊಂಡಂತೆ ಸಾಂಬಾರು ಪದಾರ್ಥ) ಮುಕ್ಕಾಲು ಪಾಲು ನೀಲಿಯೇ ಆಗಿರುತ್ತಿತ್ತು.

ಖಾಸಗಿ ವ್ಯಾಪಾರಿಗಳಿಂದ ಲಿಸ್ಬನ್ನಿಗೆ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದ್ದ ರಫ್ತಿನಿಂದ ದುರ್ಬಲಗೊಂಡಿರುವ ಸಾಧ್ಯತೆಯಿದೆ. ಹದಿನೇಳನೆಯ ಶತಮಾನದಲ್ಲಿ ಪೋರ್ಚುಗೀಸ್ ವರ್ತಕರು ಖಾಸಗಿಯಾಗಿ ಲಿಸ್ಬನ್ನಿಗೆ ಸ್ವಲ್ಪ ನೀಲಿಯನ್ನು ರಫ್ತು ಮಾಡುತ್ತಿದ್ದರು. ಟಿನೊಕೊ ಡ ಕಾರ್ವೆಲ್ಹೊ ಎಂಬುವನು ಒಬ್ಬ ವರ್ತಕನಾಗಿದ್ದು ಗೋವಾ ಲಿಸ್ಬನ್ ವ್ಯಾಪಾರದಲ್ಲಿ ಸಕ್ರಿಯನಾಗಿದ್ದನು. ಅವನ ವಾರ್ಷಿಕ ರಫ್ತುಗಳಲ್ಲಿ ನೀಲಿ ಕೂಡ ಇತ್ತು.[62] 1649ರಲ್ಲಿ ಪೋರ್ಚುಗೀಸ್ ವರ್ತಕರು 100 ಬಹರ್( 48000 ಪೌಂಡ್‌ಗಳು) ನೀಲಿಯನ್ನು ಲಿಸ್ಬನ್ನಿಗೆ ಕಳುಹಿಸಿದರು ಹಾಗೂ ಯುರೋಪಿನ ಸರಕು ಸಾಗಣೆ ಹಡಗುಗಳಲ್ಲಿ, ಕರಾಕ್ ಹಾಗೂ ಗೆಲ್ಲಿಯೊನ್ ಗಳಲ್ಲಿ ತುಂಬಿ ಲಿಸ್ಬನ್ನಿಗೆ ಕಳುಹಿಸುತ್ತಿದ್ದ ವಾಪಾರಿ ವಸ್ತುಗಳಲ್ಲಿ ನೀಲಿ ಕೂಡ ಒಂದು ಸರಕಾಗಿತ್ತು.[63]

ಹದಿನೇಳನೆಯ ಶತಮಾನದ ಪ್ರಾರಂಭದಲ್ಲಿ ಏಶಿಯಾದ ಸಮುದ್ರದಲ್ಲಿ ಪೋರ್ಚುಗೀಸರ ರಾಜಕೀಯ ಹಾಗೂ ವಾಣಿಜ್ಯದ ಪ್ರಾಧಾನ್ಯತೆಗೆ ಅವರದೇ ಯುರೋಪಿನ ಉತ್ತರ ದೇಶಗಳಿಂದ ಸವಾಲುಗಳು ಹೆಚ್ಚತೊಡಗಿದವು. ಏಶಿಯಾದ ಪೋರ್ಚುಗೀಸ್ ಹಡಗುಗಳ ಮೇಲೆ ನೌಕಾಪಡೆ ಹಾಗೂ ಸೈನ್ಯಪಡೆಗಳಿಂದ ಉಗ್ರವಾದ ದಾಳಿಗಳು ನಡೆಯತೊಡಗಿದವು. ಕಾಳುಮೆಣಸು, ಸಾಂಬಾರ ಪದಾರ್ಥ ಹಾಗೂ ನೀಲಿಯ ಮೇಲಿನ ಅವರ ಏಕಸ್ವಾಮ್ಯವು ಇಐಸಿ ಹಾಗೂ ವಿಒಸಿಗಳ ಬೃಹತ್ ಪ್ರಮಾಣದ ನೀಲಿ ವ್ಯಾಪಾರದಿಂದಾಗಿ ಮೂಲೆಗುಂಪಾಯಿತು.[64] ಡಚ್ಚರು ಉತ್ಕೃಷ್ಟ ಸಾಂಬಾರು ಪದಾರ್ಥಗಳು ಹಾಗೂ ಸ್ವಲ್ಪ ಮಟ್ಟಿಗೆ ಕಾಳುಮೆಣಸಿನ ಮೇಲೆ ಏಕಸ್ವಾಮ್ಯವನ್ನು ಸ್ಥಾಪಿಸಿದರೆ ಇಂಗ್ಲೀಷರು ತಮ್ಮ ಗಮನವನ್ನು ನೀಲಿ ವ್ಯಾಪಾರದ ಮೇಲೆ ಕೇಂದ್ರೀಕರಿಸಿದ್ದರಿಂದ ಪೋರ್ಚುಗೀಸರಿಗೆ ಸಿಕ್ಕಿದ್ದೇ ಸೀರುಂಡೆ ಅಂತ ತೃಪ್ತಿಪಟ್ಟುಕೊಳ್ಳುವಂತೆ ಮಾಡಿತು. ಗುಜರಾತಿನಲ್ಲಿ ಪೋರ್ಚುಗೀಸರು ಖರೀದಿಸುತ್ತಿದ್ದ ನೀಲಿಯು ಇನ್ನೂ ಗಣನೀಯ ಪ್ರಮಾಣದಲ್ಲಿ ಇದ್ದುದರಿಂದ ಡಚ್ ಹಾಗೂ ಬ್ರಿಟಿಷ್ ಕಂಪೆನಿಗಳು ಅವರು ಭಾರತ ಹಾಗೂ ಯುರೋಪಿನ ನೀಲಿ ಮಾರುಕಟ್ಟೆಯನ್ನು ಅಸ್ಥಿರಗೊಳಿಸುವ ಶಕ್ತಿಯುಳ್ಳ ಖರೀದಿದಾರರು ಎಂಬುದಾಗಿ ಗ್ರಹಿಸಿದವು. 1613 ರಲ್ಲಿ ಇಐಸಿಯು ಅಹಮದಾಬಾದಿನ ಅಧಿಕಾರಿಗಳು ಸಂತೋಷದಿಂದ ತಿಳಿಸಿದ ವಾರ್ತೆಯ ಪ್ರಕಾರ ಆ ವರ್ಷ ಪೋರ್ಚುಗೀಸ್ ಹಡಗುಗಳು ಸೂರತ್‌ಗೆ ಬರದ ಕಾರಣ ಅಲ್ಲಿ ನೀಲಿಯ ಬೆಲೆಯು ಮಣಕ್ಕೆ 18 ರೂಪಾಯಿಗಳಿಂದ 14 ರೂಪಾಯಿಗಳಿಗೆ ಕುಸಿದಿತ್ತು.[65] 1613-15 ರಲ್ಲಿ ಮುಘಲರ ಜೊತೆಗಿನ ವಿರಸದಿಂದಾಗಿ ಪೋರ್ಚುಗೀಸರಿಗೆ ಗುಜರಾತಿನಿಂದ ನೀಲಿ ಹಾಗೂ ಬಟ್ಟೆಗಳನ್ನು ಖರೀದಿಸಲು ಕಷ್ಟವಾಗಿತ್ತು. ಇದರ ಜೊತೆಗೆ ಆಂಗ್ಲರ ಹಾಗೂ ಡಚ್ಚರ ನೌಕಾ ದಾಳಿಗಳ ಕಾರಣದಿಂದ ಕೇಪ್ ಮಾರ್ಗದಲ್ಲಾದ ಹಡಗುಗಳ ನಾಶವು ಪೋರ್ಚುಗೀಸರ ವ್ಯಾಪಾರದ ಅವನತಿಯನ್ನು ತೀವ್ರಗೊಳಿಸಿದವು.[66] 1620 ರ ವೇಳೆಗೆ ಗುಜರಾತ್ ಮತ್ತು ಗೋವಾಗಳಿಂದ ಪೋರ್ಚುಗೀಸರು ಮಾಡುತ್ತಿದ್ದ ನೀಲಿ (ಬಟ್ಟೆಗಳು ಕೂಡ) ರಫ್ತುಗಳು ಗಣನೀಯ ಪ್ರಮಾಣದಲ್ಲಿ ಕ್ಷೀಣಿಸಿದವು.

---

[62] *ಅದೇ*., 98.

[63] *Generale Missiven*, vol. II, 1639-1655, p. 379; *Generale Missiven*, vol.III, 1655-1674, p. 80.

[64] M.N.Pearson, *Merchants and Rulers in Gujarath: The Response to the Portuguese in the Sixteenth Century* (Berkley: University of California Press, 1976).

[65] BL, East India Company Correspondence with the East, 1, East India Company Original Correspondence, doc. No. 117, Ahmadabad, 9 Nov. 1613, ff. 198b-199a.

[66] Boyajian, Portuguese Trade in Asia, 130.

ಪಶ್ಚಿಮ ಭಾರತದಿಂದ ಪೋರ್ಚುಗೀಸರು ರಫ್ತು ಮಾಡುತ್ತಿದ್ದ ನೀಲಿಯ ಪ್ರಮಾಣವನ್ನು ಅಂಕಿ ಅಂಶಗಳಲ್ಲಿ ಗುರುತಿಸಲಿಕ್ಕೆ ಸೂಕ್ತ ದತ್ತಾಂಶಗಳು ಲಭ್ಯವಿಲ್ಲ. ಆಗೀಗ ನಡೆದ ಅಂದಾಜುಗಳು ಹಾಗೂ ಕೆಲವು ವರ್ಣನೆಗಳಿಂದ ವ್ಯಕ್ತವಾಗುವ ಪ್ರಕಾರ ಹದಿನೇಳನೆಯ ಶತಮಾನದ ಪ್ರಾರಂಭದಲ್ಲಿ ಅವರ ನೀಲಿ ಖರೀದಿಯು ಹೇಳಿಕೊಳ್ಳುವಷ್ಟು ನಿಕೃಷ್ಟವಾಗಿರಲಿಲ್ಲ. ಥಾಮಸ್ ಬೆಸ್ಟ್ ಅವರು ಕ್ಯಾಂಬೇಯಲ್ಲಿನ ಪೋರ್ಚುಗೀಸರ ಬೃಹತ್ ಪ್ರಮಾಣದ ವ್ಯಾಪಾರದ ಕುರಿತು ಬರೆಯುತ್ತಾ ತಿಳಿಸುವುದೇನೆಂದರೆ, ಅವರು ಆ ಬಂದರಿನ ಅತ್ಯಂತ ದೊಡ್ಡ ಸರಕನ್ನು ಖರೀದಿಸಿ 200 ಕ್ಯಾರಾಕ್ ಹಾಗೂ ಗಲಿಯೊನ್‌ಗಳಲ್ಲಿ ತುಂಬಿಕೊಂಡು ಪೋರ್ಚುಗಲ್‌ಗೆ ಒಯ್ಯುತ್ತಿದ್ದರು. ಈ ವ್ಯಾಪಾರದಲ್ಲಿ ನೀಲಿಯು ಗಣನೀಯ ಪ್ರಮಾಣದಲ್ಲಿ ಇದ್ದಿರಬಹುದು. ಇಐಸಿ ಹಾಗೂ ವಿಒಸಿಗಳು ಸೂರತ್‌ನಲ್ಲಿ ಗಟ್ಟಿಯಾಗಿ ತಳವೂರಿ ಅದರ ವಿಶಾಲ ಒಳನಾಡುಗಳ ಸಂಪರ್ಕವನ್ನು ಸಾಧಿಸುವವರೆಗೆ ಹಾಗೂ ತದನಂತರವೂ ಕೂಡ ಪೋರ್ಚುಗೀಸರು ಯುರೋಪಿಗೆ ನೀಲಿಯನ್ನು ಪೂರೈಕೆ ಮಾಡುವ ಪ್ರಮುಖ ವ್ಯಾಪಾರಿಗಳಾಗಿದ್ದರು. ಉದಾಹರಣೆಗೆ 1617-18 ರಲ್ಲಿ ಸೂರತ್‌ನಲ್ಲಿದ್ದ ವಿಒಸಿ ಅಧಿಕಾರಿಗಳು ವರದಿಮಾಡಿದ ಪ್ರಕಾರ ಪೋರ್ಚುಗೀಸರು ಸುಮಾರು 5000 ಮೂಟೆ (20,000 ಮಣ) ಸಾರ್ಖೇಜ್ ನೀಲಿಯನ್ನು ಲಿಸ್ಬನ್ನಿಗೆ ರಫ್ತು ಮಾಡುವ ಉದ್ದೇಶದಿಂದ ಖರೀದಿಸಿದ್ದರು.[67] ಇದು ಖಂಡಿತವಾಗಿಯೂ ಅತಿಶಯೋಕ್ತಿಯೇ ಸರಿ. ಆದರೆ ಅದು ಹದಿನೇಳನೆಯ ಶತಮಾನದ ಪ್ರಾರಂಭದಲ್ಲಿ ಪೋರ್ಚುಗೀಸರು ಒಯ್ಯುತ್ತಿದ್ದ ನೀಲಿಯ ಪ್ರಮಾಣವನ್ನು ಸೂಚಿಸುತ್ತದೆ.

ಹದಿನೇಳನೆಯ ಶತಮಾನದ ಮೊದಲ ಮೂರು ದಶಕಗಳಲ್ಲಿ ಗೋವಾದಿಂದ ಪೋರ್ಚುಗಲ್ ಹಾಗೂ ಗುಜರಾತಿನ ನಡುವಿನ ವ್ಯಾಪಾರವು ವೇಗವಾಗಿ ಇಳಿಯಿತು. ಡಚ್ ಈಸ್ಟ್ ಇಂಡಿಯಾ ಕಂಪೆನಿಯ ಗುಜರಾತಿನ ಅಧಿಕಾರಿಯಾದ ಪಿಯೆತೆರ್ ವಾನ್ ಡೆನ್ ಬ್ರೊಯೆಕೆ ಎಂಬವನು ತಿಳಿಸುವಂತೆ ಮೊದಲು ಕ್ಯಾಂಬೆ ಮತ್ತು ಸೂರತ್ತಿಗೆ 200 ರಿಂದ 300 ಫಸ್ತ್ ಎಂಬ ಸಣ್ಣ ಹಡಗುಗಳು ಪ್ರತಿವರ್ಷ ಬರುತ್ತಿದ್ದವು. ಆದರೆ 1621 ರಲ್ಲಿ ಕೇವಲ 50 ರಿಂದ 60 ಹಡಗುಗಳು ಬಂದಿದ್ದವು. ಅವುಗಳು ಹೊತ್ತು ತಂದಿದ್ದ ಸರಕುಗಳು ಕೂಡ ಸಣ್ಣ ಮೌಲ್ಯದ್ದಾಗಿದ್ದವು.[68] ಪಲ್ಸೀರ್ಟ್ ಕೂಡ ಕ್ಯಾಂಬೆಯ ಜೊತೆಗಿನ ವ್ಯಾಪಾರದ ಅವನತಿ ಕುರಿತು ವ್ಯಥೆಪಡುತ್ತಾನೆ. ಅವನು ತಿಳಿಸುವ ಪ್ರಕಾರ 1626 ರಲ್ಲಿ ಕೇವಲ 40 ವರ್ತಕ ಫಸ್ತ್‌ಗಳು ತೀರ ಕಡಿಮೆ ಬೆಲೆಯ ಅಲ್ಪ ಪ್ರಮಾಣದ ಸರಕುಗಳನ್ನು ಹೊತ್ತು ತಂದಿದ್ದವು ಹಾಗೂ ಅದು ಕ್ಯಾಂಬೆ ಮತ್ತು ಇಡೀ ಗುಜರಾತಿನ ವ್ಯಾಪಾರ ಕುಸಿತಕ್ಕೆ ಕಾರಣವಾಯಿತು.[69] ಎಸ್ತಾಡೋದ ಆಡಳಿತ ಕೇಂದ್ರವಾದ ಗೋವಾದಿಂದ ಪೋರ್ಚುಗೀಸರು ಮಾಡಿದ ವ್ಯಾಪಾರದ ಕುರಿತಂತೆ ಮೈಕೆಲ್ ಪಿಯರ್‌ಸನ್‌ನ ಅಧ್ಯಯನವು ಹದಿನೇಳನೆಯ ಶತಮಾನದ ಪ್ರಾರಂಭದಲ್ಲಿ ವ್ಯಾಪಾರವು ಒಮ್ಮಿಂದೊಮ್ಮೆಗೇ ಕ್ಷೀಣವಾಗುವುದನ್ನು ಸ್ಪಷ್ಟವಾಗಿ

---

[67] *The Dutch Factories in India* [hereafter DFI], *1617-1623: A Collection of Dutch East India Company Documents Pertaining to India* (ed.) Om Prakash (New Delhi: Munshiram Manoharlal, 1984), 62. 1616-18 ರ ನಡುವೆ ಪೋರ್ಚುಗೀಸರು 37,002 ಕಿಲೋಗ್ರಾಂ (ಸುಮಾರು 74,000 ಪೌಂಡ್‌ಗಳು) ನೀಲಿಯನ್ನು ಲಿಸ್ಬನ್ನಿಗೆ ರಫ್ತು ಮಾಡಿದ್ದರು. Afzal Ahmad, *Portuguese Trade and Socio-Economic Change on the Western Coast of India, 1600-1663* ( New Delhi: D.K. Publishers, 2000), 151.

[68] DFI 1617-23, pp.151, 155, 235; M.N.Pearson, "Goa-Based Seaborne Trade: 17th-18th Centuries' , in idem, *The World of Indian Ocean, 1500-1800* ( Aldershot: Ashgate Variorum, 2005), chapter III, 167.

[69] Francisco Pelsaert, *De Geschriften van Francisco Pelsaert over Mughal Indie, 1627: Kroniek en Remonstrantie* [ the writings of Francisco Pelsaert about Mughal India: chronicle and remonstrance], (eds.) D.H.A. Kolff and H.W. van Santen, ('s Gravenhage: Martinus Nijhoff, 1979), p. 265.

ತೋರಿಸುತ್ತದೆ. ಗೋವಾ ಮತ್ತು ಗುಜರಾತಿನ ನಡುವಿನ ವ್ಯಾಪಾರವು 1600 ರಲ್ಲಿ 2 ಮಿಲಿಯನ್ ಕ್ರುಝಾಡೋಗಳು (ಅಥವ 2.6.ಮಿಲಿಯನ್ ಕ್ಸೆರಾಫಿನ್‌ಗಳು) ಇದ್ದದ್ದು 1635 ರಲ್ಲಿ 150,000 ಕ್ಸೆರಾಫಿನ್‌ಗಳಿಗೆ ಇಳಿಯಿತು.[70] ಸ್ವಾಭಾವಿಕವಾಗಿ ಅವರ ನೀಲಿ ರಫ್ತಿನ ಮೇಲೂ ಅದು ಪ್ರತಿಕೂಲ ಪರಿಣಾಮವನ್ನು ಉಂಟುಮಾಡಿರಬಹುದು. 1620 ರ ನಂತರ ಇಐಸಿ ಮತ್ತು ವಿಒಸಿಗಳು ಗುಜರಾತಿನ ನೀಲಿ ಮಾರುಕಟ್ಟೆಗಳಲ್ಲಿ ಪೋರ್ಚುಗೀಸರನ್ನು ತಮ್ಮ ಪ್ರಬಲ ವೈರಿಗಳೆಂಬಂತೆ ನೋಡಲಿಲ್ಲ. ತದನಂತರದ ಕಾಲದಲ್ಲಿ ಲಭ್ಯವಾಗುವ ಮಾಹಿತಿಗಳು ಸೂಚಿಸುವಂತೆ ಲಿಸ್ಬನ್‌ಗೆ ಈ ಸರಕನ್ನು ಮಧ್ಯಂತರದಲ್ಲಿ ತೀರಾ ಮಿತಗೊಳಿಸಿ ಹಡಗಿನಲ್ಲಿ ಹೇರಲಾಗುತ್ತಿತ್ತು. 1630 ರಲ್ಲಿ ಪೋರ್ಚುಗೀಸರು 325 ಕ್ವಿಂಟಲ್ (ಸುಮಾರು 36.400 ಪೌಂಡ್‌ಗಳು) ನೀಲಿಯನ್ನು ರಫ್ತು ಮಾಡಿದರು. ಇದು ಆ ವರ್ಷದಲ್ಲಿ ಅವರು ಮಾಡಿದ ರಫ್ತಿನ ಒಟ್ಟೂ ಬೆಲೆಯ ಶೇಕಡಾ 11.5 ಇತ್ತು.[71]

ಈ ಕುಸಿತವು ಯುರೋಪಿನ ನೀಲಿ ಮಾರುಕಟ್ಟೆಯ ಬದಲಾವಣೆಯ ಚಲನಶೀಲತೆಯನ್ನು ಕೂಡ ಪ್ರತಿಫಲಿಸುತ್ತದೆ. ಇಂಗ್ಲಿಷರು ಹಾಗೂ ಡಚ್ಚರು ತಮ್ಮ ಹಡಗುಗಳಿಗೆ ಬಯಾನಾ, ಸಾರ್ಖೇಜ್ ಹಾಗೂ ಕೋರಮಂಡಲ್‌ಗಳ ಉತ್ತಮ ಗುಣಮಟ್ಟದ ನೀಲಿಯನ್ನು ಬೃಹತ್ ಪ್ರಮಾಣದಲ್ಲಿ ಹೇರುತ್ತಿದ್ದುದು ಯುರೋಪಿನಲ್ಲಿ ಪೋರ್ಚುಗೀಸರ ಮಾರಾಟ ಹಾಗೂ ಲಾಭಾಂಶಗಳ ಮೇಲೆ ಪರಿಣಾಮ ಬೀರಿತು. ಅಷ್ಟಕ್ಕೂ ಭಾರತದಿಂದ ಲಿಸ್ಬನ್ನಿಗೆ ಆಮದುಮಾಡಿಕೊಂಡ ನೀಲಿಯ ಬಹುಭಾಗವನ್ನು ಅದರ ಪ್ರಮುಖ ಮಾರುಕಟ್ಟೆಯಾದ ವಾಯುವ್ಯ ಯುರೋಪಿಗೆ ಮರು ರಫ್ತು ಮಾಡಲಾಗುತ್ತಿತ್ತು.[72] ಇಐಸಿ ಮತ್ತು ವಿಒಸಿಗಳು ಕೇಪ್ ಮೂಲಕ ಯಾವಾಗ ಆಮದು ಮಾಡಿಕೊಳ್ಳಲು ಪ್ರಾರಂಭಿಸಿದವೋ ಆಗ ಪೋರ್ಚುಗೀಸರು ಖಂಡಾಂತರದ ಯುರೋಪಿನ ನೀಲಿ ಮಾರುಕಟ್ಟೆಗಳ ಮೇಲೆ ತಮ್ಮ ಹಿಡಿತ ಕಳೆದುಕೊಂಡರು. ಹದಿನೇಳನೆಯ ಶತಮಾನದಲ್ಲಿ, ಅದರಲ್ಲೂ ಅದರ ಉತ್ತರಾರ್ಧದಲ್ಲಿ, ಅಮೇರಿಕಾದಿಂದ ಗಣನೀಯ ಪ್ರಮಾಣದಲ್ಲಿ ನೀಲಿಯ ಆಮದಾಗತೊಡಗಿದಾಗ ಪೋರ್ಚುಗೀಸರು ಲಿಸ್ಬನ್ನಿಗೆ ಆಮದು ಮಾಡಿಕೊಳ್ಳುತ್ತಿದ್ದ ನೀಲಿಯ ಮೇಲೂ ಅದರ ಪ್ರತಿಕೂಲ ಪರಿಣಾಮಗಳಾದವು.

**ಇಐಸಿ ಮತ್ತು ವಿಒಸಿಗಳ ನೀಲಿ ವ್ಯಾಪಾರ.**

ಹದಿನೇಳನೆಯ ಶತಮಾನದ ಪ್ರಾರಂಭದಲ್ಲಿ ಇಐಸಿ ಮತ್ತು ವಿಒಸಿಗಳು ಭಾರತದ ಜೊತೆಗೆ ತಮ್ಮ ವಾಣಿಜ್ಯ ಸಂಪರ್ಕವನ್ನು ಆರಂಭಿಸುವ ವೇಳೆಗಾಗಲೇ ಯುರೋಪಿನಲ್ಲಿ ನೀಲಿಯ ಬಳಕೆಯು ವ್ಯಾಪಕವಾಗಿತ್ತು ಹಾಗೂ ವರ್ಣಕಾರರು ಅದರ ಉತ್ತಮ ಗುಣಮಟ್ಟ ಮತ್ತು ಮಾಸದಿರುವ ಗುಣವನ್ನು ಗುರುತಿಸಿದ್ದರು. ಅದು ಬಹುಬೇಗ ವೋಡ್‌ನ ಸ್ಥಾನವನ್ನು ತುಂಬತೊಡಗಿದ್ದರಿಂದ ಅದಕ್ಕೆ ಯುರೋಪಿನಲ್ಲಿ ಬೇಡಿಕೆ ಏರತೊಡಗಿತ್ತು. ಯುರೋಪಿನಲ್ಲಿ ವ್ಯಾಪಾರೀ ಸರಕುಗಳ ಸಾಪೇಕ್ಷ ಮೌಲ್ಯಗಳು ಬದಲಾಗಿದ್ದೂ ಅದರ ಬೇಡಿಕೆಗೆ ವರವಾಯಿತು. ಕೆ..ಎನ್ ಚೌಧುರಿಯವರು ಗುರುತಿಸಿದಂತೆ, 1600 ರ ಹೊತ್ತಿಗೆ ಏಶಿಯಾದ ಆಮದುಗಳಲ್ಲೆಲ್ಲ ಅತ್ಯಂತ ಮಹತ್ವವನ್ನು

---

[70] Pearson, 'Goa-based Seaborne Trade', 164-5. ಒಂದು ಕ್ರುಝಾಡೋವು 1.3. ಕ್ಸೆರಾಫಿನ್‌ಗಳಿಗೆ ಸಮನಾಗಿತ್ತು.

[71] A.R.Disney, *Twilight of the Pepper Empire:Portuguese Trade in Southwest India in the Early Seventeenth Century* (Cambridge, Mass: Harvard University Press, 1978), 113-14. ಲಿಸ್ಬನ್‌ನಲ್ಲಿ1630ರಲ್ಲಿ ನೀಲಿ ವ್ಯಾಪಾರದಿಂದ ಗಳಿಸಿದ ಲಾಭಗಳು ಶೇಕಡಾ 116 ರಿಂದ 126 ರಷ್ಟು ಇದ್ದವು.

[72] Chaudhuri, *The English East India Company*, 174.

ಹೊಂದಿದ ಕಾಳು ಮೆಣಸು ಯುರೋಪಿನಲ್ಲಿ ತನ್ನ ಬೆಲೆಯನ್ನು ಸಾಪೇಕ್ಷವಾಗಿ ಕಳೆದುಕೊಂಡಿತ್ತು. ಅದಕ್ಕೆ ಬದಲಾಗಿ ನೀಲಿ ಹಾಗೂ ಭಾರತದ ಬಟ್ಟೆಗಳು (ಮುಖ್ಯವಾಗಿ ಕ್ಯಾಲಿಕೋಗಳು) ಹೆಚ್ಚು ಲಾಭದಾಯಕವಾಗಿದ್ದವು.[73] ಅಂದಮೇಲೆ ಯುರೋಪಿನ ಲಾಭಬುಡುಕ ಕಂಪೆನಿಗಳು ವ್ಯಾಪಕವಾದ ಬೇಡಿಕೆಯಿದ್ದ ನೀಲಿಯತ್ತ ತಮ್ಮ ಲಕ್ಷ್ಯವನ್ನು ಹರಿಸಿದ್ದುದರಲ್ಲಿ ಆಶ್ಚರ್ಯವೇನಿಲ್ಲ. ಬ್ರಿಟನ್ ಹಾಗೂ ಡಚ್ ಗಣರಾಜ್ಯಗಳಿಗೆ ದೊಡ್ಡ ಪ್ರಮಾಣದಲ್ಲಿ ಭಾರತದ ನೀಲಿಯನ್ನು ರಫ್ತು ಮಾಡುತ್ತಿರುವಾಗ, ಯುರೋಪ್ ಮೂವತ್ತು ವರ್ಷಗಳ ಯುದ್ಧದಲ್ಲಿ (1618-1648) ಸಿಲುಕಿದ್ದಾಗ ನೀಲಿಗೆ ಬೇಡಿಕೆ ಹೆಚ್ಚತೊಡಗಿತ್ತು. ಈ ಯುದ್ಧ ಕಾಲದಲ್ಲಿ ಅಟ್ಲಾಂಟಿಕ್ ಸಾಗರದಾಚೆಗಿನ ಐರೋಪ್ಯ ವಸಾಹತುಗಳಿಂದ ಬರುತ್ತಿದ್ದ ನೀಲಿಯ  ಪೂರೈಕೆಯು ನಿಂತುಹೋಗಿ ಏಶಿಯಾದ ನೀಲಿಯು ಆ ಜಾಗವನ್ನು ತುಂಬಿತು. ಹಾಗಾಗಿ 1620 ರಿಂದ 1650 ರಲ್ಲಿ ಭಾರತದಿಂದ ಯುರೋಪಿಗೆ ರಫ್ತಾಗುತ್ತಿದ್ದ ನೀಲಿಯ ಪ್ರಮಾಣವು ತನ್ನ ಗರಿಷ್ಠ ಮಟ್ಟವನ್ನು ತಲುಪಿತು (ಟೇಬಲ್ 3.1).

ಇಐಸಿ ಮತ್ತು ವಿಒಸಿಗಳು ಭಾರತದಿಂದ ಬಹುದೊಡ್ಡ ಪ್ರಮಾಣದಲ್ಲಿ ನೀಲಿಯನ್ನು ರಫ್ತು ಮಾಡಲು ಶಕ್ತವಾದವು ಹಾಗೂ ಪೋರ್ಚುಗೀಸರು ಮತ್ತು ಲೆವಾಂಟ್ ಕಂಪೆನಿಗೆ  ಈ ವ್ಯಾಪಾರದಲ್ಲಿ ನಿರ್ಣಾಯಕ ಸವಾಲು ಎಸೆದರು, ಅದಕ್ಕೆ  ಬಹುಮುಖ್ಯ ಕಾರಣವೆಂದರೆ ಅವರು ನೀಲಿಯ ಉತ್ಪಾದನೆಯಾಗುತ್ತಿದ್ದ ಒಳನಾಡುಗಳ ಜೊತೆಗೆ ವ್ಯಾಪಾರೀ ಸಂಪರ್ಕ ಏರ್ಪಡಿಸಿಕೊಂಡಿದ್ದರು. ಇಐಸಿಯು 1608 ರಲ್ಲಿ ಗುಜರಾತಿಗೆ ಬಂದಾಗಿನಿಂದ  ಬಯಾನಾ ಮತ್ತು ಸಾರ್ಖೇಜ್ ನೀಲಿಯನ್ನು ಪಶ್ಚಿಮ ಭಾರತದ ತನ್ನ ಪ್ರಧಾನ ಕಛೇರಿಯಾದ ಸೂರತ್‌ನಿಂದ ಇಂಗ್ಲೆಂಡಿಗೆ ದೊಡ್ಡ ಪ್ರಮಾಣದಲ್ಲಿ ರಫ್ತು ಮಾಡುತ್ತಿತ್ತು. ವಿಒಸಿಯು ಕೋರಮಂಡಲ್ ಕರಾವಳಿಯಲ್ಲಿ ನೀಲಿಯನ್ನು ಖರೀದಿಸುತ್ತಿತ್ತು ಹಾಗೂ 1618 ರ ನಂತರ ಅದು ಸೂರತ್‌ನಿಂದ ಮಾಡುತ್ತಿದ್ದ  ರಫ್ತುಗಳಲ್ಲಿ ಬಯಾನಾ ಹಾಗೂ ಸಾರ್ಖೇಜ್ ನೀಲಿಯು ಮುಖ್ಯವಾಗಿತ್ತು. 1620 ರ ವೇಳೆಗೆ ಇಂಗ್ಲಿಷ್ ಮತ್ತು ಡಚ್ ಕಂಪೆನಿಗಳು ಭಾರತದಲ್ಲಿ ನೀಲಿಯನ್ನು ಖರೀದಿಸುವ ಎರಡು ಅತ್ಯಂತ ಪ್ರಮುಖ ಕಂಪೆನಿಗಳಾಗಿ ಹೊರಹೊಮ್ಮಿದ್ದವು. ಅವೆರಡರಲ್ಲಿ ಪ್ರತಿಯೊಂದಕ್ಕೂ ಅದರದೇ ಆದ ಪ್ರತ್ಯೇಕ ಅನುಕೂಲತೆಗಳಿದ್ದವಾದರೂ  ವ್ಯಾಪಾರ ಮಾಡುವ ಸಂದರ್ಭದಲ್ಲಿ ಸಮಾನವಾದ ಸಮಸ್ಯೆಗಳನ್ನು ಅವು ಎದುರಿಸಿದವು. ಇಬ್ಬರೂ ಯುರೋಪಿನಲ್ಲಿ ಬಳಕೆದಾರರ ಬೇಡಿಕೆಯ ಮಿತಿಗಳಿಂದ ಹಾಗೂ ಭಾರತದಲ್ಲಿ ಪೂರೈಕೆಯ ಅನಿಶ್ಚಿತತೆಯಿಂದ ಸಮಾನವಾದ ತೊಂದರೆ ಅನುಭವಿಸಬೇಕಿತ್ತು ಹಾಗೂ ಆ ಸವಾಲುಗಳಿಗೆ ಅವರಿಬ್ಬರ ಪ್ರತಿಕ್ರಿಯೆಯಲ್ಲೂ ಕೆಲವು ಸಾಮಾನ್ಯ ಲಕ್ಷಣಗಳಿದ್ದವು.  ಅತ್ಯುತ್ತಮ ಗುಣಮಟ್ಟದ ನೀಲಿಯನ್ನು ಅತೀ ಕಡಿಮೆ ಬೆಲೆಗೆ ಖರೀದಿಸುವ ಸಾಮರ್ಥ್ಯದ ಮೇಲೆ ತಮ್ಮ ಯಶಸ್ಸು ನಿಂತಿದೆ ಎಂಬುದು ನೀಲಿಯ ವ್ಯಾಪಾರದಲ್ಲಿ ತೊಡಗಿಕೊಂಡಿದ್ದ ಕಂಪೆನಿಗಳು ಹಾಗೂ ವರ್ತಕರಿಗೆ ಮನದಟ್ಟಾಗಿತ್ತು.  ಖರೀದಿದಾರರ ನಡುವಿನ ಪೈಪೋಟಿಯಿಂದಾಗಿ ಭಾರತದಲ್ಲಿ ಆಗಾಗ್ಗೆ ನೀಲಿಯ ಬೆಲೆ ಏರುತ್ತಿತ್ತು, ಹಾಗೂ ಇತರ ಮೂಲಗಳಿಂದ ದೊಡ್ಡ ಪ್ರಮಾಣದ ನೀಲಿಯ ಪೂರೈಕೆಯಾದರೆ ಯುರೋಪಿನ ಮಾರುಕಟ್ಟೆಯಲ್ಲಿ ಅದರ ಬೆಲೆ ಇಳಿಯುತಿತ್ತು. ಕಂಪೆನಿಗಳು ಅಂಥ ಸಂಭವನೀಯ ಅಥವಾ ವಾಸ್ತವಿಕ ಅಪಾಯಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಬೇಕಿತ್ತು ಹಾಗೂ ಇವೆರಡರಲ್ಲಿ ಯಾವ ಅಪಾಯವೂ ಎದುರಾಗದಂತೆ ತಂತ್ರವನ್ನು ರೂಪಿಸಬೇಕಿತ್ತು. ಆನಂತರ ಮೂರು ದಶಕಗಳ ಕಾಲ  ಬಯಾನಾ ಮತ್ತು ಸಾರ್ಖೇಜ್ ಮಾರುಕಟ್ಟೆಗಳಲ್ಲಿ

[73] ಅದೇ, 21.

ಪ್ರತಿಯೊಬ್ಬರೂ ಮತ್ತೊಬ್ಬರ ಜೊತೆಗೆ ಪೈಪೋಟಿ ನಡೆಸಿದರು ಹಾಗೂ ಅಗತ್ಯಬಿದ್ದಾಗ ಒಬ್ಬರು ಮತ್ತೊಬ್ಬರಿಗೆ ಸಹಕರಿಸಿದರು. ನೀಲಿ ಮಾರುಕಟ್ಟೆಯಲ್ಲಿ ಅವರ ಚಟುವಟಿಕೆಗಳು ಹಾಗೂ ಪರಸ್ಪರರ ಬಗೆಗಿನ ಅವರ ವರ್ತನೆಗಳು ಹೆಚ್ಚಿನದಾಗಿ ಏಶಿಯಾದಲ್ಲಿ ಅವರ ವಾಣಿಜ್ಯಾಸಕ್ತಿಗಳು, ಯುರೋಪಿನಲ್ಲಿ ಆಂಗ್ಲರ ಹಾಗೂ ಡಚ್ಚರ ರಾಜಕೀಯ ಸಂಬಂಧಗಳು ಹಾಗೂ ಭಾರತ ಮತ್ತು ಯುರೋಪಿನಲ್ಲಿನ ರಾಜಕೀಯ-ಆರ್ಥಿಕ ಬೆಳವಣಿಗೆಗಳನ್ನು ಅವಲಂಬಿಸಿದ್ದವು.

ಪ್ರಾರಂಭದಿಂದಲೂ ಡಚ್ ಈಸ್ಟ್ ಇಂಡಿಯಾ ಕಂಪೆನಿಯ ನಿರ್ದೇಶಕರು (ಸೆವೆಂಟೀನ್ ಹೀರೆನ್‌ಗಳು) ಏಶಿಯಾದಿಂದ ಯುರೋಪಿನ ಮಾರುಕಟ್ಟೆಗಳಿಗೆ ಸಾಂಬಾರು ಪದಾರ್ಥಗಳು, ಬಟ್ಟೆಗಳು, ನೀಲಿ ಹಾಗೂ ಇತರ ಅನೇಕ ಸರಕುಗಳನ್ನು ಖರೀದಿಸುವ ಆಸಕ್ತಿಯನ್ನು ಹೊಂದಿದ್ದರು.[74] ಪ್ರತೀ ವರ್ಷವೂ ಅವರು ಏಶಿಯಾದಲ್ಲಿದ್ದ ವಿಒಸಿಯ ಅಧಿಕಾರಿಗಳಿಗೆ ಈ ಸರಕುಗಳನ್ನು ಖರೀದಿಸಲು ಸಾಧ್ಯವಾಗುವಂತೆ ಅಗಾಧ ಪ್ರಮಾಣದ ಬಂಡವಾಳವನ್ನು ನೀಡುತ್ತಿದ್ದರು. ವಿಒಸಿಯ ಅಧಿಕಾರಿಗಳು ಏಶಿಯಾಕ್ಕೆ ಬಂದ ಕೆಲಕಾಲದಲ್ಲೇ ಏಶಿಯಾದೊಳಗೇ ಏಶಿಯಾದ ಸರಕುಗಳನ್ನು ಮಾರಾಟ ಮಾಡಿದರೆ ಲಾಭವಾಗುವ ಸಾಧ್ಯತೆಯಿದೆ ಎಂಬುದನ್ನು ಗ್ರಹಿಸಿದರು. ಅದು ಕಂಪೆನಿಗೆ ದೊರಕಿದ ಪ್ರಾರಂಭಿಕ ಬಂಡವಾಳವನ್ನು ತೊಡಗಿಸುವ ಅತ್ಯಂತ ಲಾಭದಾಯಕ ಮಾರ್ಗವೆಂದು ಅವರು ಯೋಚಿಸಿದರು. ಏಶಿಯಾದ ಆಂತರಿಕ ವ್ಯಾಪಾರವು ಏಶಿಯಾದ ಸರಕುಗಳನ್ನು ಕಡಿಮೆ ದರದಲ್ಲಿ ಖರೀದಿಸಲು ಅಥವಾ ಅದರ ಕಂಪೆನಿಯ ಬೃಹತ್ ಆಡಳಿತದ ವೆಚ್ಚವನ್ನು ಭರಿಸಲು ಸಹಾಯಮಾಡುತ್ತದೆ ಎಂಬುದಾಗಿ ಅವರು ಲೆಕ್ಕಹಾಕಿದ್ದರು. ಈಸ್ಟ್ ಇಂಡೀಸ್‌ನಲ್ಲಿ ಕಾಳುಮೆಣಸು ಹಾಗೂ ಉತ್ತಮ ಮಸಾಲೆಗಳನ್ನು ಒಳಗೊಂಡಂತೆ ಇತರ ವ್ಯಾಪಾರಿ ಸರಕುಗಳ ಜೊತೆ ಭಾರತೀಯ ಬಟ್ಟೆಗಳನ್ನು ವಿನಿಮಯ ಮಾಡಿದಾಗ ತುಂಬಾ ಲಾಭವಾಗುವುದರಿಂದ ಕಂಪೆನಿಯ ಈ ವ್ಯಾಪಾರ ಯೋಜನೆಯಲ್ಲಿ ಭಾರತೀಯ ಬಟ್ಟೆಗಳು ವ್ಯಾಪಾರೀ ಸರಕಾಗಿ ನಿರ್ಣಾಯಕ ಸ್ಥಾನವನ್ನು ಹೊಂದಿದ್ದವು. ಅದಕ್ಕೆ ಪ್ರೋತ್ಸಾಹವನ್ನು ನೀಡುವುದಷ್ಟೇ ವಿಒಸಿಯ ಅಧಿಕಾರಿಗಳು ಮಾಡಬೇಕಾಗಿದ್ದ ಕೆಲಸವಾಗಿತ್ತು.[75] ಅದಕ್ಕಾಗಿ ಅವರು ಕೋರಮಂಡಲ್ ಮತ್ತು ಗುಜರಾತಿನಲ್ಲಿ ಪ್ರಾಥಮಿಕವಾಗಿ ಬಟ್ಟೆಯನ್ನು ಖರೀದಿಸಲು ಧನಸಹಾಯವನ್ನು ಹೆಚ್ಚಿಸಿದರು. ಬಟಾವಿಯಾದ ಉಚ್ಚ ಸರ್ಕಾರವು ಭಾರತದಲ್ಲಿದ್ದ ತನ್ನ ಅಧಿಕಾರಿಗಳಿಗೆ ನಿರ್ದೇಶನ ನೀಡಿ ಅವರಿಗೆ ಲಭ್ಯವಿರುವ ಬಂಡವಾಳವನ್ನು ಮೊತ್ತಮೊದಲು ಈಸ್ಟ್ ಇಂಡೀಸ್, ಬಟ್ಟೆಯನ್ನು ಖರೀದಿಸಲು ವೆಚ್ಚಮಾಡಬೇಕು ಎಂದು ತಿಳಿಸಿತ್ತು. ಹಾಗೂ ಬಟಾವಿಯಾಕ್ಕೆ ಬೇಕಾದ ವೆಚ್ಚವನ್ನು ಮಾಡಿ ಹಣವೇನಾದರೂ ಮಿಕ್ಕಿದಲ್ಲಿ ಆಗ ನೀಲಿಯೇ ಮುಂತಾದ ಇತರ ಸರಕುಗಳನ್ನು ಖರೀದಿಸಬಹುದು ಎಂಬುದಾಗಿ ನಿರ್ದೇಶಿಸಿತ್ತು.

ಕೋರಮಂಡಲ್ ಕರಾವಳಿಯಲ್ಲಿದ್ದ ವಿಒಸಿಯ ಅಧಿಕಾರಿಗಳು ಬಟಾವಿಯಾದ ನಿರ್ದೇಶನಗಳನ್ನು ಪಾಲಿಸಿ ತಮ್ಮಲ್ಲಿದ್ದ ಬಂಡವಾಳವನ್ನು ಮೊದಲು ಬಟ್ಟೆಗಳ ಖರೀದಿಗಾಗಿ ವೆಚ್ಚ ಮಾಡುತ್ತಿದ್ದರು. ಅದರೊಂದಿಗೆ ಸಾಮಾನ್ಯವಾಗಿ ತಮ್ಮ ದೇಶದ ಮಾರುಕಟ್ಟೆಗಾಗಿ ಸ್ವಲ್ಪ ನೀಲಿಯನ್ನೂ ಖರೀದಿಸುತ್ತಿದ್ದರು. ಕೋರಮಂಡಲದ ನೀಲಿಯ ಗುಣಮಟ್ಟ

---

74 ಹೀರೆನ್ 17 ಅಥವಾ ಹದಿನೇಳು ಮಹನೀಯರು ಡಚ್ ರಿಪಬ್ಲಿಕ್‌ನಲ್ಲಿ ಕಂಪೆನಿಯ ಅತ್ಯುಚ್ಚ ಆಡಳಿತ ಸಮಿತಿಯಾಗಿದ್ದರು. ಅವರು ಅಮ್‌ಸ್ಟರ್‌ಡಂ, ಡೆಲ್ಫ್ಟ್, ರೊಟೆರ್ಡಂ, ಮಿಡ್ಲಬರ್ಗ್, ಹೂರ್ನ್, ಎಂಕ್ವಿಝೆನ್ ಛೇಂಬರ್‌ಗಳ ಪ್ರತಿನಿಧಿಗಳಾಗಿದ್ದರು.

75 Prakash, *European Commercial Enterprise in Pre-Colonial India*, 92.

ಉತ್ತಮವೂ ಇರಲಿಲ್ಲ ಅಥವಾ ಉತ್ತರ ಭಾರತ ಹಾಗೂ ಪಶ್ಚಿಮ ಭಾರತಕ್ಕೆ ಹೋಲಿಸಿದರೆ ಅಷ್ಟು ವಿಫುಲವಾಗಿಯೂ ಇರಲಿಲ್ಲ. ಆದರೆ ಸೂರತ್ ಅಥವಾ ಅದಕ್ಕೆ ಅಧೀನವಾದ ಅಹಮದಾಬಾದ್ ಹಾಗೂ ಆಗ್ರಾ ಫ್ಯಾಕ್ಟರಿಗಳಲ್ಲಿದ್ದ ವಿಒಸಿ ಅಧಿಕಾರಿಗಳಿಗೆ ಬಟಾವಿಯಾದ ಆದೇಶವನ್ನು ಪಾಲಿಸುವುದು ಅಷ್ಟು ಸುಲಭವಾಗಿರಲಿಲ್ಲ. ಬಟಾವಿಯಾದ ಪ್ರಕಾರ ಹಣವನ್ನು ಮೊದಲು ಈಸ್ಟ್ ಇಂಡಿಯಾಕ್ಕೆ ಬೇಕಾದ ಬಟ್ಟೆಗಳ ಖರೀದಿಗೆ ವೆಚ್ಚ ಮಾಡಬೇಕಾಗಿತ್ತು, ಆದರೆ ಸೂರತ್‌ನ ಅಧಿಕಾರಿಗಳಿಗೆ ನೀಲಿಯು ಕೂಡ ಅಷ್ಟೇ ಆಕರ್ಷಕವಾಗಿಯೂ ಲಾಭದಾಯಕವಾಗಿ ಕಂಡಿತ್ತು, ಹಾಗಾಗಿ ಅದನ್ನೂ ಆಗಾಗ್ಗೆ ದೊಡ್ಡ ಪ್ರಮಾಣದಲ್ಲಿ ಖರೀದಿಸುತ್ತಿದ್ದರು. ಅವರ ನೀಲಿ ಖರೀದಿಯು ಹದಿನೇಳು ಮಹನೀಯರ (ಸೆವೆಂಟೀನ್ ಹೇರೆನ್) ಆದೇಶಕ್ಕೆ ಅನುಗುಣವಾಗಿತ್ತು, ಏಕೆಂದರೆ ಹೇರೆನ್‌ಗಳ ಪ್ರಕಾರ ಏಶಿಯಾದ ವ್ಯಾಪಾರಿ ಸರಕುಗಳಲ್ಲೇ ಬಯಾನಾ ಹಾಗೂ ಸಾರ್ಖೇಜ್‌ಗಳ ಉತ್ಕೃಷ್ಟ ನೀಲಿಯು ಅತ್ಯಂತ ಲಾಭದಾಯಕವಾದ ವ್ಯಾಪಾರೀ ವಸ್ತುವಾಗಿತ್ತು.[76]




ಚಿತ್ರ 3.1 ಸೂರತ್‌ನಿಂದಾದ ಇಐಸಿ (ಪೌಂಡಿನಲ್ಲಿ) ಮತ್ತು ವಿಒಸಿಯ (ಡಚ್ ಪೌಂಡಿನಲ್ಲಿ) ದಶ ವಾರ್ಷಿಕ ಸರಾಸರಿ ನೀಲಿ ರಫ್ತು, 1615-1729

ಮೂಲ: ಕೆಳಕಂಡ ಕೋಷ್ಟಕ 3.1 ಆಧರಿತ.

[76] 1617ರಲ್ಲಿ ಅಮಸ್ಟರ್‌ಡಂನಲ್ಲಿ ನೀಲಿಯು ಅತ್ಯಂತ ಹೆಚ್ಚಿನ ಲಾಭವನ್ನು ತಂದುಕೊಡುತ್ತಿತ್ತು. . DFI 1617-1623, Amsterdam to Pulicat, 19 Oct. 1617, p. 45.

| ವರ್ಷಗಳು | ಇಐಸಿ (ಪೌಂಡಿನಲ್ಲಿ) | ವಿಒಸಿ (ಡಚ್ ಪೌಂಡಿನಲ್ಲಿ) |
|---|---|---|
| 1615–20 | 297,572 | 121,757 |
| 1621–30 | 261,649 | 260,776 |
| 1631–40 | 220,075 | 332,316 |
| 1641–50 | 179,169 | 296,370 |
| 1651–60 | — | 95,818 |
| 1661–70 | 42,015 | 38,101 |
| 1671–80 | 100,529 | 198,683 |
| 1681–90 | 66,230 | 95,387 |
| 1691–1700 | 49,094 | 187,181 |
| 1701–10 | 55,808 | 84,490 |
| 1723–29 | 23,733 | — |

ಮೂಲ: ಅನುಬಂಧ 1 ಮತ್ತು ಅನುಬಂಧ 4 ರಲ್ಲಿರುವ ಅಂಕಿಗಳನ್ನು ಆಧರಿಸಿ.

ಹಾಗಾಗಿ ಬಹುಬೇಗನೆ ವಿಒಸಿಯ ನೀಲಿ ವ್ಯಾಪಾರವು ಪ್ರಬಲವಾಯಿತು. ಮೊದಲ ಐದು ವರ್ಷಗಳಲ್ಲಿ (1615-20), ಕಂಪೆನಿಯು ಪ್ರತಿವರ್ಷ 121,757 ಡಚ್ ಪೌಂಡ್‌ಗಳ ಬೆಲೆಯ ನೀಲಿಯನ್ನು ಖರೀದಿಸಿತು. ಮುಂದಿನ ಹತ್ತು ವರ್ಷಗಳಲ್ಲಿ ವಾರ್ಷಿಕ ಸರಾಸರಿಯು 260,000 ಡಚ್ ಪೌಂಡ್‌ಗಳನ್ನು ದಾಟಿತು. ಈ ಅಂಕಿಅಂಶಗಳು ಕೋರಮಂಡಲ ಕರಾವಳಿಯಲ್ಲಿ ಖರೀದಿಸಿದ ಸ್ವಲ್ಪ ನೀಲಿಯನ್ನೂ ಕೂಡ ಒಳಗೊಂಡಿವೆ. ಮುಂದಿನ ಎರಡು ದಶಕಗಳಲ್ಲಿ ನೀಲಿಯ ರಫ್ತು 1620 ರಲ್ಲಿ ಇದ್ದ ಸರಾಸರಿಗಿಂತಲೂ ಹೆಚ್ಚಾಯಿತು, ಅಂದರೆ, 1631 ರಿಂದ 1640 ರ ನಡುವೆ ಸುಮಾರು 332,000 ಡಚ್ ಪೌಂಡ್ ಇದ್ದರೆ 1641 ರಿಂದ 1650 ರ ನಡುವೆ 296,000 ಡಚ್ ಪೌಂಡ್‌ಗಳಷ್ಟಿತ್ತು. ಅಂಕಿ ಅಂಶಗಳ ಅಭಾವದಿಂದಾಗಿ ಸೂರತ್‌ನಿಂದ ದೀರ್ಘಕಾಲದವರೆಗೆ ನಡೆದ ವಿಒಸಿಯ ಒಟ್ಟೂ ರಫ್ತಿನಲ್ಲಿ ನೀಲಿಯ ಶೇಕಡಾವಾರು ಪಾಲು ಎಷ್ಟಿತ್ತೆಂಬುದನ್ನು ಗುರುತಿಸುವುದು ಸಾಧ್ಯವಿಲ್ಲ. ಕೆಲವು ವರ್ಷಗಳ ಕುರಿತು ಸಿಗುವ ಅಂಕಿಅಂಶಗಳು ಗುಜರಾತಿನಲ್ಲಿ ಕಂಪೆನಿಯು ನಡೆಸುತ್ತಿದ್ದ ವ್ಯಾಪಾರದಲ್ಲಿ ನೀಲಿಯ ಮಹತ್ವವನ್ನು ಅರ್ಥಮಾಡಿಕೊಳ್ಳಲು ಸಹಕರಿಸಬಹುದು. ಉದಾಹರಣೆಗೆ 1624-25 ಮತ್ತು 1625-26 ರಲ್ಲಿ ಸೂರತ್‌ನಿಂದ ಡಚ್ ಗಣರಾಜ್ಯಕ್ಕೆ ರಫ್ತಾದ ಸರಕುಗಳ ಒಟ್ಟೂ ಮೌಲ್ಯದಲ್ಲಿ ನೀಲಿಯ ಪಾಲು ಕ್ರಮವಾಗಿ ಶೇಕಡಾ 74 ಹಾಗೂ 77 ಇತ್ತು.[77] ಸೂರತ್‌ನಿಂದ ಬಟಾವಿಯಾಕ್ಕೆ ರಫ್ತಾದ ಸರಕುಗಳ ಮೌಲ್ಯವನ್ನು ಕೂಡ ಪರಿಗಣಿಸಿದರೆ ಈ ಶೇಕಡಾವಾರು ಪಾಲು ಮತ್ತಷ್ಟು ಕಡಿಮೆಯಾಗುತ್ತದೆ. ವಾನ್ ಸಂತೆನ್ ಅವರು ಸಂಗ್ರಹಿಸಿದ 1622 ರಿಂದ 1641 ರ ನಡುವಿನ ಅಂಕಿಅಂಶಗಳು

[77] DFI 1624-27, An extract from the invoice of the *Schoonhoven*, 12 Oct. 1624, pp. 119; Ibid, An extract from the invoice of the *Dordrecht*, April 1625, pp. 151-2., An extract from the invoice of the *Weesp*, April 1625, pp. 155-6; Ibid, An extract from the invoice of the *Holandia*, April 1626, p. 266; ibid, An extract from the invoice of the *Oranje*, April 1626, p. 167; ibid., An extract from the invoice of the *Gouden Leeuw*, April 1626, p. 268; An extract from the invoice of the *Mauritius*, April 1626, pp. 269-70.

ತೋರಿಸುವಂತೆ ಸೂರತ್‌ನಿಂದ ಈಸ್ಟ್ ಇಂಡೀಸಿಗೆ ರಫ್ತಾಗುತ್ತಿದ್ದ ಸರಕುಗಳನ್ನೂ ಸೇರಿಸಿ ಎಲ್ಲಾ ಸರಕುಗಳ ಮೌಲ್ಯದ ಶೇಕಡಾ 45 ಕ್ಕಿಂತ ಹೆಚ್ಚು ಪ್ರಮಾಣವು ನೀಲಿಗೇ ಮೀಸಲಾಗಿತ್ತು.[78] ಆದರೆ, 1640 ರ ಮಧ್ಯಭಾಗದಿಂದ ವಿಒಸಿಯ ನೀಲಿ ವ್ಯಾಪಾರವು ವೇಗವಾಗಿ ಕುಸಿಯಿತು. 1644 ರಿಂದ 1656 ರ ನಡುವೆ ಸೂರತ್‌ನಿಂದ ರಫ್ತಾದ ಒಟ್ಟೂ ಸರಕುಗಳ ಮೌಲ್ಯದಲ್ಲಿ ನೀಲಿಯ ಪಾಲು ಶೇಕಡಾ 20 ಕ್ಕಿಂತ ಕೆಳಗೆ ಕುಸಿಯಿತು.[79]

ಮೊದಮೊದಲು ಇಐಸಿಯು ಏಶಿಯಾದ ಆಂತರಿಕ ವ್ಯಾಪಾರದಲ್ಲಿ ವಿಒಸಿಯಷ್ಟು ಆಸಕ್ತಿಯನ್ನು ಹೊಂದಿರಲಿಲ್ಲ ಹಾಗೂ ಭಾರತೀಯ ಸರಕುಗಳನ್ನು ಯುರೋಪಿಗೆ ರಫ್ತು ಮಾಡುವುದರಲ್ಲೇ ತೊಡಗಿಕೊಂಡಿತ್ತು. ಭಾರತದಲ್ಲಿ ಉತ್ಪಾದನೆ ಹಾಗೂ ಪೂರೈಕೆಗಳು ಯುರೋಪಿನಲ್ಲಿನ ಬಳಕೆದಾರರ ಬೇಡಿಕೆಯ ಸ್ವರೂಪದಿಂದಾಗಿ  ಇಐಸಿಯು  ಆಮದುಗಳ ಮೂಲಗಳನ್ನು ಹೆಚ್ಚಿಸಬೇಕಾಯಿತು. ಏಶಿಯಾದ ಸಾಂಬಾರು ಪದಾರ್ಥಗಳ ಅಲ್ಪ ಲಭ್ಯತೆ ಅಥವಾ ಅಭಾವದಿಂದಾಗಿ ಇಐಸಿಯು ಭಾರತದಿಂದ ನೀಲಿ ಹಾಗೂ ಬಟ್ಟೆಗಳ ರಫ್ತನ್ನು ನೆಚ್ಚಿಕೊಳ್ಳಬೇಕಾಯಿತು. ಹೀಗೆ, 1608 ರಲ್ಲಿ ಸೂರತ್‌ನಲ್ಲಿ ಅದರ ಫ್ಯಾಕ್ಟರಿಯ ಸ್ಥಾಪನೆಯಾದಾಗಿನಿಂದ ಕಂಪೆನಿಯು ನೀಲಿಯ ಮೇಲೆ ಹಣವನ್ನು ತೊಡಗಿಸಿ ಪ್ರತೀ ವರ್ಷವೂ ಅದನ್ನು ದೊಡ್ಡ ಪ್ರಮಾಣದಲ್ಲಿ  ಇಂಗ್ಲೆಂಡಿಗೆ ರಫ್ತು ಮಾಡುತ್ತಿತ್ತು. ನಂತರದ ಹತ್ತು ವರ್ಷಗಳಲ್ಲಿ ಇಐಸಿಯು ಇಂಡಿಯಾದಿಂದ ರಫ್ತು ಮಾಡಿದ ಸರಕುಗಳಲ್ಲಿ ನೀಲಿಯೇ ಅತ್ಯಂತ ಬೆಲೆಬಾಳುವ ಸರಕಾಗಿತ್ತು.[80] 1615 ರಿಂದ 1620 ರ ನಡುವೆ ಪೋರ್ಚುಗೀಸರಿಂದ ಯಾವುದೇ ಪೈಪೋಟಿ ಇಲ್ಲದ್ದರಿಂದ  ಭಾರತದಲ್ಲಿ ನೀಲಿಯು  ಕಡಿಮೆ ಬೆಲೆಗೆ ಸಿಗುತ್ತಿದ್ದುದರಿಂದ ಲಾಭ ಮಾಡಿದರು. ಈ ಅವಧಿಯಲ್ಲಿ ಈಸ್ಟ್ ಇಂಡಿಯಾ ಕಂಪೆನಿಯ ವಾರ್ಷಿಕ ಸರಾಸರಿ ರಫ್ತು ಸುಮಾರು  298,000 ಪೌಂಡ್‌ಗಳಷ್ಟಿತ್ತು. ನಂತರದ ಮೂರು ದಶಕಗಳಲ್ಲಿ ಅದರ ರಫ್ತುಗಳು ನಿಧಾನವಾಗಿ ಇಳಿಕೆ ಕಂಡವು.  1621-30 ರಲ್ಲಿ ಅದಾಗಲೇ ಅಂಕಿಅಂಶಗಳು ವಾರ್ಷಿಕ ಸರಾಸರಿ 262,000 ಪೌಂಡ್‌ಗಳಷ್ಟು ಇಳಿದಿದ್ದು 1631-40ರ ಅವಧಿಯಲ್ಲಿ 220,000 ಪೌಂಡ್‌ಗಳಿಗೆ ಮತ್ತಷ್ಟು ಇಳಿಯಿತು. 1641-50 ರ ಅವಧಿಗೆ ಅದು ಮತ್ತೂ ಇಳಿದು 180,000 ಪೌಂಡ್‌ಗಳಿಗೆ ತಲುಪಿತು. ಹೀಗೆ ಮೂವತ್ತು ವರ್ಷಗಳಲ್ಲಿ ಈಸ್ಟ್ ಇಂಡಿಯಾ ಕಂಪೆನಿಯ ಭಾರತದಿಂದಾದ ರಫ್ತುಗಳು ಶೇಕಡಾವಾರು 40 ರಷ್ಟು ಕ್ಷೀಣವಾದವು.

ಯುರೋಪಿನಲ್ಲಿ ಬಯಾನಾ ಮತ್ತು ಸಾರ್ಖೇಜ್ ನೀಲಿಗಳು ಬೇಡಿಕೆದಾರರ ಆದ್ಯತೆಗಳಾಗಿದ್ದವು.[81] ಮೊದಲಿನ ಪ್ರಕಾರದ ನೀಲಿಯು ಅದರ ಶ್ರೇಷ್ಠ ಗುಣಮಟ್ಟಕ್ಕಾಗಿ ಬೇಡಿಕೆಯಲ್ಲಿತ್ತು. ಕೆಲವೊಮ್ಮೆ ಇಂಗ್ಲಿಷ್ ಮತ್ತು ಡಚ್ ಈಸ್ಟ್ ಇಂಡಿಯಾ ಕಂಪೆನಿಗಳ ಅಧಿಕಾರಿಗಳಿಗೆ ಆದ್ಯತೆಯ ಮೇಲೆ ಬಯಾನಾ ನೀಲಿಯನ್ನು ಖರೀದಿಸುವಂತೆ ನಿರ್ದೇಶಿಸಲಾಗುತ್ತಿತ್ತು. ಸಾರ್ಖೇಜ್ ನೀಲಿಯು ಎರಡನೆಯ ಆದ್ಯತೆಯಾಗಿದ್ದು ಬಯಾನಾ ನೀಲಿಯು ಸಾಕಷ್ಟು ಸಿಗದಿದ್ದಾಗ ಮಾತ್ರವೇ ಅದನ್ನು ಖರೀದಿಸಲಾಗುತ್ತಿತ್ತು. ಹದಿನೇಳನೆಯ ಶತಮಾನದ ಪ್ರಾರಂಭದಲ್ಲಿ ಸಾಮಾನ್ಯವಾಗಿ ವಿಒಸಿಯ ವಾರ್ಷಿಕ ನೀಲಿ ಖರೀದಿ ಆದೇಶದಲ್ಲಿ ಎರಡು ಪಾಲು ಬಯಾನಾ ನೀಲಿಯಿದ್ದರೆ ಒಂದು

---

[78] Van Santen, ' De Verenigde Oost-Indische COmpagnis In Gujatat en Hindustan', 32-3 (Table ̆)
[79] Ibid
[80] Chaudhuṛl *The English East India Compaņy* , 176.
[81] ಕಂಪೆನಿಯು ಗುಜರಾಥಿನಿಂದ ಮಾಡುತ್ತಿದ್ದ ವಾರ್ಷಿಕ ರಫ್ತಿನಲ್ಲಿ ಖುರ್ಜಾ, ಹಿಂದಾಂವ್, ಧೋಲ್ಕಾ ಮತ್ತು ಜಂಬುಸರ್ ನೀಲಿಯೂ ಸೇರಿತ್ತು. ಅದರಲ್ಲೂ ಮುಖ್ಯವಾಗಿ  ಬಯಾನಾ ಹಾಗೂ ಸಾರ್ಕೇಜ್ ನೀಲಿ ಅವರ ಅವಶ್ಯಕತೆಗೆ  ತಕ್ಕಷ್ಟು ಸಿಗದಿದ್ದಾಗ ಇಂಥ ಕಡಿಮೆ ದರ್ಜೆಯ ನೀಲಿಯನ್ನು ಅವರು ಆಗಾಗ ಖರೀದಿಸುತ್ತಿದ್ದರು.

ಪಾಲು ಸಾರ್ಖೇಜ್ ನೀಲಿಯಿರುತ್ತಿತ್ತು.[82] ಕೆಲವೊಮ್ಮೆ ಸಾರ್ಖೇಜ್ ನೀಲಿಯನ್ನು ಅದರ ಕಡಿಮೆ ಬೆಲೆ ಹಾಗೂ ಅಹಮದಾಬಾದಿನಿಂದ ಸೂರತ್‌ಗೆ ಅದರ ಸಾಗಾಟದ ವೆಚ್ಚವು ಕಡಿಮೆ ಇರುವುದನ್ನು ಪರಿಗಣಿಸಿ ಆಯ್ಕೆ ಮಾಡಿಕೊಳ್ಳಲಾಗುತ್ತಿತ್ತು. ಆಗ್ರಾದಿಂದ ಕಾರವಾನ್ ರಸ್ತೆಯು ದೀರ್ಘ ಹಾಗೂ ಅಸುರಕ್ಷಿತವಾಗಿದ್ದು ಸ್ಥಳೀಯ ಅರಸರ ಮರ್ಜಿಗೆ ಒಳಪಟ್ಟಿತ್ತು. ಅದಕ್ಕೂ ಹೆಚ್ಚಿನದಾಗಿ ಕೆಲವೊಮ್ಮೆ ಯುರೋಪಿನಲ್ಲಿ ಸಾರ್ಖೇಜ್ ನೀಲಿಗೂ ಬಯಾನಾ ನೀಲಿಗೂ ಬೆಲೆಯಲ್ಲಿ ಅತ್ಯಲ್ಪ ವ್ಯತ್ಯಾಸವಿರುತ್ತಿತ್ತು.[83] ಇಂಥ ಸನ್ನಿವೇಶಗಳಲ್ಲಿ ಕಂಪೆನಿಗಳು ಸಾರ್ಖೇಜ್ ನೀಲಿಯನ್ನೇ ಹೆಚ್ಚು ರಫ್ತು ಮಾಡುತ್ತಿದ್ದವು. 1624 ರಿಂದ 1626 ರ ನಡುವೆ ಹಾಗೂ 1638 ರಿಂದ 1640 ರ ನಡುವೆ ಡಚ್ ಕಂಪೆನಿಯು ಸೂರತ್‌ನಿಂದ ಡಚ್ ಗಣರಾಜ್ಯಕ್ಕೆ ರಫ್ತು ಮಾಡಿದ ನೀಲಿಯು ಸಾರ್ಖೇಜ್ ನೀಲಿಯೇ ಆಗಿತ್ತು. (ಅನುಬಂಧ 1 ನ್ನು ನೋಡಿರಿ).[84] ಆದರೂ , ಒಟ್ಟಾರೆಯಾಗಿ, ಡಚ್ ಕಂಪೆನಿಯು ಸೂರತ್‌ನಿಂದ ರಫ್ತುಮಾಡಿದ ನೀಲಿಯಲ್ಲಿ ಬಯಾನಾ ನೀಲಿಯ ಪ್ರಮಾಣವೇ ಅಧಿಕವಾಗಿತ್ತು.

1630ರ ವರೆಗೆ, ಇಐಸಿಯ ನೀಲಿ ಖರೀದಿಯಲ್ಲೂ ಕೂಡ ಸಾರ್ಖೇಜ್ ನೀಲಿಯೇ ಅತ್ಯಧಿಕವಾಗಿತ್ತು. ಹಾಗೂ 1620 ರ ದಶಕದಲ್ಲಿ ಬಹಳಷ್ಟು ವರ್ಷಗಳವರೆಗೆ ಕಂಪೆನಿಯು ಬಯಾನಾ ನೀಲಿಯನ್ನೇ ಖರೀದಿಸಿರಲಿಲ್ಲ.[85] 1615 ರಿಂದ 1630 ರ ಅವಧಿಯಲ್ಲಿ ಲಭ್ಯವಿರುವ ಅಂಕಿ ಅಂಶಗಳು ತೋರಿಸುವಂತೆ ಕಂಪೆನಿಯು ವಾರ್ಷಿಕವಾಗಿ ಭಾರತದಿಂದ ಮಾಡಿದ ಒಟ್ಟೂ ರಫ್ತಿನ ಸರಾಸರಿಯಲ್ಲಿ ಮೂರರಲ್ಲಿ ಎರಡು ಪಾಲಿನಷ್ಟು ಸಾರ್ಖೇಜ್ ನೀಲಿಯೇ ಇತ್ತು. 1633 ರಿಂದ 1651 ರ ನಡುವೆ ಗುಜರಾತಿನಿಂದಾದ ರಫ್ತುಗಳಲ್ಲಿ ಶೇಕಡಾ 40 ರಷ್ಟು ಸಾರ್ಖೇಜ್ ನೀಲಿಯೇ ಇತ್ತು.

ಯುರೋಪಿನ ನೀಲಿಯ ವ್ಯಾಪಾರದಲ್ಲಿ ಆದ ಈ ಅಭೂತಪೂರ್ವ ಬೆಳವಣಿಗೆಯು ಬಹಳ ಕಾಲ ಮುಂದುವರಿಯಲಿಲ್ಲ. 1650 ರ ನಂತರ ಭಾರತದಿಂದಾದ ರಫ್ತುಗಳು ತ್ವರಿತವಾಗಿ ಇಳಿಕೆಯಾದವು (ಕೋಷ್ಟಕ 3.1 ನೋಡಿರಿ). ಈ ಅವನತಿಗೆ ಅನೇಕ ಸನ್ನಿವೇಶಗಳು ಕಾರಣವಾದವು. ಮೊದಲನೆಯದಾಗಿ ಯುರೋಪಿನ ವೋಡ್ ಬದಲಾಗಿ ಬಳಸುವುದಕ್ಕೆ ಮಾತ್ರವೇ ನೀಲಿಯ ಬೇಡಿಕೆಯು ಮಿತವಾಗಿತ್ತು. ಯುರೋಪಿನ ಬಟ್ಟೆ ಉತ್ಪಾದನೆಯಲ್ಲಿ ಯಾವುದೇ ಗಣನೀಯ

---

[82]ಹದಿನೇಳು ಮಹನೀಯರು ಈ ರೀತಿಯಲ್ಲಿ ತಮ್ಮ ನಿಧಿಯಿಂದ ಬಯಾನಾ ನೀಲಿಗೆ 200,000 ಪೌಂಡ್ ಹಾಗೂ ಸಾರ್ಕೆಜ್ ನೀಲಿಗೆ 100,000 ಪೌಂಡ್‌ಗಳಷ್ಟು ತೊಡಗಿಸಲು ನೀಡುತ್ತಿದ್ದರು.. DFI 1624-27, General letter from Governor General Peter de Carpentier at Batavia to the Directors at Amsterdam, 3 Jan. 1624, pp. 52-3.

[83]ದೃಷ್ಟಾಂತಕ್ಕೆ , 1623-24 ಹಾಗೂ 1638-39 ರಲ್ಲಿVOC ಅಧಿಕಾರಿಗಳು ಬಯಾನಾಕ್ಕಿಂತ ಸಾರ್ಖೆಜ್ ನೀಲಿಯನ್ನೇ ಹೆಚ್ಚಿನ ಪ್ರಮಾಣದಲ್ಲಿ ಯುರೋಪಿಗೆ ರಫ್ತು ಮಾಡಬೇಕೆಂದು ಇಚ್ಛಿಸಿದ್ದರು. ಏಕೆಂದರೆ ಅದನ್ನು ಭಾರತದಲ್ಲಿ ಕಡಿಮೆ ಬೆಲೆಗೆ ಕೊಂಡು ಅಮಸ್ಟರ್‌ಡಂನಲ್ಲಿ ಹೆಚ್ಚಿನ ಬೆಲೆಗೆ ಮಾರಬಹುದಾಗಿತ್ತು. DFI 1617-23, Surat to Batavia, 25 Dec. 1623. P. 286.

[84]1624-25 ಹಾಗೂ 1625-26 ರಲ್ಲಿ ಗುಜರಾಥಿನಿಂದ ರಫ್ತಾಗುತ್ತಿದ್ದ VOC ಯ ಒಟ್ಟೂ ನೀಲಿಯ ವಾರ್ಷಿಕ ಸರಾಸರಿಯಲ್ಲಿ ಸಾರ್ಖೆಜ್ ನೀಲಿಯ ಪಾಲು ಶೇಕಡಾ 70 ರಷ್ಟಿತ್ತು. ಅದೇ 1637-40 ರಲ್ಲಿ ಶೇಕಡಾ 70ಕ್ಕೇರಿತು. 1621 ಮತ್ತು 1644ರ ನಡುವೆ ಬಯಾನಾ ನೀಲಿಗೆ ಹೋಲಿಸಿದರೆ ಸಾರ್ಖೆಜ್ ನೀಲಿಯ ಸರಾಸರಿ ಪ್ರಮಾಣವು ಹೆಚ್ಚು ಕಡಿಮೆ ಸಮನಾಗಿತ್ತು. ( ಕ್ರಮವಾಗಿ ಶೇಕಡಾ 49 ಹಾಗೂ 51 ). ಸಾರ್ಖೆಜ್ ನೀಲಿಯ ಗುಣಮಟ್ಟವು ಕಳಪೆಯಾಗಿದ್ದರಿಂದ ಅದನ್ನು ಸ್ಥಳೀಯವಾಗಿ ಬಳಸಲಾಗುತ್ತಿತ್ತು ಹಾಗೂ ಯುರೋಪಿಯನ್ನರು ಮುಖ್ಯವಾಗಿ ಬಯಾನಾ ನೀಲಿಯನ್ನು ಬಯಸುತ್ತಿದ್ದರು ಎಂಬ ಅಭಿಪ್ರಾಯವು ಸರಿಯಲ್ಲ ಎಂಬುದು ಇದರಿಂದ ನಿದರ್ಶನವಾಗುತ್ತದೆ. George Winius and Markus Vink, *The Merchant-Warrior Pacified: The VOC and its Changing Political Economy in India* (Delhi: OUP, 1991), 62.

[85]1624 ರಲ್ಲಿ ಅದಕ್ಕೂ ಹಿಂದಿನ ಮೂರು ವರ್ಷಗಳಿಂದ ಇಂಗಿಷರು ಬಯಾನಾ ನೀಲಿಯನ್ನು ಖರೀದಿಸಿರಲೇ ಇಲ್ಲ ಎಂಬುದಾಗಿ VOC ಅಧಿಕಾರಿಗಳು ವರದಿ ಮಾಡಿದ್ದರು. DFI 1624-27, Pieter van den Broecke at Surat to the Directors at Amsterdam, 11 Jan. 1624, p. 64.

ವಿಸ್ತರಣೆಯಾಗದೇ ನೀಲಿಯ ಬೇಡಿಕೆಯು ಸ್ಥಗಿತವಾಯಿತು ಹಾಗೂ ಬೇರೆ ಕಡೆಗಳಿಂದ ದೊಡ್ಡ ಪ್ರಮಾಣದಲ್ಲಿ ಅದನ್ನು ಆಮದು ಮಾಡಿಕೊಂಡದ್ದೂ ಭಾರತೀಯ ನೀಲಿ ವ್ಯಾಪಾರದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರಿತು. ಕೆ.ಎನ್ ಚೌಧುರಿಯವರು ಗುರುತಿಸಿದಂತೆ ಇಂಗ್ಲೆಂಡಿನಲ್ಲಿ ವೋಡ್‌ಗೆ ಬದಲಾಗಿ ನೀಲಿ ಬಳಸುವುದಕ್ಕೆ ಮಿತವಾದ ಬೇಡಿಕೆಯಿತ್ತು ಹಾಗೂ ಒಮ್ಮೆ ಈ ಬದಲಾವಣೆ ಪೂರ್ತಿಗೊಂಡನಂತರ ಬಟ್ಟೆ ಉತ್ಪಾದನೆಯಲ್ಲೇ ಅಭಿವೃದ್ಧಿಯಾಗದಿದ್ದಲ್ಲಿ ಅದರ ಬೇಡಿಕೆಯು ಸ್ಥಗಿತಗೊಳ್ಳಬಹುದಿತ್ತು.[86] ಎರಡನೆಯದಾಗಿ, ಮೂವತ್ತು ವರ್ಷಗಳ ಯುದ್ಧದ ನಂತರ ಯುರೋಪಿಗೆ ಗ್ವಾಟೆಮಾಲಾ ಹಾಗೂ ಅದನ್ನನುಸರಿಸಿ ಇತರ ವಸಾಹತುಗಳಿಂದ ನೀಲಿಯ ಪೂರೈಕೆಯು ಪುನಃ ಪ್ರಾರಂಭವಾಗಿ ವಿಸ್ತಾರಗೊಂಡಿತು. ಹದಿನೇಳನೆಯ ಶತಮಾನದ ಅಂತ್ಯ ಹಾಗೂ ಹದಿನೆಂಟನೆಯ ಶತಮಾನದಲ್ಲಿ ಬ್ರಿಟಿಷ್ ಜಮೈಕಾ, ದಕ್ಷಿಣ ಕೆರೋಲಿನಾ, ಫ್ರೆಂಚರ ಸೇಂಟ್ ಡೊಮಿಂಗ್ ಹಾಗೂ ಡಚ್ಚರ ಜಾವಾಗಳು ಯುರೋಪಿಗೆ ನೀಲಿಯನ್ನು ಪೂರೈಸಿದವು. ಕೊನೆಯದಾಗಿ, ಅಟ್ಲಾಂಟಿಕ್ ಸಾಗರದಾಚೆಗಿನ ನೀಲಿ ಪೂರೈಕೆಯ ಸರಪಣಿಯ ಪೈಪೋಟಿಯ ದಿನಗಳಲ್ಲಿ ಹಾಗೂ ಯುರೋಪಿನಲ್ಲಿ ಅದರ ಬೇಡಿಕೆಯಲ್ಲಿ ಬದಲಾವಣೆ ಇರದೇ ಇದ್ದುದರಿಂದ ಬೆಲೆ ಹಾಗೂ ಲಾಭಾಂಶಗಳಲ್ಲಿ ಭಾರತದ ನೀಲಿಯ ಸಾಪೇಕ್ಷ ಅನುಕೂಲತೆಗಳು ನಷ್ಟವಾದವು. ಅದರ ಪರಿಣಾಮವಾಗಿ ಇಂಗ್ಲಿಷ್ ಮತ್ತು ಡಚ್ ಈಸ್ಟ್ ಇಂಡಿಯಾ ಕಂಪೆನಿಗಳು ಬಟ್ಟೆ ಹಾಗೂ ಹೆಚ್ಚು ಲಾಭ ತರುವ ಇತರ ಸರಕುಗಳತ್ತ ತಮ್ಮ ಗಮನವನ್ನು ಕೇಂದ್ರೀಕರಿಸಿದವು. ಅಷ್ಟಾಗಿಯೂ ಹದಿನೆಂಟನೆಯ ಶತಮಾನದ ಪ್ರಾರಂಭದವರೆಗೆ ಜಮೈಕಾ, ಸೇಂಟ್ ಡೊಮಿಂಗ್, ಜಾವಾಗಳಲ್ಲಿ ನೀಲಿಯ ಉತ್ಪಾದನೆಯು ನೆಲೆಗೊಂಡು ಬ್ರಿಟನ್, ಫ್ರಾನ್ಸ್ ಮತ್ತು ಡಚ್ ಗಣರಾಜ್ಯಗಳು ಬೃಹತ್ ಪ್ರಮಾಣದಲ್ಲಿ ತಂತಮ್ಮ ವಸಾಹತುಗಳಿಂದ ಅದನ್ನು ಆಮದು ಮಾಡಿಕೊಳ್ಳುವ ಕಾಲದಲ್ಲೂ ಈ ಕಂಪೆನಿಗಳು ಸ್ವಲ್ಪ ನೀಲಿಯನ್ನು ಭಾರತದಿಂದ ರಫ್ತು ಮಾಡುವುದನ್ನು ಮುಂದುವರಿಸಿದವು. ತದನಂತರ, ಡಚ್ ಕಂಪೆನಿಯು ಆಗೊಮ್ಮೆ ಈಗೊಮ್ಮೆ ಬಯಾನಾ, ಸಾರ್ಖೇಜ್ ಹಾಗೂ ಇತರ ನೀಲಿಗಳನ್ನು ಖರೀದಿಸುತ್ತಿತ್ತು ಆದರೆ, ಇಂಗ್ಲಿಷ್ ಕಂಪೆನಿಯು ಭಾರತದಿಂದ ನೀಲಿಯನ್ನು ರಫ್ತು ಮಾಡುವುದನ್ನೇ ನಿಲ್ಲಿಸಿತು.

ಉದಾಹರಣೆಗೆ ವಿಓಸಿಯು ಬಯಾನಾ, ಖುರ್ಜ, ಸಾರ್ಖೇಜ್, ಜಂಬುಸರ್, ಕೋರಮಂಡಲ್, ಮಲಬಾರ್ ಹಾಗೂ ಸಿಲೋನಿನ ನೀಲಿಯನ್ನು ಖರೀದಿಸುತ್ತಿತ್ತು. 1710 ರ ವೇಳೆಗೆ ಜಾವಾವು ಉತ್ಕೃಷ್ಟ ಗುಣಮಟ್ಟದ ನೀಲಿಯನ್ನು ಉತ್ಪಾದಿಸಿ ಸುಸ್ಥಿರವಾಗಿ ಪೂರೈಕೆ ಮಾಡುವ ಮಟ್ಟಕ್ಕೆ ಬೆಳೆದ ನಂತರ ಕಂಪೆನಿಯು ಸತತವಾಗಿ ಜಾವಾ ನೀಲಿಯನ್ನು ರಫ್ತು ಮಾಡಿತು. 1709-10 ರ ನಂತರದ ಮಾರಾಟದ ದಾಖಲೆಗಳಲ್ಲೆಲ್ಲೂ ಬಯಾನಾ ನೀಲಿಯ ಪ್ರಸ್ತಾಪವೇ ಇಲ್ಲ ಎಂಬುದು ಇಲ್ಲಿ ಆಸಕ್ತಿಪೂರ್ಣವಾದ ಮಾಹಿತಿಯಾಗಿದೆ (ಅನುಬಂಧ 2). ಕಂಪೆನಿಯು 1713 ರಲ್ಲಿ ತನ್ನ ಆಗ್ರಾ ಫ್ಯಾಕ್ಟರಿಯನ್ನು ಮುಚ್ಚಿದ ನಂತರ ಬಯಾನಾ ನೀಲಿಯನ್ನು ಖರೀದಿಸುವುದು ದುಸ್ತರವಾಗಿತ್ತು ಎಂಬುದಂತೂ ನಿಜ. ಹಾಗಾಗಿ, ಹಲವು ಸಂದರ್ಭಗಳಲ್ಲಿ ಸೂರತ್‌ನಲ್ಲಿದ್ದ ವಿಓಸಿಯ ಅಧಿಕಾರಿಗಳು ಸ್ವದೇಶದಲ್ಲಿ

---

[86]Chaudhuri, *The English East India Company*, 176-7. ವಾಸ್ತವವಾಗಿ ಈ ಪ್ರಕ್ರಿಯೆಯು ಪೂರ್ಣಗೊಳ್ಳಲೇ ಇಲ್ಲ. ಹದಿನೇಳು ಹದಿನೆಂಟನೆಯ ಶತಮಾನದಲ್ಲೂ ವೋಡ್ ಬಳಕೆಯು ಮುಂದುವರಿಯಿತು. ಕೆಲವೊಮ್ಮೆ ನೀಲಿಯ ಜೊತೆಗೆ ಅದನ್ನು ಬಳಸಲಾಗುತ್ತಿತ್ತು. Balfour-Paul, *Indigo*, 38-9.

ಬಯಾನಾ ನೀಲಿಗಿದ್ದ ಬೇಡಿಕೆಯನ್ನು ಪೂರೈಸಲು ಅಸಮರ್ಥರಾಗುತ್ತಿದ್ದರು.[87] ಆದರೂ ಕೆಲವೊಮ್ಮೆ, ಉದಾಹರಣೆಗೆ 1740 ರ ದಶಕದ ಪ್ರಾರಂಭದಲ್ಲಿ, ವಿಒಸಿಯು ಬಯಾನಾ ನೀಲಿಯನ್ನು ದೊಡ್ಡ ಪ್ರಮಾಣದಲ್ಲಿ ಖರೀದಿಸಿದರೂ ಡಚ್ ಗಣರಾಜ್ಯದ ವಾರ್ಷಿಕ ಮಾರಾಟದ ವರದಿಗಳು ಇದನ್ನು ದಾಖಲಿಸುವುದಿಲ್ಲ. ಬಯಾನಾ ಹಾಗೂ ಸಾರ್ಖೇಜ್ ನೀಲಿ,




ಚಿತ್ರ3.2: ಡಚ್ ಗಣರಾಜ್ಯದಲ್ಲಿ ಮಾರಾಟಗೊಂಡ ಭಾರತದಿಂದ ಬಂದ ನೀಲಿಯ ವಾರ್ಷಿಕ ಪ್ರಮಾಣ (ಡಚ್ ಪೌಂಡುಗಳಲ್ಲಿ) ಮತ್ತು ಮೌಲ್ಯಗಳ (ಗಿಲ್ಡರುಗಳಲ್ಲಿ) ದಶವಾರ್ಷಿಕ ಸರಾಸರಿ.

ಮೂಲ: ಕೆಳಕಂಡ ಕೋಷ್ಟಕ 3.2 ರಲ್ಲಿನ ಅಂಕಿಗಳನ್ನು ಆಧರಿಸಿ.

ಕೋಷ್ಟಕ 3.2: ಡಚ್ ಗಣರಾಜ್ಯದಲ್ಲಿ ವಿಒಸಿಯಿಂದ ಮಾರಾಟಗೊಂಡ ಭಾರತದಿಂದ ಬಂದ ನೀಲಿಯ ವಾರ್ಷಿಕ ಪ್ರಮಾಣ (ಡಚ್ ಪೌಂಡುಗಳಲ್ಲಿ) ಮತ್ತು ಮೌಲ್ಯಗಳ (ಗಿಲ್ಡರುಗಳಲ್ಲಿ) ದಶವಾರ್ಷಿಕ ಸರಾಸರಿ.

| ವರ್ಷಗಳು | ಪ್ರಮಾಣಗಳು | ಮೌಲ್ಯ |
|---|---|---|
| 1642–50 | n.a. | 385,021 |
| 1651–60 | 44,079 | 86,043 |
| 1661–70 | 18,924 | 36,723 |
| 1671–80 | 51,157 | 97,233 |
| 1681–90 | 41,278 | 115,889 |
| 1691–1700 | 112,705 | 374,865 |
| 1701–10 | 71,756 | 280,815 |
| 1711–20 | 22,749 | 24,311 |
| 1721–30 | 6,658 | 9,301 |
| 1731–40 | 136 | 177 |
| 1741–50 | 22,883 | 21,150 |
| 1751–60 | 3,183 | 2,757 |

[87] ಉದಾಹರಣೆಗೆ, 1725 ರಲ್ಲಿ ಅಮ್‌ಸ್ಟರ್ಡಂನಿಂದ 150,000 ಡಚ್ ಪೌಂಡ್‌ಗಳಷ್ಟು ಬಯಾನಾ ನೀಲಿಗೆ ಬೇಡಿಕೆಯನ್ನು ಸಲ್ಲಿಸಲಾಗಿತ್ತು. ಆದರೆ ಆಗ್ರಾದಲ್ಲಿನ ಫ್ಯಾಕ್ಟರಿಯನ್ನು ಮುಚ್ಚಿದ್ದರಿಂದ ಹಾಗೂ ಅಲ್ಲಿಂದ ಸೂರತ್‌ಗೆ ಇದ್ದ ಕಾರವಾನ್ ರಸ್ತೆಯು ಸುರಕ್ಷಿತವಾಗಿಲ್ಲದ ಕಾರಣ ಸೂರತ್ ಆ ಬೇಡಿಕೆಯನ್ನು ಪೂರೈಸಲಾಗಲಿಲ್ಲ. VOC 9059, pp. 72, 76.

ಮೂಲ: DUCTCH: (ENGLISH): VOC 4583, Generale staeten van d' Oost-indische Compagnie van den jare 1642 tot den jaere 1676 [General state of the East India Company from 1642 to 1676]; VOC 4585, Staet generael verhandelde goederen en uijtstaen schulden en onvercoghte goederen van de respective cameren onder medio April 1677 gesloten tot medio Meij 1683 [General state of the sold goods and outstanding debts and unsold goods of the respective chambers from mid-April 1677 to mid-May 1683]; VOC 4586, Generale staeten van verhandelde goederen als onvercoghte goederen en uijtstaen schulden etc van de respective cameren geslooten onder medio April 1684 eijndigt medio Meij 1688 [General state of the sold and unsold goods and outstanding debts of the respective chambers from mid-April 1684 to mid-May 1688]; VOC 4587, Generale staeten van verhandelde goederen als onvercoghte goederen en uijtstaen schulden etc van de respective cameren geslooten onder medio April 1690 tot medio Meij 1696; VOC 6989, Bijeenbrenging van verkopingen in de respective kamers, 1693-1760 [STATEMENT of sales in the respective chambers, 1693-1760]

ಹಾಗೂ ಕೆಲವೊಮ್ಮೆ ಜಂಬುಸರ್, ಖುರ್ಜಾ ಅಥವಾ ಕೋರಮಂಡಲ ನೀಲಿಗಳಿಗಿದ್ದ ಅಗಾಧ ಬೇಡಿಕೆ ಹಾಗೂ ವಿಒಸಿಯು ಕೆಲವೊಮ್ಮೆ ಮಾಡುತ್ತಿದ್ದ ದೊಡ್ಡ ಪ್ರಮಾಣದ ಖರೀದಿಗಳು ನಿದರ್ಶಿಸುವಂತೆ ಆ ಪ್ರದೇಶಗಳ ನೀಲಿ ಕೈಗಾರಿಕೆಗಳು ಬಾಹ್ಯ ಬೇಡಿಕೆಯಲ್ಲಿ ಆಗುವ ಹಠಾತ್ ಏರಿಳಿತಗಳಿಗೆ ಪ್ರತಿಸ್ಪಂದಿಸುವಷ್ಟು ಕ್ರಿಯಾಶೀಲವಾಗಿದ್ದವು. ಕೋಷ್ಟಕ 3.1 ರಲ್ಲಿರುವ ಚಿತ್ರದ ಪ್ರಕಾರ ಹಾಗೂ ಅನುಬಂಧ 1 ರಲ್ಲಿ ತೋರಿಸುವಂತೆ ಹದಿನೇಳನೆಯ ಶತಮಾನದ ಮಧ್ಯ ಭಾಗದಲ್ಲಿ ನೀಲಿ ವ್ಯಾಪಾರದಲ್ಲಿ ಆದ ಹಠಾತ್ ಇಳಿಕೆಯ ಕಾಲದಲ್ಲೂ ವಿಒಸಿಯು ಭಾರತದಿಂದ ಮಾಡಿದ ರಫ್ತುಗಳು ಸಾಕಷ್ಟು ದೊಡ್ಡ ಪ್ರಮಾಣದಲ್ಲಿಯೇ ಇದ್ದವು. ಅದರಲ್ಲೂ ನಿರ್ದಿಷ್ಟವಾಗಿ 1690 ಹಾಗೂ 1700 ಗಳಲ್ಲಿ ಇದು ಕಂಡುಬರುತ್ತದೆ.( ಚಿತ್ರ 3.2 ಹಾಗೂ ಕೋಷ್ಟಕ 3.2.) 1692 ರಲ್ಲಿ ವಿಒಸಿಯ ವಾರ್ಷಿಕ ಮಾರಾಟದ ಒಟ್ಟೂ ಮೌಲ್ಯದಲ್ಲಿ ಭಾರತದ ನೀಲಿಯು ಶೇಕಡಾ 6.2 ಇತ್ತು. 1703 ರಲ್ಲಿ ಅದು ಶೇಕಡಾ 8.7 ಇತ್ತು ಹಾಗೂ 1709 ರಲ್ಲಿ ಶೇಕಡಾ 7 ಇತ್ತು. 1710 ರ ನಂತರ ವಿಒಸಿಯು ಭಾರತದಲ್ಲಿ ಯಾವಾಗಲಾದರೊಮ್ಮೆ ನೀಲಿಯನ್ನು ಖರೀದಿಸುತ್ತಿತ್ತು ಹಾಗೂ ಅದೂ ಕೂಡ ಅಲ್ಪ ಪ್ರಮಾಣದಲ್ಲಿತ್ತು. ಇದಕ್ಕೆ ಕಾರಣವೆಂದರೆ, ನೀಲಿಯ ಮಾರಾಟ ಬೆಲೆ ತುಂಬಾ ಕಡಿಮೆಯಿದ್ದದ್ದರಿಂದ, ಯುರೋಪಿಗೆ ವಿಭಿನ್ನ ನೀಲಿ ಪೂರೈಕೆ ಸರಪಣಿಗಳಿಂದ ಪೈಪೋಟಿಯಲ್ಲಿ ದೊಡ್ಡ ಪ್ರಮಾಣದಲ್ಲಿ ನೀಲಿಯ ಆಮದಾಗುತ್ತಿತ್ತು.

ಇಐಸಿಯ ನೀಲಿ ವ್ಯಾಪಾರವೂ ಕೂಡ ಇಂಥಹದೇ ರೂಪಾಂತರವನ್ನು ಹೊಂದಿತ್ತು. ಮೇಲೆ ತಿಳಿಸಿದ ಕಾರಣಗಳಿಂದಾಗಿ ಹದಿನೇಳನೆಯ ಶತಮಾನದ ಮಧ್ಯ ಭಾಗದಲ್ಲಿ ಭಾರತದಿಂದ ನೀಲಿಯ ರಫ್ತು ತ್ವರಿತವಾಗಿ ಕಡಿಮೆಯಾಗತೊಡಗಿತು. ಅಮೇರಿಕಾದಲ್ಲಿ ಬ್ರಿಟನ್ನಿನ ವಸಾಹತು ಆಕ್ರಮಣಗಳು, ಅದರಲ್ಲೂ ನಿರ್ದಿಷ್ಟವಾಗಿ 1655ರಲ್ಲಿ ಜಮೈಕಾವನ್ನು ವಶಪಡಿಸಿಕೊಂಡಿದ್ದು ಹಾಗೂ ಅಲ್ಲಿ ತಲೆಯೆತ್ತಿದ ತೋಟಗಾರಿಕೆಯ ವಾಣಿಜ್ಯದಿಂದಾಗಿ ಅಲ್ಲಿ ಒಂದು ಸರಕು ಸರಪಣಿಯು ರೂಪುಗೊಂಡಿತು. ಬ್ರಿಟಿಷ್ ಮಾರುಕಟ್ಟೆಗೆ ಇತರ ವಸಾಹತು ಪ್ರದೇಶಗಳಿಂದ ಬರುತ್ತಿದ್ದ ನೀಲಿಯ ಸ್ಥಾನವನ್ನು ಅದು ಆಕ್ರಮಿಸಿಕೊಂಡಿತು. 1650 ಹಾಗೂ 1673 ರಲ್ಲಿ ಅಂಗೀಕೃತವಾದ ಬ್ರಿಟಿಷ್ ಸಂಚಾರ ಕಾಯಿದೆಗಳು (ನೇವಿಗೇಶನ್ ಆಕ್ಟ್) ಸೂಚಿಸುವಂತೆ ಬ್ರಿಟನ್ನಿನ ವಸಾಹತು ಹಾಗೂ ವಾಣಿಜ್ಯ ನೀತಿಗಳು ಕೂಡ ಮಧ್ಯ ಅಮೇರಿಕಾದ ಪ್ರದೇಶಗಳಲ್ಲಿ ತೋಟಗಾರಿಕೆ ಪ್ರಧಾನವಾದ ಹಾಗೂ ನೀಲಿ ಬೆಳೆಗಾರರಿಂದ

ನಿಯಂತ್ರಿತವಾದ ಸರಕು ಸರಪಣಿಯ ಬೆಳವಣಿಗೆಗೆ ಸಹಕರಿಸಿದವು.[88] ಅದರಿಂದಾಗಿ ಇಐಸಿಯು ಹದಿನೇಳನೆಯ ಶತಮಾನದ ಅಂತ್ಯಭಾಗದಲ್ಲಿ ಹಾಗೂ ಹದಿನೆಂಟನೆಯ ಶತಮಾನದ ಪ್ರಾರಂಭದಲ್ಲಿ ಭಾರತದ ನೀಲಿಯನ್ನು ಅಲ್ಪ ಪ್ರಮಾಣದಲ್ಲಿ ರಫ್ತು ಮಾಡಿತು.[89] 1665-1729 ರ ನಡುವೆ ಇಐಸಿಯು ಬ್ರಿಟನ್ನಿಗೆ ರಫ್ತು ಮಾಡಿದ ಭಾರತೀಯ ನೀಲಿಯ ಸರಾಸರಿ ವಾರ್ಷಿಕ ಆಮದು ಅಂದಾಜು 56,400 ಪೌಂಡ್‌ಗಳಷ್ಟಿತ್ತು. 1712 ರ ವರೆಗೂ ಆ ಆಮದಿನ ಪ್ರಮಾಣವು ಹೆಚ್ಚು ಕಡಿಮೆ ಒಂದೇ ರೀತಿಯಲ್ಲಿತ್ತು. ಆನಂತರ ಅದರಲ್ಲಿ ವ್ಯತ್ಯಯಗಳಾಗತೊಡಗಿದವು. ಹಾಗೂ 1729 ರ ವೇಳೆಗೆ ಕಂಪೆನಿಯು ಭಾರತೀಯ ನೀಲಿಯನ್ನು ಖರೀದಿಸುವುದನ್ನು ಹೆಚ್ಚು ಕಡಿಮೆ ಸಂಪೂರ್ಣವಾಗಿ ನಿಲ್ಲಿಸಿತು.[90]

**ಭಾರತದ ನೀಲಿಯ ವ್ಯಾಪಾರ : ಸವಾಲುಗಳು ಹಾಗೂ ಪ್ರತಿಕ್ರಿಯೆಗಳು**

ವಿಒಸಿ ಮತ್ತು ಇಐಸಿಗಳು ತಮ್ಮ ನೀಲಿ ವ್ಯಾಪಾರದಲ್ಲಿ ವಿವಿಧ ದಿಕ್ಕುಗಳಿಂದ ಸವಾಲುಗಳನ್ನು ಎದುರಿಸಬೇಕಾಯಿತು. ಖರೀದಿದಾರರಲ್ಲಿ, ಅದರಲ್ಲೂ ನಿರ್ದಿಷ್ಟವಾಗಿ ಡಚ್ಚರು ಮತ್ತು ಇಂಗ್ಲಿಷರ ನಡುವಿನ ಪೈಪೋಟಿಯಿಂದಾಗಿ ವ್ಯಾಪಾರಿ ಸರಕು ಕೊರತೆ ಹಾಗೂ ಬೆಲೆಯೇರಿಕೆಗೆ ಒಳಗಾಗುತ್ತಿತ್ತು.[91] ಕೆಲವೊಮ್ಮೆ ಪೈಪೋಟಿಯು ಎಷ್ಟು ತೀವ್ರವಾಗಿರುತ್ತಿತ್ತೆಂದರೆ ಅದು ನೀಲಿಯನ್ನು ಖರೀದಿಸುವ ಕಂಪೆನಿಯ ಅಧಿಕಾರಿಗಳಲ್ಲಿ ಹತಾಶೆಯನ್ನು ಹುಟ್ಟಿಸುತ್ತಿತ್ತು. 1627 ರಲ್ಲಿ ಆಗ್ರಾದ ಒಬ್ಬ ಡಚ್ ಅಧಿಕಾರಿಯು ವರದಿಮಾಡಿದ ಪ್ರಕಾರ ನೀಲಿ ಖರೀದಿಸಲು ಪೈಪೋಟಿಯು ಎಷ್ಟು ತೀವ್ರವಾಗಿತ್ತೆಂದರೆ ನೀಲಿಯ ಬೆಲೆ ಹೆಚ್ಚಿದ್ದಷ್ಟೇ ಅಲ್ಲ ಅದರಿಂದಾಗಿ ಬಂಡಿಗಳು ಹಾಗೂ ಒಂಟೆಗಳ ಕೊರತೆ ಕೂಡ ಸೃಷ್ಟಿಯಾಯಿತು. ಆ ಕಾರಣದಿಂದ ಆಗ್ರಾದಿಂದ ಸೂರತ್‌ವರೆಗಿನ ಸಾಗಾಟದ ವೆಚ್ಚವು ಮಣಕ್ಕೆ ಒಂದೂವರೆ - ಒಂದೂಮುಕ್ಕಾಲು ರೂಪಾಯಿಯಿಂದ ಎರಡೂವರೆ ರೂಪಾಯಿಗಳಿಗೇರಿತು.[92] ಎರಡನೆಯ ಅಧ್ಯಾಯದಲ್ಲಿ ಚರ್ಚಿಸಿದಂತೆ ಇಐಸಿ ಹಾಗೂ ವಿಒಸಿಗಳೆರಡೂ ತಾವು ಬಯಸಿದ ಗುಣಮಟ್ಟ ಮತ್ತು ಗಾತ್ರದ ನೀಲಿಯನ್ನು ಕಾಯ್ದಿರಿಸಲು ಹಳ್ಳಿಗಳಲ್ಲಿದ್ದ ಉತ್ಪಾದಕರಿಂದ ನೇರವಾಗಿ ಅದನ್ನು ಖರೀದಿಸುವ ಸಲುವಾಗಿ ಮುಂಗಡವಾಗಿ ಹಣನೀಡುವ ಮಾರ್ಗವನ್ನು ಹಿಡಿದಿದ್ದವು. ಕೆಲವೊಮ್ಮೆ ಮುಂಗಡ ತೆಗೆದುಕೊಂಡೂ ಹೆಚ್ಚಿನ ಬೆಲೆಯ ಆಸೆ ತೋರಿಸಿದ ತಮ್ಮ ಪ್ರತಿಸ್ಪರ್ಧಿ ವಾಪಾರಿಗಳಿಗೆ ಅವರು ಮಾರುವುದಿಲ್ಲ ಎಂಬುದಕ್ಕೆ ಯಾವುದೇ ಭರವಸೆ

---

[88] ವಿವರಗಳಿಗಾಗಿ ನೋಡಿ, J.H. Parry, *The Age of Reconnaissance: Discovery, Exploration, and Settlement, 1450-1650* ( Berkley: University of California Press, 1981) 263-4; Alan K Smith, *Creating a World Economy: Merchant Capital, Colonialism,, and World Trade, 1400-1825* (Oxford/ Boulder: Westview Press, 1991), chapters 7-8.

[89] 1663 ರಲ್ಲಿ 200 ಮೂಟೆಗಳಷ್ಟು ಸಾರ್ಖೆಜ್ ನೀಲಿಗಾಗಿ ಬೇಡಿಕೆ ಇಡಲಾಗಿತ್ತು. ಆದರೆ, ನೀಲಿಯ ಬೆಲೆಯೇರಿಕೆಯಿಂದಾಗಿ ಅದರ ರಫ್ತು ಕುಂಠಿತಗೊಂಡಿತು. 1664 ರಲ್ಲಿ ಕೇವಲ 50 ಮೂಟೆಗಳಿಗೆ ಬೇಡಿಕೆ ಇಡಲಾಯಿತು. ಹಾಗೂ ಅದನ್ನು ಪೌಂಡ್‌ಗೆ 0.75 ಮಹ್ಮುದಿ ಬೆಲೆಗೆ ಮಾರಬಹುದಾದರೆ ಬೇಡಿಕೆಯನ್ನು ದ್ವಿಗುಣಗೊಳಿಸುವ ಅವಕಾಶವನ್ನೂ ನೀಡಲಾಯಿತು. ನಂತರದ ವರ್ಷಗಳಲ್ಲಿ, ಸಾರ್ಕೇಜ್ ನೀಲಿಯ ಬೇಡಿಕೆಯು 100 ರಿಂದ 200 ಮೂಟೆಗಳಷ್ಟು ಇತ್ತು. 1670 ಮತ್ತು 1671 ರಲ್ಲಿ ಹಾಗೂ ಮತ್ತೆ 1683 ಮತ್ತು 1693 ರಲ್ಲಿ ಕೆಲವೊಮ್ಮೆ300 ರಿಂದ 400 ಮೂಟೆಗಳಿಗೂ ಅದು ಏರಿತು.

[90] Chaudhuri, *The Trading World of Asia*, 523 (Appendix 5, Table C. 10).

[91] EIC ಮತ್ತು VOC ದಾಖಲೆಗಳಲ್ಲಿ ಮುಖ್ಯವಾಗಿ ಡಚ್ ಮತ್ತು ಇಂಗ್ಲಿಷ್ ಖರೀದಿದಾರರಲ್ಲಿ ನಡೆದ ಪೈಪೋಟಿ ಹಾಗೂ ನೀಲಿಯ ಬೆಲೆಯ ಮೇಲೆ ಅದರ ಪರಿಣಾಮಗಳ ಕುರಿತು ಉಲ್ಲೇಖಗಳಿವೆ. DFI 1624-27, Memorandum from Vapour at Agra to Batavia, 26 Oct. 1627, pp. 342, 352; Voc 1127, Directeur and Raad van Surat aan Bewindhebberen , 15 Feb. 1638, ff 84 v-85 r; *Dagh Register*, 1637, pp.270-1; *Dagh Register*, 1644-45, p. 232.

[92] DFI 1624-27, Memorandum from Vapour at Agra to Batavia, 26 Oct. 1627, p. 342.

ಇರಲಿಲ್ಲ. ನೀಲಿಯ ಸಟ್ಟಾ ವ್ಯಾಪಾರದಿಂದಾಗಿ ನೀಲಿಯ ಉತ್ಪಾದಕರು ಹಾಗೂ ವರ್ತಕರಿಗೆ ಬೆಲೆಯೇರಿಸುವ ದುರಾಸೆ ಹುಟ್ಟುತ್ತದೆ ಹಾಗೂ ಸ್ಥಳೀಯ ಆಡಳಿತಗಾರರು ಅದರ ಮಾರಾಟದ ಏಕಸ್ವಾಮ್ಯಕ್ಕಾಗಿ ಪ್ರಯತ್ನಿಸುವಂತೆ ಪ್ರೋತ್ಸಾಹಿಸುತ್ತದೆ ಎಂಬುದನ್ನು ಕಂಪೆನಿಯ ಅಧಿಕಾರಿಗಳು ಚೆನ್ನಾಗಿ ತಿಳಿದಿದ್ದರು. ಬೆಲೆಗಳನ್ನು ಕಡಿಮೆ ಇಡಲು ಕಂಪೆನಿಗಳು ಆ ವರ್ಷದಲ್ಲಿ ತಾವು ಎಷ್ಟು ನೀಲಿ ಕೊಳ್ಳುತ್ತೇವೆ ಎಂಬುದನ್ನು ಮೊದಲೇ ಬಹಿರಂಗಪಡಿಸುತ್ತಿರಲಿಲ್ಲ. ಕೆಲವೊಮ್ಮೆ ಅವರು ಒಟ್ಟಾಗಿ ಖರೀದಿಮಾಡಿ ನಂತರ ಹಂಚಿಕೊಳ್ಳುತ್ತಿದ್ದರು. 1620 ರ ದಶಕದಲ್ಲಿ ಅನೇಕ ಬಾರಿ ವಿಒಸಿ ಹಾಗೂ ಇಐಸಿಗಳು ಗುಜರಾತಿನಲ್ಲಿ ಒಟ್ಟಾಗಿ ನೀಲಿಯನ್ನು ಖರೀದಿಸಿದವು.[93] ಈ ವಿಧಾನವು ಬೇಡಿಕೆಯಿಂದಾಗಿ ಬೆಲೆಯೇರುವುದನ್ನು ನಿಯಂತ್ರಿಸಲು ಪರಿಣಾಮಕಾರಿಯಾಗಿದೆ ಎಂಬುದನ್ನು ಅವರು ಕಂಡುಕೊಂಡಿದ್ದರು. ಆದರೆ ಅಂಥ ವಿಧಾನಗಳನ್ನು ಪ್ರಯೋಗಿಸುವುದು ಯಾವಾಗಲೂ ಸುಲಭವಾಗಿರಲಿಲ್ಲ. ನಿರ್ದಿಷ್ಟವಾಗಿ, ಪೈಪೋಟಿಯು ತೀವ್ರವಾಗಿದ್ದಾಗ ಹಾಗೂ ವಾಣಿಜ್ಯದ ಲೆಕ್ಕಾಚಾರಗಳು ಪರಸ್ಪರ ಹಿತಾಸಕ್ತಿಗಳಿಗೆ ವ್ಯತಿರಿಕ್ತವಾಗಿದ್ದಾಗ ಈ ವಿಧಾನಕ್ಕೆ ವಿರುದ್ಧವಾಗಿ ನಡೆಯಬೇಕಾಗುತ್ತಿತ್ತು. ಅನೇಕ ಬಾರಿ ಕಂಪೆನಿಗಳು ನೀಲಿ ಖರೀದಿಯಲ್ಲಿ ಜಂಟಿ ತೊಡಗಿಸುವಿಕೆಯ ಕುರಿತೂ ಯೋಚಿಸಿದ್ದವು, ಆದರೆ ಎರಡೂ ಪಕ್ಷಗಳು ಒಪ್ಪಂದದ ನಿಯಮಗಳನ್ನು ಪಾಲಿಸಲು ವಿಫಲವಾದವು. ಕಂಪೆನಿಗಳು ಬೆಲೆಯ ಮಿತಿಯನ್ನು ಕೂಡ ವಿಧಿಸಿಕೊಂಡವು ಹಾಗೂ ಅದು ಬೆಲೆಗಳನ್ನು ತಕ್ಕಮಟ್ಟಿಗೆ ಅನುಕೂಲಕರವಾಗುವಂತೆ ಮಾಡಿತು. ಈ ನೀತಿಯಿಂದಾಗಿ ಹಲವು ಬಾರಿ ಕಂಪೆನಿಯ ಬೆಲೆಗಳು ಚಾಲ್ತಿಯಲ್ಲಿದ್ದ ಬೆಲೆಗಳಿಗಿಂತ ತುಂಬಾ ಕಡಿಮೆ ಎಂಬುದನ್ನು ಅಧಿಕಾರಿಗಳು ಮನಗಾಣುತ್ತಿದ್ದರು, ಹಾಗೂ ಕೆಲವೊಮ್ಮೆ ಆ ಕಾರಣದಿಂದ ನೀಲಿಯನ್ನು ಖರೀದಿಸಲು ಅಸಮರ್ಥರಾಗುತ್ತಿದ್ದರು. ಆದರೂ ಕೂಡ ಬೆಲೆಯ ಮಿತಿಯನ್ನು ಹಾಕಿಕೊಳ್ಳುವುದರಿಂದ ಕಂಪೆನಿಗಳು ತೆರಲು ಇಚ್ಛಿಸುವ ಬೆಲೆಗೂ ಮಾರುವವರು ಕೊಡಲು ಇಚ್ಛಿಸುವ ಬೆಲೆಗೂ ನಡುವಿನ ವ್ಯತ್ಯಾಸವನ್ನು ಕಡಿಮೆ ಮಾಡಲು ಅದು ಖಂಡಿತ ಸಹಕರಿಸುತ್ತಿತ್ತು.

ಕಂಪೆನಿಯ ಅಧಿಕಾರಿಗಳಿಂದ ಹಾಗೂ ಯುರೋಪಿನ ಸ್ವತಂತ್ರ ವರ್ತಕರಿಂದ ನಡೆಯುತ್ತಿದ್ದ ಖಾಸಗಿ ವ್ಯಾಪಾರವು ಸಮಸ್ಯೆಯ ಮತ್ತೊಂದು ಕಾರಣವಾಗಿತ್ತು, ಬಹುಶಃ ಇಐಸಿಗೆ ವಿಒಸಿಗಿಂತ ಈ ಸಮಸ್ಯೆಯು ಹೆಚ್ಚಿತ್ತು.[94] ಇಐಸಿಯು ಕೆಲವೊಂದು ಸರಕುಗಳನ್ನು ತಾನೊಂದೇ ಭಾರತದಿಂದ ಬ್ರಿಟನ್ನಿಗೆ ಆಮದು ಮಾಡಿಕೊಳ್ಳುವ ಹಕ್ಕನ್ನು

---

[93] DFI 1624-27, Pieter van den Broecke at Surat to the Dierectors at Amsterdam, 11 Jan. 1624, p. 64; ibid, Surat to Batavia, 4 Dec. 1625, p.184. 1625 ರಲ್ಲಿ ನೀಲಿ ಖರೀದಿಯ ಸಲುವಾಗಿ ಹಾಗೂ ಗುಜರಾಥಿನಲ್ಲಿದ್ದ ಮುಘಲ್ ಆಡಳಿತಗಾರರು ಹಾಗೂ ಅಧಿಕಾರಿಗಳ ಏಕಸ್ವಾಮ್ಯವನ್ನು ಮುರಿಯಲಿಕ್ಕಾಗಿ ಇಂಗ್ಲಿಷರ ಜೊತೆಗೆ ಸೌಹಾರ್ದ ಸಂಬಂಧವನ್ನು ಬೆಳೆಸುವಂತೆ ಸೂರತ್‌ನಲ್ಲಿದ್ದ VOC ಅಧಿಕಾರಿಗಳಿಗೆ ತಿಳಿಸಲಾಗಿತ್ತು. DFI 1624-27, Governor-General De Carpentier at Batavia to Van den Broecke at Surat, 14 Aug. 1625, p. 169.

[94] VOC ಗೆ ಏಶಿಯಾ ಹಾಗೂ ಏಶಿಯಾ ಮತ್ತು ಯುರೋಪಿನ ನಡುವಿನ ಎಲ್ಲಾ ವ್ಯಾಪಾರದ ಮೇಲೂ ಏಕಸ್ವಾಮ್ಯವಿತ್ತು ಹಾಗೂ ಕಂಪೆನಿಯು ಅದನ್ನು ಉತ್ಸಾಹದಿಂದ ಕಾದುಕೊಂಡಿತ್ತು. ಕೆಲವೊಂದು ಸರಕುಗಳಿಗೆ ಸಂಬಂಧಿಸಿದಂತೆ ಹಾಗೂ ಕೆಲವೊಂದು ಕ್ಷೇತ್ರಗಳಲ್ಲಿ ಖಾಸಗಿ ವ್ಯಾಪಾರವನ್ನು ಅನುಮತಿಸಬಹುದೆಂಬ ಧ್ವನಿಗಳೂ ಆಗಾಗ್ಗೆ VOC ಸದಸ್ಯರಿಂದ ಏಳುತ್ತಿದ್ದರೂ ಯಾರೂ ಅದನ್ನು ಕಿವಿಗೆ ಹಾಕಿಕೊಳ್ಳುತ್ತಿರಲಿಲ್ಲ.A Arasaratnam, ' Monopaly and Free Trade in Dutch-Asian Commercial Policy: Debate and Controversy with the VOC', in idem, *Maritime Trade, Society and European Influence in Southern Asia*, 1600-1800( Aldershot: Ashgate Variorum, 1955), chapter VII. ಇತ್ತೀಚಿನ ಅಧ್ಯಯನಗಳು ತೋರಿಸುವಂತೆ ಈ ಏಕಸ್ವಾಮ್ಯಕ್ಕೂ ಹೊರತಾಗಿ ಹದಿನೆಂಟನೆಯ ಶತಮಾನದಲ್ಲಿ ಏಶಿಯಾದಲ್ಲಿದ್ದ VOC ಯ ನೌಕರರು ವ್ಯಾಪಕವಾಗಿ ಖಾಸಗಿ ವ್ಯಾಪಾರದಲ್ಲಿ ತೊಡಗಿದ್ದರು. Chris Nierstrasz, *In the Shadow of the Company: The Dutch East India Company and Its Servants in the Period of Its Decline, 1740-1796* (Brill, Leiden, 2012) chapters 8-10. ಹದಿನೇಳನೆಯ ಶತಮಾನದಲ್ಲಿ ಖಾಸಗಿ ಖಾತೆಗಳಿಂದ ಸ್ವಲ್ಪ ನೀಲಿಯನ್ನು ಭಾರತದಿಂದ ರಫ್ತು ಮಾಡಲಾಗುತ್ತಿತ್ತೆಂಬುದಾಗಿ ಭಾವಿಸಬಹುದು.

ಘೋಷಿಸಿಕೊಂಡಿತ್ತು ಹಾಗೂ ತನ್ನ ಏಕಸ್ವಾಮ್ಯವನ್ನು ಹೆಚ್ಚು ಯಶಸ್ವಿಯಾಗಿ ರಕ್ಷಿಸಿಕೊಂಡು ಬಂದಿತ್ತು. ಅಂಥ ಸರಕುಗಳಲ್ಲಿ ನೀಲಿ ಕೂಡ ಒಂದಾಗಿದ್ದು ಖಾಸಗಿ ವರ್ತಕರು ಅದನ್ನು ಆಮದು ಮಾಡಲು ಅನುಮತಿ ಇರಲಿಲ್ಲ.[95] ಈ ನಿಷೇಧಕ್ಕೆ ಹೊರತಾಗಿಯೂ ಕೆಲವು ಕಂಪೆನಿ ಅಧಿಕಾರಿಗಳು ತಮಗೆ ನೌಕರಿ ಕೊಟ್ಟವರ ವಾಣಿಜ್ಯಾಸಕ್ತಿಗಳನ್ನು ಕಡೆಗಣಿಸಿ ನೀಲಿ ವ್ಯಾಪಾರದ ಲಾಭದ ಆಕರ್ಷಣೆಗೆ ಬಲಿಯಾಗಿದ್ದರು. ನೀಲಿಯನ್ನು ಖಾಸಗಿ ಖಾತೆಗಳಲ್ಲಿ ಇಂಗ್ಲೆಂಡಿಗೆ ಆಮದು ಮಾಡಿಕೊಳ್ಳಲಾಗುತ್ತಿದೆ ಎಂಬ ಸಂಗತಿಯನ್ನು 1630 ರ ಪ್ರಾರಂಭದಲ್ಲಿ ಲಂಡನ್ನಿನಲ್ಲಿದ್ದ ಕಂಪೆನಿ ಅಧಿಕಾರಿಗಳು ಕಂಡುಹಿಡಿದರು.[96] ಲಂಡನ್ನಿನಲ್ಲಿ ಕಂಪೆನಿಯ ವ್ಯಾಪಾರಕ್ಕೆ ಪ್ರತಿಕೂಲ ವಾತಾವರಣವನ್ನು ಸೃಷ್ಟಿಸುವ ಅಂಥ ಆಮದುಗಳ ಕುರಿತು ಕಂಪೆನಿಯು ಹೆಚ್ಚೆಚ್ಚು ಚಿಂತಿಸತೊಡಗಿತು. ದಿ ಕೋರ್ಟ್ ಆಫ್ ಡೈರೆಕ್ಟರ್ಸ್ ಇಂಥ 'ಕಾನೂನು ಬಾಹಿರ' ವ್ಯಕ್ತಿಗಳನ್ನು ತಡೆಯಲು ಸೂರತ್‌ನಲ್ಲಿಯ ಅಧಿಕಾರಿಗಳು ಅಸಮರ್ಥರಾಗಿದ್ದಾರೆ ಹಾಗೂ ಹಡಗುಗಳ ಪ್ರವೇಶ ಸ್ಥಳದಲ್ಲಿ ಅಂಥ ಖಾಸಗಿ ವ್ಯಾಪಾರದ ಅಪರಾಧಿಗಳ ಜೊತೆಗೆ ಈ ಅಧಿಕಾರಿಗಳು ಶಾಮೀಲಾಗಿದ್ದಾರೆ ಎಂಬುದಾಗಿ ನಿಂದಿಸಿತು.[97] ಇಐಸಿಯು ಅಮೇರಿಕಾದ ನೀಲಿಯ ಜೊತೆಗೆ ದುರ್ಭರವಾದ ಪೈಪೋಟಿಯನ್ನು ಎದುರಿಸುವ ಒತ್ತಡದಲ್ಲಿದ್ದ ಸಮಯದಲ್ಲಿ ಭಾರತದಿಂದ ಖಾಸಗಿ ಆಮದುಗಳು ಹಾಗೂ ಅದು ಮಾರುಕಟ್ಟೆಯ ಮೇಲೆ ಉಂಟುಮಾಡಿದ ಪ್ರತಿಕೂಲ ಪರಿಣಾಮಗಳಿಂದಾಗಿ ಕಂಪೆನಿಯ ಕಷ್ಟಗಳು ಉಲ್ಬಣಗೊಂಡವು. ಲಂಡನ್ನಿನಿಂದ ಮತ್ತೆ ಮತ್ತೆ ಕಳುಹಿಸಿದ ನಿರ್ದೇಶನಗಳಿಗೂ ಹೊರತಾಗಿಯೂ ಸೂರತ್‌ನಲ್ಲಿಯ ಅಧಿಕಾರಿಗಳು ಸ್ವದೇಶಕ್ಕೆ ಹೊರಟ ಹಡಗುಗಳಲ್ಲಿ ನೀಲಿಯನ್ನು ಒಯ್ಯುವ ಅಥವಾ ಕಳ್ಳಸಾಗಣೆ ಮಾಡುವುದನ್ನು ನಿಲ್ಲಿಸಲು ಅಸಮರ್ಥರಾದರು. ಹಡಗುಗಳೊಳಗೆ ಪತ್ತೆ ಹಚ್ಚಲಾಗದಂತೆ ಕಳ್ಳಸಾಗಣೆ ಮಾಡಿ ತಮಗೆ ಅಪಖ್ಯಾತಿ ಹಾಗೂ ಲಂಡನ್‌ನ ಮೇಲಧಿಕಾರಿಗಳ ನಿಂದೆಗೆ ಗುರಿಮಾಡುವ ಅಂಥವರ ಭಂಡತನಕ್ಕೆ ಅವರು ಆಘಾತ ಹಾಗೂ ಆಕ್ರೋಶವನ್ನು ಹೊರಹಾಕುತ್ತಿದ್ದರು.[98] ಈ ಸಮಸ್ಯೆಯು ನಂತರದ ವರ್ಷಗಳಲ್ಲೂ ಮುಂದುವರೆದಂತೆ ಕಾಣುತ್ತದೆ.

ಸೂರತ್‌ನಲ್ಲಿದ್ದ ಇಐಸಿಯ ಅಧಿಕಾರಿಗಳು ಈ ಕಳ್ಳ ವ್ಯವಹಾರವನ್ನು ನಿಲ್ಲಿಸುವ ಉಪಾಯಗಳನ್ನು ಮಾಡುತ್ತಲೇ ಇದ್ದರು. ಅಂಥ ಉಪಾಯಗಳು 'ಹಡಗುಗಳ ಮುಖ್ಯ ಕಂಬಗಳ ಮೇಲೆ ಸಾರ್ವಜನಿಕರ ನಿಷೇಧ, ಮೇಲಧಿಕಾರಿಗಳಿಗೆ ಖಾಸಗಿ ಉಪದೇಶ, ಪರದೇಶಕ್ಕೆ ಒಯ್ಯುವ ಸರಕುಗಳ ಮೇಲೆ ಕಟ್ಟು ನಿಟ್ಟಾದ ಗಮನವಿಡುವುದು' ಇತ್ಯಾದಿಗಳನ್ನು

---

[95] George Birdwood and William Foster, The First Book of the East India Company 1600-1619 (London: Bernard Quaritch, 1893), 57-8. 1631 ರಲ್ಲಿ ಹೊರಡಿಸಿದ ರಾಯಲ್ ಪ್ರೊಕ್ಲಮೇಶನ್ ಪ್ರಕಾರ EIC ಅಧಿಕಾರಿಗಳು ಮತ್ತು ಸಾಗರ ಸಿಬ್ಬಂದಿಗಳು ಆಮದು ಮಾಡಿಕೊಳ್ಳಬಹುದಾದ ಸರಕುಗಳಲ್ಲಿ ನೀಲಿಯ ಹೆಸರಿಲ್ಲ. BL, *By the King: A Proclamation for the better encouragement, and advancement of the trade of the East India Companie , and for prevention of excesse of private trade,* ( London: R. Barker, 1631).

[96] 1633ರಲ್ಲಿ ಸುಮಾರು 300 ಹಂಡ್ರೆಡ್‌ವೈಟ್ ( 33,600 ಪೌಂಡುಗಳು)ನೀಲಿಯನ್ನು ಡೋವರ್‌ನಲ್ಲಿ ಖಾಸಗಿ ವ್ಯಾಪಾರಿಗಳು ಮಾರುತ್ತಿದ್ದಾರೆಂಬುದನ್ನು ಅವರು ಕಂಡುಹಿಡಿದರು. BL. Court Minutes, Court of COmmitees held on 6 Sept. 1633. P. 65.

[97] 1643ರಲ್ಲಿ ಸುಮಾರು 40,000 ಪೌಂಡ್‌ಗಳಷ್ಟು ನೀಲಿಯನ್ನು *ಕ್ರಿಸ್ಟಿಯಾನಾ* ಮತ್ತು *ಅಲೆಪ್ಪೊ ಮರ್ಚೆಂಟ್* ಹಡಗುಗಳಲ್ಲಿ ಖಾಸಗಿ ಖಾತೆಯಿಂದ ಲಂಡನ್‌ಗೆ ಆಮದು ಮಾಡಿಕೊಳ್ಳಲಾಯಿತು. EFI 1642-45, London to Surat, 27 Nov. 1643, p. 123. *ಲಂಡನ್* ಎಂಬ ಮತ್ತೊಂದು ಸ್ವದೇಶಾಭಿಮುಖವಾದ ಹಡಗಿನಲ್ಲೂ ಕೂಡ ಖಾಸಗಿ ಖಾತೆಯಲ್ಲಿ ಸ್ವಲ್ಪ ನೀಲಿಯಿತ್ತು. Ibid. p. 141.

[98] EFI 1642-45, Surat to London, 28 Nov. 1644, p. 202.

ಒಳಗೊಂಡಿರುತ್ತಿದ್ದವು.[99] 1650ರ ದಶಕದಲ್ಲಿ ಇಐಸಿಯ ಕೆಲವು ನೌಕರರು ಕೂಡ ನೀಲಿಯನ್ನು ತಮ್ಮ ಖಾಸಗಿ ಖಾತೆಯಲ್ಲಿ ಪಶ್ಚಿಮ ಏಶಿಯಾಕ್ಕೆ ರಫ್ತು ಮಾಡುತ್ತಿದ್ದರು. ಇದೂ ಕಂಪೆನಿಯ ಏಕಸ್ವಾಮ್ಯಕ್ಕೆ ವಿರುದ್ಧವಾಗಿದ್ದು ಆ ಪ್ರದೇಶದಲ್ಲಿ ಕಂಪೆನಿಯ ವಾಣಿಜ್ಯಾಸಕ್ತಿಗಳಿಗೆ ಪ್ರತಿಕೂಲ ಪರಿಣಾಮವನ್ನು ಬೀರುತ್ತಿತ್ತು. 1651 ರಲ್ಲಿ ಥಾಮಸ್ ಎಂಡ್ರ್ಯೂ ತನಗಾಗಿ 50 ಚೀಲ ಖುರ್ಜಾ ನೀಲಿಯನ್ನು ಖರೀದಿಸಿ ಅದನ್ನು ಗೊಂಬ್ರೂನ್‌ಗೆ ರಫ್ತು ಮಾಡಿದನು. ಈ ವ್ಯವಹಾರವು ಅವನಿಗೆ ಪೂರಕವಾಗಿರದೇ ಅವನು ಸುಮಾರು 10,000 ರೂಪಾಯಿಗಳನ್ನು ಕಳೆದುಕೊಂಡನು.[100] 1652 ರಲ್ಲಿ , ಅಸ್ಸಾದ ಮರ್ಚಂಟ್ ಹಡಗು ಗೊಂಬ್ರೂನಿಗೆ 70 ಮೂಟೆ ನೀಲಿಯನ್ನು ಹೊತ್ತೊಯ್ದಿತು, ಅದರಲ್ಲಿ 20 ಮೂಟೆ ಕಂಪೆನಿಯ ಸಲುವಾಗಿದ್ದರೆ 50 ಮೂಟೆ ಇಐಸಿಯ ಆಗ್ರಾದ ಉದ್ಯೋಗಿಯಾದ ವಿಲಿಯಮ್ ಜೆಸ್ಸನ್‌ನಿಗೆ ಸೇರಿತ್ತು. ಈ ಸರಕಿಗೆ ಸಂಬಂಧಿಸಿದಂತೆ ಕಳುಹಿಸಲಾದ ನಿರ್ದೇಶನದ ಪ್ರಕಾರ ಅತ್ಯುತ್ತಮ 20 ಚೀಲಗಳನ್ನು ಕಂಪೆನಿಯ ಖಾತೆಯಲ್ಲಿ ಮಾರಾಟ ಮಾಡಬೇಕು ಹಾಗೂ ಉಳಿದವುಗಳನ್ನು ಜೆಸ್ಸನ್‌ನ ಖಾತೆಯಲ್ಲಿ ಮಾರಾಟ ಮಾಡಬೇಕು ಎಂದಿತ್ತು. ಈ ವ್ಯವಹಾರದಲ್ಲಿ ಕಂಪೆನಿಯ ಹಿತಾಸಕ್ತಿಗೆ ಮೊದಲ ಆದ್ಯತೆಯನ್ನು ನೀಡಲಾಗಿದೆ ಹಾಗೂ ಈ ವ್ಯವಹಾರವನ್ನು ಖಾಸಗಿ ವ್ಯಾಪಾರಕ್ಕೆ ಪ್ರೋತ್ಸಾಹ ನೀಡದಂತೆ ನಡೆಸಲಾಗಿದೆ ಎಂಬುದಾಗಿ ಸೂರತ್‌ನ ಅಧಿಕಾರಿಗಳು ಅದನ್ನು ಸಮರ್ಥಿಸಿಕೊಂಡರು.[101] ಇಂಥ ಚಟುವಟಿಕೆಗಳನ್ನು ಸಹ ಅಧಿಕಾರಿಗಳ ಹಾಗೂ ಸಹೋದ್ಯೋಗಿಗಳ ಸೂಚ್ಯ ಅನುಮತಿ ಹಾಗೂ ಸಹಕಾರದೊಂದಿಗೆ ನಡೆಸಲಾಗುತ್ತಿತ್ತು ಹಾಗೂ ಅವರು ಕೆಲವೊಮ್ಮೆ ಕಂಪೆನಿಯ ಹಣವನ್ನು ದುರುಪಯೋಗ ಕೂಡ ಮಾಡಿಕೊಳ್ಳುತ್ತಿದ್ದರು, ಏಂಡ್ರ್ಯೂ ಮತ್ತು ಜೆಸ್ಸನ್ ಅವರು ಆಗ್ರಾದಲ್ಲಿ ಒಟ್ಟಿಗೆ ಕೆಲಸಮಾಡುತ್ತಿದ್ದರು ಹಾಗೂ ಇಬ್ಬರೂ ಖಾಸಗಿಯಾಗಿ ನೀಲಿ ವ್ಯಾಪಾರವನ್ನು ನಡೆಸುತ್ತಿದ್ದರು ಜೆಸ್ಸನ್‌ನು ಎಂಡ್ರ್ಯೂಗೆ ತನ್ನ ಹೊಣೆಗಾರಿಕೆಗಳನ್ನು ನಿರ್ವಹಿಸಲು ಕಂಪೆನಿಯಿಂದ 21000 ರೂಪಾಯಿಗಳನ್ನು (ತಿಂಗಳಿಗೆ ಶೇಕಡಾ 3/4 ಬಡ್ಡಿದರದಲ್ಲಿ) ಪಡೆಯಲು ಸಹಕರಿಸಿದನು ಹಾಗೂ ಈ ವ್ಯವಹಾರವನ್ನು ಬೇರೊಬ್ಬ ವ್ಯಕ್ತಿಯ ಹೆಸರಿನಲ್ಲಿ ದಾಖಲಿಸಿದ್ದನು. ಎಂಡ್ರ್ಯೂಗೆ ಪರಿಸ್ಥಿತಿಯು ಪ್ರತಿಕೂಲವಾಗಿ ಅವನು ಭಾರೀ ನಷ್ಟವನ್ನು ಅನುಭವಿಸಿದನು. 1655 ರಲ್ಲಿ ಅವನು ಕಂಪೆನಿಗಷ್ಟೇ ಅಲ್ಲ, ಆಗ್ರಾದ ಅನೇಕ ಖಾಸಗಿ ವ್ಯಕ್ತಿಗಳಿಗೂ ಕೂಡ ದೊಡ್ಡ ಮೊತ್ತದ ಸಾಲ ತೀರಿಸಬೇಕಾಗಿತ್ತು.[102]

ಆ ಶತಮಾನದ ಉತ್ತರಾರ್ಧದಲ್ಲಿ ಇಐಸಿಯು ಭಾರತದಿಂದ ಮಾಡಿಕೊಂಡ ನೀಲಿ ಆಮದಿನಲ್ಲಿ ಗಣನೀಯ ಇಳಿಕೆಯಾಗಿದ್ದರೂ ಕೂಡ ಭಾರತ ಮತ್ತು ಲಂಡನ್‌ಗಳ ಅಧಿಕಾರಿಗಳಿಗೆ ಖಾಸಗಿ ನೀಲಿ ವ್ಯಾಪಾರವು ತಲೆಕೆಡಿಸುತ್ತಲೇ ಇತ್ತು. 1670 ರಲ್ಲಿ ಅವರು ಲಂಡನ್ನಿಗೆ ಖಾಸಗಿಯಾಗಿ ಆಮದಾಗುತ್ತಿದ್ದ ನೀಲಿಗೆ ದಂಡ ವಿಧಿಸಿದರು.

---

[99] EFI 1646-50, Surat to London, 25 Jan 11647, p. 78.

[100] EFI 1651-54, Thomas Andrew at Agra to the company, 25 Dec. 1654, pp.301-2. ಅವನು ತನ್ನ ಖಾಸಗಿ ಖಾತೆಯಲ್ಲಿ ಇತರ ಸರಕುಗಳನ್ನು ಕೂಡ ವ್ಯಾಪಾರ ಮಾಡುತ್ತಿದ್ದನು. ಅವನು 500 ಪೌಂಡ್‌ಗಳಷ್ಟು ಬೆಲೆಬಾಳುವ ಕಸ್ತೂರಿಯನ್ನು ತನ್ನ ಖಾಸಗಿ ಖಾತೆಯಲ್ಲಿ ಲಂಡನ್‌ಗೆ ರವಾನಿಸುತ್ತಿದ್ದನು ಎಂಬುದಾಗಿಯೂ ಹೇಳಲಾಗುತ್ತದೆ.

[101] EFI 1651-54, Surat to Persia, 4 Oct. 1652, p. 134.

[102] ನಂತರ ಎಂಡ್ರ್ಯೂ ತಾನು ಕಂಪೆನಿಯ ನಿಧಿಯನ್ನು ಬಳಸಿಕೊಂಡು ಖಾಸಗಿ ವ್ಯಾಪಾರ ವ್ಯಾಪಾರ ಮಾಡಿರುವುದಾಗಿಯೂ, ಕಂಪೆನಿಗೆ 24,000 ರೂಪಾಯಿಗಳು ಹಾಗೂ ಆಗ್ರಾದ ಖಾಸಗಿ ವ್ಯಕ್ತಿಗಳಿಗೆ 11,000 ರೂಪಾಯಿಗಳಷ್ಟು ಬಾಕಿದಾರನಾಗಿದ್ದೇನೆಂದೂ ತಪ್ಪೊಪ್ಪಿಕೊಂಡನು. EFI 1655-60, Surat Presidency, 1655, p. 9.

ಕಂಪೆನಿಯ ಹಡಗುಗಳಲ್ಲಿ ಉಗ್ರಾಣಕ್ಕೆ ತರಲಾದ ಎಲ್ಲಾ ಬಯಾನಾ ಹಾಗೂ ಸಾರ್ಖೇಜ್ ನೀಲಿಗಳಿಗೆ ಅನುಕ್ರಮವಾಗಿ ಪೌಂಡಿಗೆ 18 ಪೆನ್ಸ್ ಹಾಗೂ 12 ಪೆನ್ಸ್‌ಗಳ ದಂಡ ವಿಧಿಸಲಾಯಿತು.[103] ಆ ಶತಮಾನದ ಕೊನೆಯ ಪಾದದಲ್ಲಿ ಇಐಸಿಯ ವ್ಯಾಪಾರೀ ಏಕಸ್ವಾಮ್ಯವು ಇಂಗ್ಲೆಂಡ್ ಮತ್ತು ಭಾರತದ ವ್ಯಾಪಾರದಲ್ಲಿ ವಾಣಿಜ್ಯ ಸವಲತ್ತುಗಳನ್ನು ಕೇಳುತ್ತಿದ್ದ ಬ್ರಿಟಿಷ್ ಉದ್ಯಮಿಗಳಿಂದ ಪ್ರಶ್ನಿಸಲ್ಪಟ್ಟಿತು. ಕಂಪೆನಿಯು ತನ್ನ ಏಕಸ್ವಾಮ್ಯವನ್ನು ಉಳಿಸಿಕೊಳ್ಳಲು ಕಠಿಣವಾಗಿ ಪ್ರಯತ್ನಿಸಿತು. ಯಾವ ವ್ಯಾಪಾರೀ ಸರಕುಗಳನ್ನು ಇಂಗ್ಲೆಂಡಿಗೆ ಆಮದು ಮಾಡುವುದು ಕಂಪೆನಿಯ ಏಕಸ್ವಾಮ್ಯವಾಗಿತ್ತೋ ಅವುಗಳ ಖಾಸಗಿ ವ್ಯಾಪಾರವನ್ನು ನಿಷೇಧಿಸುವ ಹಾಗೂ ಅಂಥ ಎಲ್ಲಾ ಖಾಸಗಿ ವ್ಯಾಪಾರಿಗಳನ್ನು ದಂಡನೆ ಒಳಪಡಿಸುವ ರಾಜಾಜ್ಞೆಯೊಂದನ್ನು ಕೂಡ ಕಂಪೆನಿಯು 1681 ರಲ್ಲಿ ಪಡೆದುಕೊಂಡಿತು.[104] ಇಂಥ ಅನಧಿಕೃತ ವ್ಯಾಪಾರಿಗಳು ಪೂರ್ವದಲ್ಲಿ ಆಗಾಗ್ಗೆ ವಾಣಿಜ್ಯ ಸಾಹಸಗಳನ್ನು ನಡೆಸುತ್ತಿದ್ದರು ಹಾಗೂ ತಾವೇ ಒಂದು ಹೊಸ ಕಂಪೆನಿಯನ್ನು 1698 ರಲ್ಲಿ ಸ್ಥಾಪಿಸಿದರು. ಅದು ಇವೆರಡೂ 1708 ರಲ್ಲಿ ವಿಲೀನಗೊಳ್ಳುವವರಗೆ ಏಶಿಯಾದಲ್ಲಿ ಇಐಸಿಯ ಪ್ರತಿಸ್ಪರ್ಧಿಯಾಗಿ ವ್ಯಾಪಾರವನ್ನು ನಡೆಸಿತು.[105]

ಯುರೋಪಿನ ಕಂಪೆನಿಗಳ ಹಾಗೂ ಎಲ್ಲಾ ವರ್ತಕರ ನೀಲಿ ವ್ಯಾಪಾರವು ಕೂಡ ಮೇಲಧಿಕಾರಿಗಳ ಹಸ್ತಕ್ಷೇಪದಿಂದ ಆಗಾಗ್ಗೆ ತೊಂದರೆಗೊಳಗಾಯಿತು. ಗುಜರಾತಿನ ಕೆಲವು ಮುಘಲ್ ಆಡಳಿತಗಾರರು ಹಾಗೂ ಉನ್ನತ ಅಧಿಕಾರಿಗಳು ಸಮುದ್ರ ವ್ಯಾಪಾರದಲ್ಲಿ ತೊಡಗಿದ್ದರು. ಅದರಲ್ಲಿ ಪಶ್ಚಿಮ ಏಶಿಯಾದ ಮಾರುಕಟ್ಟೆಗಳಿಗೆ ನೀಲಿಯ ರಫ್ತು ಕೂಡ ಒಂದು ಮುಖ್ಯ ಭಾಗವಾಗಿತ್ತು.[106] ಕೆಲವೊಮ್ಮೆ ಅವರು ನೀಲಿಗೆ ಇರುವ ಯುರೋಪಿಯನ್ನರ ಬೃಹತ್ ಬೇಡಿಕೆಯ ಪ್ರಯೋಜನ ಪಡೆದು ಆ ಸರಕನ್ನು ಏಕಸ್ವಾಮ್ಯಕ್ಕೆ ಒಳಪಡಿಸಿಕೊಳ್ಳುತ್ತಿದ್ದರು. ಆ ಮೂಲಕ ಬಲವಂತವಾಗಿ ಎಲ್ಲಾ ವರ್ತಕರೂ ನೀಲಿಯನ್ನು ಅವರಿಂದ ಹಾಗೂ ಅವರ ದಲ್ಲಾಳಿಗಳಿಂದ ಖರೀದಿಸುವಂತೆ ಮಾಡುತ್ತಿದ್ದರು. ಇಐಸಿ ಹಾಗೂ ವಿಓಸಿಗಳ ಮೂಲಗಳು ತಿಳಿಸುವಂತೆ ಕಂಪೆನಿಗಳನ್ನು ತಮ್ಮ ನೀಲಿಯನ್ನು ಖರೀದಿಸುವಂತೆ ಸ್ಥಳೀಯ ಆಡಳಿತಗಾರರು ಬಲವಂತ ಮಾಡುತ್ತಿದ್ದರು. 1618 ರಲ್ಲಿ ಇಐಸಿಯ ಅಧಿಕಾರಿಗಳು ಅಹಮದಾಬಾದಿನಲ್ಲಿ ಸ್ವಲ್ಪವೂ ನೀಲಿಯನ್ನು ಖರೀದಿಸಲು ಅಸಮರ್ಥರಾದರು ಏಕೆಂದರೆ ಮುಖರ್ರಬ್ ಖಾನ್ ಎಂಬ ಮುಘಲ್ ಆಡಳಿತಾಧಿಕಾರಿಯು ಆ ಸರಕಿನ ಮಾರಾಟದ ಮೇಲೆ ಏಕಸ್ವಾಮ್ಯ ಸಾಧಿಸಿದ್ದನು.[107] 1633 ರಲ್ಲಿ ಮುಘಲ್ ಬಾದಶಹ ಷಹಜಹಾನನು ತನ್ನ ಸಮಸ್ತ ಸಾಮ್ರಾಜ್ಯದ ನೀಲಿಯ ವ್ಯಾಪಾರವು ಪ್ರಭುತ್ವದ ಏಕಸ್ವಾಮ್ಯಕ್ಕೊಳಪಟ್ಟಿದೆ ಎಂಬುದಾಗಿ ಘೋಷಿಸಿದನು. ನೀಲಿಯ ಮಾರಾಟವನ್ನು ಮನೋಹರದಾಸ್ ಎಂಬ ವರ್ತಕನ ಏಕಸ್ವಾಮ್ಯಕ್ಕೆ ವಹಿಸಿಕೊಡಲಾಗಿತ್ತು ಹಾಗೂ ಕಂಪೆನಿಗಳು ಅವನಿಂದ ಹಾಗೂ ಅವನ ದಲ್ಲಾಳಿಗಳಿಂದ ಖರೀದಿಸಬೇಕಿತ್ತು. ಎರಡೂ ಕಂಪೆನಿಗಳು ಏಕಸ್ವಾಮ್ಯವನ್ನು ವಿರೋಧಿಸಿ

---

[103] BL, Court Minutes, 1671-73, pp. 65, 91, 170-1.

[104] BL, 'By the King: A Proclamation for the restraining of all his Majesties subjects but the East India Company, to trade to the East Indies' (London, 1681), no. 192.

[105] Ian Bruce Watson, Foundation of Empire: English Private Trade in India, 1659-1760 (New Delhi: Vokas Publishing House, 1980), 61-3.

[106] 1610 ರಲ್ಲಿ ರಾಜಮಾತೆ ( ಜಹಾಂಗೀರನ ತಾಯಿ) ಯ ದಲ್ಲಾಳಿಗಳು ಮೋಛಾಕ್ಕೆ ಪ್ರಯಾಣಿಸುತ್ತಿದ್ದ ಆಕೆಯ ಹಡಗಿಗಾಗಿ ಬಯಾನಾದಲ್ಲಿ ನೀಲಿಯನ್ನು ಖರೀದಿಸಿದರೆನ್ನಲಾಗುತ್ತದೆ. Finch, *Early Travels*, 123; *Jourdain, The Journal of John Jourdain*, 155-6.

[107] EFI 1618-21, Surat to London, 16 March 1618, p. 28.

ವಿಫಲಗೊಳಿಸಲು ಕೈಜೋಡಿಸಿದವು. 1633 ರ ನವೆಂಬರ್ 29 ರಂದು ಇಐಸಿಯ ಮುಖ್ಯಸ್ಥ ಹಾಗೂ ವಿಓಸಿಯ ನಿರ್ದೇಶಕರಿಬ್ಬರೂ ಸೂರತ್‌ನಲ್ಲಿ ಒಂದು ಒಪ್ಪಂದಕ್ಕೆ ಸಹಿ ಹಾಕಿ ಅದನ್ನು ಪಾಲಿಸುವುದಾಗಿ ವಾಗ್ದಾನ ಮಾಡಿದರು.[108] ಅವರು ಪರಸ್ಪರರಿಗೆ ತಿಳಿಯದೆ ಹಾಗೂ ಒಪ್ಪಿಗೆಯಿಲ್ಲದೆ ಸ್ವಲ್ಪವೂ ನೀಲಿಯನ್ನು ಖರೀದಿಸಬಾರದು ಹಾಗೂ ಯಾರೊಬ್ಬರೂ ಒಪ್ಪಂದದಲ್ಲಿ ನಿರ್ದಿಷ್ಟ ಪಡಿಸಿದ ಬೆಲೆಗಿಂತ ಹೆಚ್ಚಿನ ಬೆಲೆಗೆ ಖರೀದಿಸಬಾರದು ಎಂಬುದಾಗಿ ಒಪ್ಪಂದ ಮಾಡಿಕೊಂಡರು. ಕಂಪೆನಿಗಳ ವಿರೋಧ ಹಾಗೂ ವರ್ತಕರು ಮತ್ತು ಉತ್ಪಾದಕರ ಪ್ರತಿರೋಧಗಳ ಕಾರಣದಿಂದ ಬಾದಶಹ ಷಹಜಹಾನನು 1634 ರಲ್ಲಿ ಏಕಸ್ವಾಮ್ಯವನ್ನು ಹಿಂಪಡೆದುಕೊಂಡನು.[109]

ಇಂಥ ಕ್ರಮಗಳು ಯುರೋಪಿನ ನೀಲಿ ವ್ಯಾಪಾರದಲ್ಲಿ ನಡೆಯುತ್ತಿದ್ದ ಪೈಪೋಟಿ ಹಾಗೂ ಮೇಲಧಿಕಾರಿಗಳ ಹಸ್ತಕ್ಷೇಪಗಳ ಪ್ರತಿಕೂಲ ಪರಿಣಾಮಗಳನ್ನು ಮಂದಗೊಳಿಸಿದರೂ ಇಐಸಿ ಹಾಗೂ ವಿಓಸಿ ಕಂಪೆನಿಗಳು ಭಾರತದ ನೀಲಿ ಉದ್ದಿಮೆಯ ಮೇಲೆ ದೀರ್ಘಕಾಲ ಪರಿಣಾಮಬೀರುವಂಥ ಕ್ರಮ ಕೂಡ ತೆಗೆದುಕೊಂಡವು. ಆಗ್ರಾ, ಅಹಮದಾಬಾದ್ ಮತ್ತು ಸೂರತ್‌ನಲ್ಲಿ ನೀಲಿಯ ಪೂರೈಕೆ ಹಾಗೂ ಬೆಲೆಯ ಅನಿರೀಕ್ಷಿತತೆ ಹಾಗೂ ಆಗಾಗ್ಗೆ ಎದುರಾಗುತ್ತಿದ್ದ ಏಕಸ್ವಾಮ್ಯಗಳ ಕಾರಣದಿಂದ ಕಂಪೆನಿಗಳು ಪರ್ಯಾಯವಾದ ಮತ್ತು ಹೆಚ್ಚು ಸ್ಥಿರವಾದ ನೀಲಿಯ ಮೂಲಗಳಿಗಾಗಿ ಏಶಿಯಾದ ಇತರೆಡೆ ಹಾಗೂ ಅಮೇರಿಕಾದಲ್ಲಿ ಹುಡುಕಿದವು. 1630 ರ ದಶಕದ ಮಧ್ಯಭಾಗದಿಂದ ವಿಓಸಿಯು ತನ್ನ ಪೂರ್ವ ಏಶಿಯಾ ಹಾಗೂ ಆಗ್ನೇಯ ಏಶಿಯಾದ ವಸಾಹತುಗಳಲ್ಲಿ ನೀಲಿ ಉತ್ಪಾದನೆಯನ್ನು ಉತ್ತೇಜಿಸಲು ಕ್ರಮಗಳನ್ನು ಜಾರಿಮಾಡಿತು. ಬ್ರಿಟಿಷರೂ ಕೂಡ ನೀಲಿಯ ಆಮದಿಗಾಗಿ ಅಟ್ಲಾಂಟಿಕ್ ಸಾಗರದಾಚೆಗಿನ ತಮ್ಮ ವಸಾಹತುಗಳೆಡೆ ಲಕ್ಷ್ಯ ಹರಿಸಿದರು. ನೀಲಿಯ ಸ್ಥಿರ ಮೂಲವಾಗಿ ಹೊರಹೊಮ್ಮಲಿಕ್ಕೆ ಜಮೈಕಾ ವಸಾಹತುವಿಗೆ ಕೆಲವು ದಶಕಗಳೇ ಬೇಕಾದವು ಹಾಗೂ ದಕ್ಷಿಣ ಕೆರೋಲಿನಾಕ್ಕೆ ಮತ್ತೂ ಹೆಚ್ಚು ವರ್ಷಗಳು ಬೇಕಾದವಾದರೂ ಬ್ರಿಟನ್ ಖಂಡಿತವಾಗಿಯೂ ಸ್ಪ್ಯಾನಿಶ್ ಹಾಗೂ ಫ್ರೆಂಚ್ ವಸಾಹತುಗಳಿಂದ ನೀಲಿಯನ್ನು ಆಮದು ಮಾಡಿಕೊಳ್ಳಲು ಪ್ರಾರಂಭಿಸಿತು.[110] ಹೊಸ ಜಗತ್ತಿನ ಡಚ್ ವಸಾಹತುಗಳು ಫ್ರೆಂಚ್ ಹಾಗೂ ಸ್ಪ್ಯಾನಿಶ್ ವಸಾಹತುಗಳಷ್ಟು ನೀಲಿ ಬೆಳೆಗೆ ಸೂಕ್ತವಾಗಿರಲಿಲ್ಲ. ಹಾಗಾಗಿ ಭಾರತದಿಂದ ಸ್ವಲ್ಪ ನೀಲಿಯು ಹದಿನೆಂಟನೆಯ ಶತಮಾನದ ಪ್ರಾರಂಭದವರೆಗೆ ಯುರೋಪಿನ ಮಾರುಕಟ್ಟೆಗಳಿಗೆ ಹೋಗುತ್ತಿತ್ತು. ಆಗ ಅಮೇರಿಕಾದಿಂದ ಯುರೋಪಿಗೆ ಬರುತ್ತಿದ್ದ ದೊಡ್ಡ ಪ್ರಮಾಣದ ನೀಲಿಯು ಭಾರತೀಯ ನೀಲಿಗೆ ಬೇಡಿಕೆಯಿಲ್ಲದಂತೆ ಮಾಡಿತು.[111]

---

[108] VOC 1113, Contract ende capitulatie op den handel van den indigo [Contract and capitulation concerning the indigo trade], Surat, 29 Nov. 1633, ff. 230r-236r.

[109] Bibliotheque Nationale, Paris, France, Blochet Supplementary Persan 482, Copy of Shahjahan's *firman* declaring the withdrawal of the indigo monopoly, 1634, f. 98 r. ನೀಲಿ ಉತ್ಪಾದಕರೂ ಕೂಡ ಸಾಮ್ರಾಜ್ಯದ ಏಕಸ್ವಾಮ್ಯದ ಹೊಡೆತವನ್ನು ಅನುಭವಿಸಿದರು ಮತ್ತು ಅದನ್ನು ವಿರೋಧಿಸುವವರನ್ನು ಕೂಡಿಕೊಂಡರು. ಈ ಪ್ರತಿಭಟನೆಯಲ್ಲಿ ನೀಲಿ ಕೃಷಿಕರು ತಾವು ಬೆಳೆಸಿದ ನೀಲಿ ಸಸ್ಯಗಳನ್ನು ಕಿತ್ತುಹಾಕಿದರೆನ್ನಲಾಗುತ್ತದೆ. Irfan Habib, *The Agrarian System of Mughal India, 1556-1707* (New Delhi: OUP, 1999), 87-8.

[110] ಈ ವಸಾಹತುಗಳು ಕೆರಿಬಿಯನ್ ಮತ್ತು ಹೊರಜಗತ್ತಿನ ವ್ಯಾಪಾರದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಭಾಗವಹಿಸಿದವು. ಹಾಗೂ ಗ್ವಾಟೆಮಾಲಾ ಮತ್ತು ಸೇಂಟ್ ಡೊಮಿಂಗ್ ಗಳಿಂದ ನೀಲಿಯನ್ನು ತರಿಸಿಕೊಂಡವು. See, chapter 4, notes 21 and 23 and 32.

[111] 1650 ಮತ್ತು 1750ರ ನಡುವೆ ಸ್ಪೇನಿನವರು ಹಾಗೂ ಫ್ರೆಂಚರು ಜಾಗತಿಕ ಮಾರುಕಟ್ಟೆಯನ್ನು ತಮ್ಮ ಸ್ವಾಮ್ಯಕ್ಕೆ ಒಳಪಡಿಸಿಕೊಂಡಿದ್ದರು. ಹಾಗೂ ಅಟ್ಲಾಂಟಿಕ್ ಆಚೆಗಿನ ಅವರ ವಸಾಹತುಗಳ ನೀಲಿಯು ಬ್ರಿಟಿಷ್ ಮತ್ತು ಯುರೋಪಿನ ನೀಲಿ ಬಣ್ಣಗಳ ಬೇಡಿಕೆಯನ್ನು ಪೂರೈಸಿತು. R.C.Nash, ' South

**ಹತ್ತೊಂಬತ್ತನೆಯ ಶತಮಾನದಲ್ಲಿ ಭಾರತದ ನೀಲಿ: ಜಾಗತಿಕ ಬೇಡಿಕೆ ಮತ್ತು ವಿತರಣೆ**

***ಯುರೋಪಿನಲ್ಲಿ ಭಾರತದ ನೀಲಿ***

ಹದಿನೆಂಟನೆಯ ಶತಮಾನದ ಅಂತ್ಯದಲ್ಲಿ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿ ಹಾಗೂ ಯುರೋಪಿನ ಅನೇಕ ಖಾಸಗಿ ವ್ಯಾಪಾರಿಗಳು ಮತ್ತೊಮ್ಮೆ ದೊಡ್ಡ ಪ್ರಮಾಣದಲ್ಲಿ ಭಾರತದಿಂದ ನೀಲಿಯನ್ನು ಯುರೋಪಿಗೆ ರಫ್ತು ಮಾಡತೊಡಗಿದರು. ಬ್ರಿಟನ್ ಬಂಗಾಲದಲ್ಲಿ ವಸಾಹತು ಆಕ್ರಮಣವನ್ನು ಮಾಡಿದ್ದು, ನೀಲಿಯನ್ನು ಉತ್ಪಾದಿಸುತ್ತಿದ್ದ ಅಟ್ಲಾಂಟಿಕ್ ಆಚೆಯ ವಸಾಹತುಗಳು 1770 ರ ದಶಕದಲ್ಲಿ (ಮುಖ್ಯವಾಗಿ ದಕ್ಷಿಣ ಕರೊಲಿನಾ) ಕೈ ತಪ್ಪಿಹೋಗಿದ್ದು ಹಾಗೂ ಯುರೋಪಿನಲ್ಲಿ ಬಟ್ಟೆ ಉತ್ಪಾದನೆಯ ವಿಸ್ತರಣೆಯಿಂದಾಗಿ ಅದರ ಬೇಡಿಕೆಯು ವೇಗವಾಗಿ ಹೆಚ್ಚಿದ್ದು, ಮುಂತಾದ ಕಾರಣಗಳು ಬಂಗಾಲದ ನೀಲಿಯು ಜಾಗತಿಕ ಸರಕಾಗಿ ಬೆಳೆಯಲಿಕ್ಕೆ ರಂಗವನ್ನು ಸಜ್ಜುಗೊಳಿಸಿದ್ದವು. ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯ ವಸಾಹತು ಆಡಳಿತವು ಬಂಗಾಲ ಆಡಳಿತ ವಿಭಾಗದಲ್ಲಿ ನೀಲಿಯ ಉತ್ಪಾದನೆಯನ್ನು ಪ್ರೋತ್ಸಾಹಿಸಿತು. 1790 ರ ದಶಕದಲ್ಲಿ ನೀಲಿಯ ಉತ್ಪಾದನೆಯು ಅಭೂತಪೂರ್ವವಾಗಿ ನಡೆಯಿತು ಹಾಗೂ ಬಹುಬೇಗನೆ ಭಾರತವು ಪ್ರಾರಂಭದಲ್ಲಿ ಬ್ರಿಟನ್‌ಗೆ ಹಾಗೂ ನಂತರದಲ್ಲಿ ಯುರೋಪಿಗೆ ಹಾಗೆಯೇ ವಿಶಾಲ ಜಗತ್ತಿಗೆ ಈ ಕಚ್ಚಾ ಸರಕಿನ ಅತೀ ದೊಡ್ಡ ಪೂರೈಕೆದಾರನಾಯಿತು. ಗ್ರೇಟ್ ಬ್ರಿಟನ್‌ಗೆ ಭಾರತದಿಂದ ರಫ್ತಾಗುತ್ತಿದ್ದ ಸರಾಸರಿ ವಾರ್ಷಿಕ ನೀಲಿಯು 1782-86 ರ ಅವಧಿಯಲ್ಲಿ 150,000 ಪೌಂಡ್‌ಗಳಿದ್ದುದು 1792-96 ರ ಅವಧಿಯಲ್ಲಿ ಎರಡು ಮಿಲಿಯನ್ ಪೌಂಡ್‌ಗಳಷ್ಟು (ಹಿಂದಿನ ಐದು ವರ್ಷಗಳಿಗಿಂದ ಮೂರು ಪಟ್ಟು ಹೆಚ್ಚು) ಹೆಚ್ಚಿತು. ಹಾಗೂ ಅದು 1801-1810 ರ ಅವಧಿಯಲ್ಲಿ ಮೂರು ಮಿಲಿಯನ್ನನ್ನೂ ದಾಟಿತು (ಚಿತ್ರ 3.3 ಮತ್ತು 3.4). ನಂತರದ ಎರಡು ದಶಕಗಳಲ್ಲಿ ರಫ್ತು ಎರಡು ಪಟ್ಟು ಹೆಚ್ಚಿ ಆರು ಮಿಲಿಯನ್ ಪೌಂಡ್‌ಗೇರಿ 1840 ರ ದಶಕದಲ್ಲಿ ವಾರ್ಷಿಕ ಸರಾಸರಿಯು ಎಂಟು ಮಿಲಿಯನ್ ಪೌಂಡ್‌ಗೆ ತಲುಪಿತು. ಹತ್ತೊಂಬತ್ತನೆಯ ಶತಮಾನದ ಅಂತ್ಯದವರೆಗೆ ಭಾರತದಿಂದ ಬ್ರಿಟನ್‌ಗೆ ಹಾಗೂ ಯುರೋಪಿನ ಇತರ ಭಾಗಗಳಿಗೆ ಮತು ಅಮೇರಿಕಾಕ್ಕೆ ನೀಲಿಯ ರಫ್ತು ಸತತವಾಗಿ ಬೆಳೆಯಿತು ( ಕೋಷ್ಟಕ 3.3). 1830 ರ ನಂತರ ಫ್ರಾನ್ಸ್ ಮತ್ತು ಯುನೈಟೆಡ್ ಸ್ಟೇಟ್ಸ್‌ಗೆ ನೀಲಿಯ ರಫ್ತಿನ ಪ್ರಮಾಣವು ಗಣನೀಯವಾಗಿ ಏರಿತು. ಕಲ್ಕತ್ತಾದಿಂದ ರಫ್ತಾಗುತ್ತಿದ್ದ ನೀಲಿಯ ವಾರ್ಷಿಕ ಸರಾಸರಿ ಬೆಲೆಯು 1796-1805 ರ ಅವಧಿಯಲ್ಲಿ 4 ಮಿಲಿಯನ್ ರೂಪಾಯಿ ಇದ್ದದ್ದು 1836-45 ರ ಅವಧಿಯಲ್ಲಿ 21 ಮಿಲಿಯನ್ ರೂಪಾಯಿಗೇರಿತು. 1846 -1855 ರ ಅವಧಿಯಲ್ಲಿ ಒಂದು ತಾತ್ಕಾಲಿಕ ಇಳಿಕೆಯ ನಂತರ ನೀಲಿಯ ರಫ್ತುಗಳು ವೇಗವಾಗಿ ಏರಿದವು ಹಾಗೂ 1886-1895 ರ ಅವಧಿಯಲ್ಲಿ 38 ಮಿಲಿಯನ್ ರೂಪಾಯಿಗಳನ್ನು ದಾಟಿದವು (ಕೋಷ್ಟಕ 3.4. ಹಾಗೂ ಚಿತ್ರ 3.5).[112]

---

Carolina Indigo, European Textiles, and the British Atlantic Economy in the Eighteenth Century', *Economic History Review*, vol. 63, no. 2 (2010), 363.

[112] 1873-74 ಮತ್ತು 1874-75 ರಲ್ಲಿ ಲಂಡನ್ನಿಗೆ ರಫ್ತಾಗುತ್ತಿದ್ದ ನೀಲಿಯ ಮೌಲ್ಯವು ಕ್ರಮವಾಗಿ 16.8 ಹಾಗೂ 12 ಮಿಲಿಯನ್ ರೂಪಾಯಿಗಳಷ್ಟಿತ್ತು. ಈ ವರ್ಷಗಳಲ್ಲಿ , ಬ್ರಿಟನ್‌ಅನ್ನು ಒಳಗೊಂಡಂತೆ ಎಲ್ಲಾ ಸ್ಥಳಗಳಿಗೂ ಸೇರಿ ಒಟ್ಟೂ ನೀಲಿಯ ರಫ್ತಿನ ಮೌಲ್ಯವು 26.3 ಹಾಗೂ 19.8 ಮಿಲಿಯನ್ ರೂಪಾಯಿಗಳಷ್ಟಿತ್ತು. BL, P/188, Statement sshowing the total annual trade of dye-stuffs exported from Bengal during 1873/4 and 1874/5, p. 56. 1880 ಹಾಗೂ 1890ರ ದಶಕದ ಪ್ರಾರಂಭದಲ್ಲಿಬೃಹತ್ ಪ್ರಮಾಣದ ನೀಲಿ ಉತ್ಪಾದನೆಯು ಮುಂದುವರಿಯಿತು. 1881-82 ಹಾಗೂ 1894-95 ಅವಧಿಯಲ್ಲಿ, ಕೇವಲ ಬಂಗಾಲ ಹಾಗೂ ಬಿಹಾರದಲ್ಲಿಯೇ ನೀಲಿಯ ಸರಾಸರಿ ವಾರ್ಷಿಕ 84, 673 ಫ್ಯಾಕ್ಟರಿ ಮಣ (6.3 ಮಿಲಿಯನ್ ಪೌಂಡ್‌ಗಳು) ಉತ್ಪಾದನೆಯಾಗುತ್ತಿತ್ತು .. W B S A, Agriculture, 10C/1, Statement of Indigo, p. 94.

ಆ ಶತಮಾನದ ಅಂತ್ಯದಲ್ಲಿ ಕೃತಕ ನೀಲಿಯ ಪರಿಚಯ ಹಾಗೂ ಅದರ ಜನಪ್ರಿಯತೆಯು ನೈಸರ್ಗಿಕ ನೀಲಿಗೆ ತೀವ್ರ ಹೊಡೆತವನ್ನು ನೀಡಿತು. ಯುರೋಪಿನಲ್ಲಿ ಹಾಗೂ ಇತರೆಡೆಗಳ ವರ್ಣಕಾರರು ಕೃತಕ ಬಣ್ಣವನ್ನು ಬಳಸಲಿಕ್ಕೆ ಪ್ರಾರಂಭಿಸಿದರು, ಹಾಗಾಗಿ ಭಾರತದ ನೀಲಿಗಿದ್ದ ಬೇಡಿಕೆಯು ನೆಲಕಚ್ಚಿತು. ಭಾರತದ ವಸಾಹತು ಪ್ರಭುತ್ವ, ನೀಲಿ ಬೆಳೆಗಾರರು ಹಾಗೂ ರಸಾಯನ ಶಾಸ್ತ್ರಜ್ಞರು, ಸಸ್ಯಶಾಸ್ತ್ರಜ್ಞರು ಒಟ್ಟಿಗೆ ಕೈಜೋಡಿಸಿ ನೈಸರ್ಗಿಕ ನೀಲಿಯನ್ನು ಸ್ಪರ್ಧೆಗಿಳಿಸಲು ಹೊಸ ಸಸ್ಯಗಳನ್ನು (ಜಾವಾ ನೀಲಿ) ಭಾರತಕ್ಕೆ ಪರಿಚಯಿಸುವುದು, ಹೊಸ ಕೃಷಿ ಪದ್ಧತಿಗಳು, ಗೊಬ್ಬರ ನೀಡುವ ಹೊಸ ವಿಧಾನಗಳು, ಹಾಗೂ ಉತ್ಪಾದನೆಯ ಹೊಸ ತಂತ್ರಗಳು ಇತ್ಯಾದಿ ಪ್ರಯೋಗಗಳನ್ನು ನಡೆಸಿದರೂ ನೈಸರ್ಗಿಕ ನೀಲಿಯ ಕೈಗಾರಿಕೆಯನ್ನು ಉಳಿಸಲು ಸಾಧ್ಯವಾಗಲಿಲ್ಲ.[113] 1910 ರ ದಶಕ ಹಾಗೂ 1920 ರ ಪ್ರಾರಂಭದಲ್ಲಿ ನೀಲಿಯ ವ್ಯಾಪಾರದಲ್ಲಿ ಒಂದು ತಾತ್ಕಾಲಿಕ ಪುನಶ್ಚೇತನವಾಯಿತು. ಆ ಕಾಲದಲ್ಲಿ ಬ್ರಿಟನ್, ಯುನೈಟೆಡ್ ಸ್ಟೇಟ್ಸ್ ಹಾಗೂ ಈಜಿಪ್ಟಿಗೆ ನೀಲಿಯ ರಫ್ತು ಗಣನೀಯವಾಗಿತ್ತು. 1914-15 ಹಾಗೂ 1918-19 ರ ಅವಧಿಯಲ್ಲಿ ಬ್ರಿಟನ್‌ಗೆ ರಫ್ತಾಗುತ್ತಿದ್ದ ನೀಲಿಯ ವಾರ್ಷಿಕ ಸರಾಸರಿ ಮೌಲ್ಯವು 7.8 ಮಿಲಿಯನ್ ರೂಪಾಯಿಗಳಷ್ಟಿದ್ದರೆ ಯುನೈಟೆಡ್ ಸ್ಟೇಟ್ಸ್ ಮತ್ತು ಈಜಿಪ್ಟ್‌ಗಳಿಗೆ ಸೇರಿ 7.8 ಮಿಲಿಯನ್ ರೂಪಾಯಿಗಳಷ್ಟಿತ್ತು.[114] ಆದರೆ, ತದನಂತರ ಬಹುಬೇಗನೆ ನೀಲಿಯ ಉತ್ಪಾದನೆ ಮತ್ತು ರಫ್ತುಗಳು ಕ್ಷೀಣಿಸಿದವು. 1920ರ ದಶಕದ ಅಂತ್ಯದಲ್ಲಿ ಭಾರತದಲ್ಲಿ ವಾಣಿಜ್ಯ ನೀಲಿಯ ಉತ್ಪಾದನೆಯು ಹೆಚ್ಚುಕಡಿಮೆ ಸಂಪೂರ್ಣವಾಗಿ ನಿಂತೇ ಹೋಯಿತು. ಅಷ್ಟರಲ್ಲಾಗಲೇ, ಯುರೋಪು, ಪಶ್ಚಿಮ ಏಶಿಯಾ, ರಷಿಯಾ ಹಾಗೂ ಅಮೇರಿಕಾದ ಮಾರುಕಟ್ಟೆಗಳನ್ನು ಗುಣಮಟ್ಟದಲ್ಲಿ ಉತ್ತಮವಾದ ಹಾಗೂ ಕಡಿಮೆ ಬೆಲೆಯ ಕೃತಕ ನೀಲಿಯು ಆವರಿಸಿಕೊಂಡಿತ್ತು.




ಚಿತ್ರ 3.3: ಗ್ರೇಟ್ ಬ್ರಿಟನ್ನಿಗೆ ಆಮದಾದ ನೀಲಿಯ (ಪೌಂಡುಗಳಲ್ಲಿ) ವಾರ್ಷಿಕ ಆಮದಿನ ಪಂಚ ವಾರ್ಷಿಕ ಸರಾಸರಿ 1782-96

[113] For a recent analysis of these initiatives, see Prakash Kumar, *Indigo Plantations and Science in Colonial India* (Cambridge: CUP, 2012), chapters 3( 171-6) and 6.

[114] *Statistical Abstract of British India*, 1911-12 to 1920-21 (Calcutta: Superintendent of Government Printing, 1922), pp. 174-77, 542-43. 1915-16 ಹಾಗೂ 1918-19 ರ ನಡುವಿನ ವರ್ಷಗಳಲ್ಲಿ ಯುನೈಟೆಡ್ ಸ್ಟೇಟ್ಸ್‌ಗೆ ರಫ್ತು ಮಾಡಲಾದ ನೀಲಿಯ ಒಟ್ಟಾರೆ ಮೌಲ್ಯವು 16.3 ಮಿಲಿಯನ್ ರೂಪಾಯಿಗಳಷ್ಟಿತ್ತು ಹಾಗೂ 1816-20ರ ಅವಧಿಯಲ್ಲಿ ಇಜಿಪ್ತಿಗೆ 11.27 ಮಿಲಿಯನ್ ಗಳಷ್ಟಿತ್ತು. Ibid.;Statistical Abstract for British India, 1920-21 to 1929-30 ( Calcutta: Superintendent of Government Printing, 1931), p. 623.

ಮೂಲ: ಅಧ್ಯಾಯ 4ರಲ್ಲಿನ ಕೋಷ್ಟಕ 4.3 ರಲ್ಲಿನ ಅಂಕಿಗಳನ್ನು ಆಧರಿಸಿ




ಚಿತ್ರ 3.4: ಗ್ರೇಟ್ ಬ್ರಿಟನ್ನಿಗೆ ಭಾರತದಿಂದ ರಫ್ತಾದ ನೀಲಿಯ ದಶ ವಾರ್ಷಿಕ ಸರಾಸರಿ (ಪೌಂಡುಗಳಲ್ಲಿ) 1782-1898

ಮೂಲ: ಕೆಳಕಂಡ ಕೋಷ್ಟಕ 3.3ರಲ್ಲಿರುವ ಅಂಕಿಗಳನ್ನು ಆಧರಿಸಿತ.

ಕೋಷ್ಟಕ 3.3: ಗ್ರೇಟ್ ಬ್ರಿಟನ್ನಿಗೆ ಭಾರತದಿಂದ ಬಂದ ನೀಲಿಯ ವಾರ್ಷಿಕ ರಫ್ತಿನ ದಶ ವಾರ್ಷಿಕ ಸರಾಸರಿ (ಪೌಂಡುಗಳಲ್ಲಿ) 1782-1898

| ವರ್ಷ | ಬ್ರಿಟನ್ನಿಗೆ | ಒಟ್ಟು ನೀಲಿ |
|---|---|---|
| 1782–90 | 294,697 | 1,604,471 |
| 1791–1800 | 2,277,312 | 3,138,995 |
| 1801–10 | 3,077,285 | 3,708,944 |
| 1811–20 | 5,371,897 | 5,517,009 |
| 1821–30 | 6,010,426 | 6,516,881 |
| 1831–40 | 5,804,447 | 6,288,556 |
| 1841–50 | 7,985,731 | 8,426,338 |
| 1851–60 | 7,051,632 | 7,913,248 |
| 1861–70 | 6,433,504 | 8,611,792 |
| 1871–80 | 6,808,144 | 8,730,064 |
| 1881–90 | 8,959,216 | 9,944,032 |
| 1891–98 | 7,168,112 | 7,819,056 |

ಮೂಲ: ಈಸ್ಟ್ ಇಂಡಿಯಾ ಕಂಪನಿಯ ಪ್ರಕ್ರಿಯಗಳಿಗೆ ಸಂಬಂಧಪಟ್ಟ ವರದಿಗಳು ಮತ್ತು ದಾಖಲೆಗಳು pp. 26-7; na, kew, cust 5/1A, 1B, 1C, 1D, 1E, 2-36, 38, 42, 44, 48, 50, 52, 54, 56, 58, 62, 64, 66, 68, 72, 75, 81,87, 92, 97, 102, 104-5, 107, 109, 111, 115, 119, 123, 125, 127, 131, 133, 135, 137, 141, 143, 147, 153, 155, 161, 159, 157

ಮದ್ರಾಸ್ ನೀಲಿಯೂ ಕೂಡ ಗಣನೀಯ ಪ್ರಮಾಣದಲ್ಲಿ ಯುರೋಪಿಗೆ, ಅದರಲ್ಲೂ ವಿಶೇಷವಾಗಿ ಬ್ರಿಟನ್ ಹಾಗೂ ಫ್ರಾನ್ಸಿಗೆ ರಫ್ತಾಗುತ್ತಿತ್ತು. ಮದ್ರಾಸ್ ನೀಲಿಯ ಗುಣಮಟ್ಟವು ಬಂಗಾಲದ ನೀಲಿಯದಕ್ಕಿಂತ ಕಡಿಮೆ ಇದ್ದರೂ 1830ರ ವೇಳೆಗೆ ಕೇವಲ ಮದ್ರಾಸ್ ಒಂದೇ ಮಿಲಿಯನ್ ಪೌಂಡ್‌ಗೂ ಹೆಚ್ಚಿನ ನೀಲಿಯನ್ನು ಬ್ರಿಟನ್‌ಗೆ ರಫ್ತು ಮಾಡುತ್ತಿತ್ತು.[115] ಆ ಶತಮಾನದ ಉತ್ತರಾರ್ಧದಲ್ಲಿ 1860 ರಲ್ಲಿ ಬಂಗಾಲದಲ್ಲಿ ನೀಲಿ ಕೃಷಿಕರು ತಮ್ಮ ಮಾಲಿಕರು ಹಾಗೂ ತಯಾರಕರ ವಿರುದ್ಧ ಬಂಡಾಯ ನಡೆಸಿದ ನಂತರದ ಕಾಲದಲ್ಲಿ ಉತ್ಪಾದನೆಯು ವ್ಯಾಪಕವಾದ ಕಾರಣ ಆ ಶತಮಾನದ ಉತ್ತರಾರ್ಧದಲ್ಲಿ ರಫ್ತುಗಳು ಎರಡು ಪಟ್ಟಿಗಿಂತಲೂ ಹೆಚ್ಚಾದವು.[116] 1861-1898 ರ ನಡುವೆ ಬ್ರಿಟನ್‌ಗೆ ಮದ್ರಾಸಿನಿಂದ ರಫ್ತಾಗುತ್ತಿದ್ದ ನೀಲಿಯ ವಾರ್ಷಿಕ ಸರಾಸರಿಯು ಎರಡು ಮಿಲಿಯನ್ ಪೌಂಡ್ ಗಳಷ್ಟಾಯಿತು. ಈ ಅವಧಿಯಲ್ಲಿ, ಭಾರತದಿಂದ ಬ್ರಿಟನ್‌ಗೆ ಆಮದಾಗುತ್ತಿದ್ದ ಒಟ್ಟೂ ನೀಲಿಯಲ್ಲಿ ಮದ್ರಾಸ್ ನೀಲಿಯು ಶೇಕಡಾ 31 ರಷ್ಟಿತ್ತು. ಹಾಗೂ ಅದರ ಬೆಲೆಯು ಒಟ್ಟೂ ಬೆಲೆಯ ಶೇಕಡಾ 21 ರಷ್ಟಿತ್ತು ( ಚಿತ್ರ 3.6 ಮತ್ತು ಕೋಷ್ಟಕ 3.5).




ಚಿತ್ರ 3.5: ಭಾರತದಿಂದ ರಫ್ತಾದ ನೀಲಿಯ ವಾರ್ಷಿಕ ಮೌಲ್ಯದ ದಶ ವಾರ್ಷಿಕ ಸರಾಸರಿ (ರೂಪಾಯಿಗಳಲ್ಲಿ) , 1796/97-1933/34

ಮೂಲ: ಕೆಳಕಂಡ ಕೋಷ್ಟಕ 3.4ರ ಅಂಕಿಗಳನ್ನು ಆಧರಿಸಿ

[115] 1828 ಮತ್ತು 1829 ರಲ್ಲಿ ಬ್ರಿಟನ್‌ಗೆ ಆಮದಾಗುತ್ತಿದ್ದ ನೀಲಿಯು ಕ್ರಮವಾಗಿ 742, 500 ಪೌಂಡ್‌ಗಳು ಹಾಗೂ 1,083, 250 ಪೌಂಡ್‌ಗಳಷ್ಟು ಇತ್ತು. John A. Phipps, A Series of Treatise on the Principle Products of Bengal: 1 Indigo (Calcutta: Baptist Mission, 1832), 19. ಜಾನ್ ಫಿಪ್ಸ್ ಪ್ರಕಾರ ಅದು ಕಡಿಮೆ ದರ್ಜೆಯ ನೀಲಿಯಾಗಿತ್ತು ಹಾಗೂ ಯುರೋಪಿನಲ್ಲಿ ಸಾಮಾನ್ಯವಾಗಿ ಕಡಿಮೆ ಬೆಲೆಗೆ, ಅಂದರೆ ಬಂಗಾಲದ ನೀಲಿಯ ಅರ್ಧದಷ್ಟು ಬೆಲೆಗೆ, ಮಾರಾಟಮಾಡಲಾಗುತ್ತಿತ್ತು.

[116] For details about this rebellion, see Blair B. King, *The Blue Mutiny: The Indigo Disturbances in Bengal, 1859-1862* ( Philadelphia: University of Pennsylvania Press, 1966).

ಕೋಷ್ಟಕ 3.4: ಭಾರತದಿಂದ ರಫ್ತಾದ ನೀಲಿಯ ವಾರ್ಷಿಕ ಮೌಲ್ಯದ ದಶ ವಾರ್ಷಿಕ ಸರಾಸರಿ (ರೂಪಾಯಿಗಳಲ್ಲಿ) , 1796/97-1933/34

| ವರ್ಷ | ಯು.ಕೆ.ಯೆಡೆಗೆ | ಒಟ್ಟು ರಫ್ತು |
|---|---|---|
| 1796–1805 | 4,126,869 | 4,263,580 |
| 1806–15 | 5,811,951 | 6,858,442 |
| 1816–25 | 7,469,321 | 9,835,599 |
| 1826–35 | 10,208,840 | 13,476,366 |
| 1836–45 | 14,458,952 | 20,859,195 |
| 1846–55 | 12,631,545 | 17,985,211 |
| 1856–65 | 13,685,336 | 19,513,079 |
| 1866–75 | 19,484,167 | 28,028,981 |
| 1876–85 | 18,411,290 | 35,943,747 |
| 1886–95 | 15,011,404 | 38,533,702 |
| 1896–1905 | 7,020,399 | 25,550,662 |
| 1906–15 | 1,874,137 | 4,971,914 |
| 1916–25 | 3,312,274 | 9,700,200 |
| 1926–34 | 57,778 | 287,222 |

ಮೂಲ: ಅನುಬಂಧ 5 ರ ಅಂಕಿಗಳನ್ನು ಆಧರಿಸಿ

ಬಾಂಬೆಯಿಂದ ಕೂಡ ಸಣ್ಣ ಪ್ರಮಾಣದಲ್ಲಿ ಯುರೋಪು ಹಾಗೂ ಪಶ್ಚಿಮ ಏಶಿಯಾಕ್ಕೆ ನೀಲಿಯು ರಫ್ತಾಗುತ್ತಿತ್ತು. ಅದು ಉತ್ಪಾದನೆಯ ಪ್ರಮುಖ ಕೇಂದ್ರವಾಗಿರಲಿಲ್ಲ ಹಾಗೂ ಅಲ್ಲಿಂದ ರಫ್ತಾಗುತ್ತಿದ್ದ ನೀಲಿಯು ಸಿಂಧ್, ಗುಜರಾತ್, ಬಂಗಾಲ, ಹಾಗೂ ಮಾನಿಲಾ ನೀಲಿಗಳ ಮಿಶ್ರಣವಾಗಿತ್ತು. ಸ್ವಲ್ಪ ನೀಲಿಯನ್ನು ಲಂಡನ್‌ಗೆ ಹಾಗೂ ಕೆಲವೊಮ್ಮೆ ಫ್ರಾನ್ಸ್ ಮತ್ತು ಯುನೈಟೆಡ್ ಸ್ಟೇಟ್ಸ್‌ಗಳಿಗೂ ಕೂಡ ಕಳುಹಿಸಲಾಗುತ್ತಿತ್ತು. ಆ ಶತಮಾನದ ಕೊನೆಯ ಪಾದದಲ್ಲಿ ಬ್ರಿಟನ್‌ಗೆ ಮಾಡುತ್ತಿದ್ದ ರಫ್ತು ತಕ್ಕಮಟ್ಟಿಗೆ ಹೆಚ್ಚಿತು ( ಚಿತ್ರ 3.6 ಮತ್ತು ಕೋಷ್ಟಕ 3.5). ಬ್ರಿಟನ್ ಕೆಲವೊಮ್ಮೆ ಅಲ್ಪ ಪ್ರಮಾಣದಲ್ಲಿಯಾದರೂ ಸಿಲೋನಿನಿಂದಲೂ ನೀಲಿಯನ್ನು ಆಮದು ಮಾಡಿಕೊಳ್ಳುತ್ತಿತ್ತು. ಗರಿಷ್ಠ ರಫ್ತು 1896 ರಲ್ಲಿ 43,008 ಪೌಂಡ್‌ಗಳಷ್ಟಿತ್ತು.[117]




[117] N A, Kew, CUST 5/155, Customs Records, 1896.

ಚಿತ್ರ 3.6: ಗ್ರೇಟ್ ಬ್ರಿಟನ್ನಿಗೆ ಬಂಗಾಳ, ಮದ್ರಾಸ್ ಮತ್ತು ಬಾಂಬೆಯಿಂದ ಬಂದ ನೀಲಿಯ ವಾರ್ಷಿಕ  ಆಮದಿನ ದಶ ವಾರ್ಷಿಕ ಸರಾಸರಿ ( 112 ಪೌಂಡುಗಳ ಸೆಂಟಲ್ ವೆಯ್ಟಿನಲ್ಲಿ), 1861-98.

ಮೂಲ: ಕೆಳಕಂಡ ಕೋಷ್ಟಕ 3.5ರ ಅಂಕಿಗಳನ್ನು ಆಧರಿತ

ಕೋಷ್ಟಕ 3.5: ಗ್ರೇಟ್ ಬ್ರಿಟನ್ನಿಗೆ ಬಂಗಾಳ, ಮದ್ರಾಸ್ ಮತ್ತು ಬಾಂಬೆಯಿಂದ ಬಂದ ನೀಲಿಯ ವಾರ್ಷಿಕ  ಪ್ರಮಾಣದ ( 112 ಪೌಂಡುಗಳ ಸೆಂಟಲ್ ವೆಯ್ಟಿನಲ್ಲಿ) ಮತ್ತು ಮೌಲ್ಯಗಳ (ಪೌಂಡ್ ಸ್ಟರ್ಲಿಂಗಿನಲ್ಲಿ) ದಶ ವಾರ್ಷಿಕ ಸರಾಸರಿ  1861-98.

| | **1861-70** | | **1871-80** | | **1881-90** | | **1891-98** | |
|---|---|---|---|---|---|---|---|---|
| | ಪ್ರಮಾಣಗಳು | ಮೌಲ್ಯ | ಪ್ರಮಾಣಗಳು | ಮೌಲ್ಯ | ಪ್ರಮಾಣಗಳು | ಮೌಲ್ಯ | ಪ್ರಮಾಣಗಳು | ಮೌಲ್ಯ |
| Bengal | 44,576 | 1,668,268 | 41,487 | 1,222,270 | 30,202 | 1,361,043 | 40,256 | 805,604 |
| Madras | 11,380 | 287,012 | 17,868 | 414,874 | 22,869 | 410,544 | 20,299 | 303,930 |
| Bombay | 1,486 | 17,156 | 1,079 | 20,204 | 2,260 | 33,550 | 3,347 | 46,130 |

ಮೂಲ: ಲಂಡನ್ನಿಗಾದ ಆಮದಿನ ವಾರ್ಷಿಕ ದಾಖಲೆಯಿಂದ ಲೆಕ್ಕ ಹಾಕಿದ್ದು. na, kew, cust 5/64, 66, 68,72, 75, 81, 81, 87, 92, 97, 102, 105, 107, 109, 111, 113, 115, 117, 119, 121, 123, 125, 127, 129, 131, 133, 135, 137, 139, 141, 143, 145, 147, 149, 151, 153, 155, 157, and 159

ಹತ್ತೊಂಬತ್ತನೆಯ ಶತಮಾನದಲ್ಲಿ ಗ್ರೇಟ್ ಬ್ರಿಟನ್ ನಂತರ ಭಾರತೀಯ ನೀಲಿಗೆ ಫ್ರಾನ್ಸ್  ಅತ್ಯಂತ ಮುಖ್ಯವಾದ ಮಾರುಕಟ್ಟೆಯಾಗಿತ್ತು. ಸೇಂಟ್ ಡೊಮಿಂಗ್ ಮೇಲೆ ಹಿಡಿತವನ್ನು ಕಳೆದುಕೊಂಡ ನಂತರ ಕ್ಯಾರಿಬಿಯನ್ ಅದರ ಪ್ರಮುಖ ನೀಲಿ ಉತ್ಪಾದಿಸುವ ವಸಾಹತುವಾಗಿತ್ತು. ವಿಸ್ತಾರವಾಗುತ್ತಿರುವ ಫ್ರೆಂಚ್ ಬಟ್ಟೆ ಕೈಗಾರಿಕೆಯು ಹೆಚ್ಚುಕಡಿಮೆ ಸಂಪೂರ್ಣವಾಗಿ ಭಾರತದಿಂದ ರಫ್ತಾದ ನೀಲಿಯನ್ನೇ ಅವಲಂಬಿಸಿತ್ತು.[118] ಸೇಂಟ್ ಡೊಮಿಂಗ್‌ನ ಅನೇಕ ನೀಲಿ ತೋಟಗಾರರು ಭಾರತಕ್ಕೆ ಸ್ಥಳಾಂತರಗೊಂಡು ಬ್ರಿಟಿಷ್ ಬಂಗಾಲದಲ್ಲಿ ತಮ್ಮ ನೀಲಿ ಫ್ಯಾಕ್ಟರಿಗಳನ್ನು ಸ್ಥಾಪಿಸಿದರು. 1843-44 ಹಾಗೂ 1857-58 ರ ಅವಧಿಯಲ್ಲಿ ಬಂಗಾಲದಿಂದ  ಫ್ರಾನ್ಸಿಗೆ ರಫ್ತಾಗುತ್ತಿದ್ದ ವಾರ್ಷಿಕ ಸರಾಸರಿ ಮೌಲ್ಯವು 4 ಮಿಲಿಯನ್ ರೂಪಾಯಿಗಳಷ್ಟಿತ್ತು (ನೀಲಿಯ ರಫ್ತಿನ ಒಟ್ಟೂ ಮೌಲ್ಯದ ಶೇಕಡಾ 22.3). ಫ್ರೆಂಚ್ ತೋಟಗಾರರು ಫ್ರಾನ್ಸಿಗೆ ನೀಲಿಯನ್ನು ರಫ್ತು ಮಾಡುವ ಕೆಲಸವನ್ನಷ್ಟೇ ಮಾಡದೆ ಕೈಗಾರಿಕಾ ಗೂಢಚಾರರಾಗಿ ಕೂಡ ಕೆಲಸ ಮಾಡುತ್ತಿದ್ದರು.  ಉದಾಹರಣೆಗೆ ಪಿಯರೆ ಪೌಲ್ ಡೆರಾಕ್ ಎಂಬವನು ಫ್ರಾನ್ಸಿಗೆ ಪಶ್ಚಿಮ ಆಫ್ರಿಕಾದಲ್ಲಿ ನೀಲಿ ಉದ್ದಿಮೆಯನ್ನು ಬೆಳೆಸಲು ಸಹಾಯಮಾಡುವ ಸಲುವಾಗಿ ನೀಲಿಯ ಉತ್ಪಾದನೆಯ ಕುರಿತು ಭಾರತದಲ್ಲಿ ಮಾಹಿತಿ ಸಂಗ್ರಹಿಸಿ ಒಂದು ಗ್ರಂಥವನ್ನು ರಚಿಸಿದ್ದನು.[119]

---

[118] ಹತ್ತೊಂಭತ್ತನೆಯ ಶತಮಾನದಲ್ಲಿ ಫ್ರಾನ್ಸಿನಲ್ಲಿ ಹತ್ತಿ ಬಟ್ಟೆ ಕೈಗಾರಿಕೆಯು  ಏಳ್ಗೆಯನ್ನು ಹೊಂದಿತು ಹಾಗೂ ಆ ಶತಮಾನದ ಉತ್ತರಾರ್ಧದಲ್ಲಿ ಗಣನೀಯ ಪ್ರಮಾಣದ ಬೆಳವಣಿಗೆಯು ಆಯಿತು.  Roger Price, *An Economic History of Modern France, 1730-1914* (New York: St. Martin's Press, 1981), 101-06.

[119] Pierre-Paul Darrac and Willem van Schendel, *Global Blue: Indigo and Espionage in Colonial Bengal* ( Dhaka: The University Press, 2006), 33-6.

ಫ್ರಾನ್ಸ್ ಆಗ್ನೇಯ ಭಾರತದಿಂದ, ಅದರಲ್ಲೂ ಮುಖ್ಯವಾಗಿ ಪಾಂಡಿಚೆರಿಯ ತನ್ನ ವಸಾಹತುವಿನಿಂದ ಕೂಡ ನೀಲಿಯನ್ನು ಆಮದುಮಾಡಿಕೊಂಡಿತು. ಕೋರಮಂಡಲ ಕರಾವಳಿಯಿಂದ ಮರಳುವ ಫ್ರೆಂಚ್ ಹಡಗುಗಳು ಉಳಿದ ಸರಕುಗಳ ಜೊತೆಗೆ ಕಡ್ಡಾಯವಾಗಿ ನೀಲಿಯನ್ನು ಕೂಡ ಸಾಗಾಟ ಮಾಡುತ್ತಿದ್ದವು.[120] ಪಾಂಡಿಚೆರಿಯಿಂದ ನೀಲಿ ವ್ಯಾಪಾರವು ತುರುಸಿನಲ್ಲಿ ನಡೆಯಿತು ಹಾಗೂ ಯುರೋಪಿಗೆ ರಫ್ತು ಮಾಡುವ ಸಲುವಾಗಿ ಸ್ವಲ್ಪ ಮದ್ರಾಸ್ ನೀಲಿಯನ್ನೂ ಅಲ್ಲಿಗೆ ಒಯ್ಯಲಾಗುತ್ತಿತ್ತು.[121] 1890 ರ ದಶಕದ ಕೊನೆಯ ಭಾಗದಲ್ಲಿ ಮಾರ್ಸೈಲೆ ಛೇಂಬರ್ ಆಫ್ ಕಾಮರ್ಸ್ ತಯಾರಿಸಿದ ಬೆಲೆಗಳ ತುಲನಾತ್ಮಕ ಬೇಡಿಕೆ ಪಟ್ಟಿಯಲ್ಲಿ ಪಾಂಡಿಚೆರಿ ಹಾಗೂ ಜಾವಾ ನೀಲಿಗಳ ಉಲ್ಲೇಖವಿದೆ. ಬಂಗಾಲದ ನೀಲಿಯು ಈ ಪಟ್ಟಿಯಲ್ಲಿ ಇಲ್ಲದೇ ಇರುವುದು ಎದ್ದು ಕಾಣುತ್ತದೆ. ಏಶಿಯಾ ಹಾಗೂ ಯುರೋಪಿನ ವರ್ತಕರು  ಪಶ್ಚಿಮ ಏಶಿಯಾಕ್ಕೆ ಅಲ್ಪ ಪ್ರಮಾಣದ ಮದ್ರಾಸ್ ನೀಲಿಯನ್ನು ಕೂಡ ಕಳುಹಿಸುತ್ತಿದ್ದರು.

**ಏಶಿಯಾದ ಮಾರುಕಟ್ಟೆಗಳಲ್ಲಿ ಭಾರತದ ನೀಲಿ**

ಹದಿನೆಂಟನೆಯ ಶತಮಾನದಲ್ಲಿ ಬಂಗಾಲವು ಜಾಗತಿಕ ಮಾರುಕಟ್ಟೆಯಲ್ಲಿ  ಒಂದು ಪ್ರಮುಖ ಬಟ್ಟೆ ಉತ್ಪಾದನಾ ಕೇಂದ್ರವಾಗಿ ಬೆಳೆಯಿತು ಹಾಗೂ 1790 ರ ದಶಕದ ಪ್ರಾರಂಭದಲ್ಲಿ ಅದು ನೀಲಿಯನ್ನು ಕೂಡ ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸಲು ಪ್ರಾರಂಬಿಸಿತು. ಮುಖ್ಯವಾಗಿ ಯುರೋಪಿನಲ್ಲಿ ಬೆಳೆಯುತ್ತಿರುವ ಬೇಡಿಕೆಯ ಪೂರೈಕೆಗಾಗಿ ನೀಲಿಯ ಉದ್ದಿಮೆಯು ಬೆಳೆದರೂ  ಅದು ಭಾರತದಲ್ಲಿ ಉಚ್ರಾಯಕ್ಕೆ ಬರುತ್ತಿದ್ದ ಬಟ್ಟೆ ಉದ್ದಿಮೆಯ ಅಗತ್ಯವನ್ನು ಕೂಡ ಪೂರೈಸಿತು ಹಾಗೂ ಅಲ್ಪಪ್ರಮಾಣದಲ್ಲಿ ಅದನ್ನು ಪರ್ಶಿಯಾ ಹಾಗೂ ಪಶ್ಚಿಮ ಮತ್ತು ಮಧ್ಯ ಏಶಿಯಾಕ್ಕೂ ಕೂಡ ರಫ್ತು ಮಾಡಲಾಗುತ್ತಿತ್ತು. ಹತ್ತೊಂಬತ್ತನೆಯ ಶತಮಾನದ ಮೊದಲ ಪಾದದಲ್ಲಿ ಬಂಗಾಲದಿಂದ ರಫ್ತಾಗುತ್ತಿದ್ದ ಅಗಾಧ ಪ್ರಮಾಣದ ಬಟ್ಟೆಗಳ ವಾರ್ಷಿಕ ಸರಾಸರಿ ಮೌಲ್ಯವು 12 ಮಿಲಿಯನ್ ರೂಪಾಯಿಗಳಷ್ಟಿತ್ತು. ಇದನ್ನು ಗಮನದಲ್ಲಿಟ್ಟುಕೊಂಡಾಗ  ಬಟ್ಟೆ ಉತ್ಪಾದನೆಯ ವಿಸ್ತರಣೆಗೆ ಸಮಾಂತರವಾಗಿ ನೀಲಿಯ ಬಳಕೆ ಕೂಡ ಹೆಚ್ಚಿರುವ ಸಾಧ್ಯತೆಯಿದೆ. ಒಂದು ಅಂದಾಜಿನ ಪ್ರಕಾರ 1820 ರ ದಶಕದ ಪ್ರಾರಂಭದಲ್ಲಿ ಆ ಪ್ರದೇಶದ ಒಟ್ಟು ನೀಲಿ ಉತ್ಪಾದನೆಯ ಸರಾಸರಿ ಶೇಕಡಾ 4 ರಷ್ಟು ಬಂಗಾಲದಲ್ಲೇ ಬಳಕೆಯಾಗುತ್ತಿತ್ತು. ಆದರೆ, ನಂತರ ಬಹುಬೇಗನೆ ಬಂಗಾಲದಲ್ಲಿ ನಡೆಯುತ್ತಿದ್ದ ಸಿದ್ಧ ಉಡುಪಗಳ  ಉತ್ಪಾದನೆ ಮತ್ತು ರಫ್ತು ಉದ್ದಿಮೆಯು ತೀವ್ರವಾಗಿ ಕುಸಿದ ಪರಿಣಾಮ ನೀಲಿಯ ಬೇಡಿಕೆಯು ಕೂಡ ಹಿನ್ನಡೆಯನ್ನು ಕಂಡಿತು.  ಬಟ್ಟೆ ರಫ್ತಿನ ವಾರ್ಷಿಕ ಮೌಲ್ಯವು ಎರಡರ ಮೂರಂಶದಷ್ಟು ಪತನಗೊಂಡಿತು, ಅಂದರೆ 1800-1825 ರ ನಡುವೆ 12 ಮಿಲಿಯನ್ ಇದ್ದದ್ದು ನಂತರದ ಮೂರು ದಶಕಗಳಲ್ಲಿ 4.5

---

[120]ಮಾರ್ಸೈಲ್ ಗೆ ಬಂದ ಹಡಗುಗಳಲ್ಲಿ ಬಂದ ಸರಕುಗಳ ಪಟ್ಟಿಯಲ್ಲಿ ನೀಲಿಯೂ ಸೇರಿದೆ. 1851 ರಲ್ಲಿ ಕೋರಮಂಡಲ್ ಕರಾವಳಿಯಲ್ಲಿರುವ ಬಿಮ್ಲಿಪಟಮ್ ಮತ್ತು ಪಾಂಡಿಚೆರಿಯಿಂದ ಹಾಗೂ ಬಂಗಾಲದ ಕಲ್ಕತ್ತಾದಿಂದ ವಾಪಸು ಬರುವ ಅನೇಕ ಫ್ರೆಂಚ್ ಹಡಗುಗಳ ಸರಕುಗಳ ಪಟ್ಟಿಯಲ್ಲಿ ಅದನ್ನು ಉಲ್ಲೇಖಿಸಲಾಗಿದೆ.  Chambre de Commerce Archives, Marseille, 200 E 604, diverse dates, 1851.   1890ರಲ್ಲಿ ತುಲನಾತ್ಮಕ ದರಪಟ್ಟಿಗಳು ಜಾವಾ ನೀಲಿಯ ಜೊತೆಗೆ ಪಾಂಡಿಚೆರಿ ಹಾಗೂ ಮದ್ರಾಸ್ ನೀಲಿಯನ್ನು ಉಲ್ಲೇಖಿಸುತ್ತವೆ. Chambre de Commerce Archives, Marseille, Production et Commerce en France, Matieres Colorants: grance and indigo, 1810-1900.

[121]ತಮ್ಮ ಗಡಿಯೊಳಗೆ ಉತ್ಪಾದಿಸಲಾಗುತ್ತಿರುವ  ಹೆಚ್ಚಿನ ನೀಲಿಯು ಪಾಂಡಿಚೆರಿಗೆ ಕಳ್ಳಸಾಗಣೆಯಾಗುತ್ತಿದ್ದು ಕೊನೆಗೆ ಅದು ಫ್ರೆಂಚರ ವಶವಾಗುತ್ತಿತ್ತೆಂಬುದಾಗಿ ಮದ್ರಾಸಿನಲ್ಲಿದ್ದ ಬ್ರಿಟಿಷರು ಕೆಲವೊಮ್ಮೆ  ದೂರುತ್ತಿದ್ದರು.  B L, Madrass Revenue Proceedings (P/440), 24, Proceedings of the Madras Government, Revenue Department, 12 Aug. 1869, 63, Proceedings of the Revenue Board, Madras, 1870, pp. 5885-8.

ಮಿಲಿಯನ್ನಿಗಿಳಿಯಿತು. ಅದಕ್ಕೂ ಹೆಚ್ಚಿನದಾಗಿ, ಯುರೋಪಿನಲ್ಲಿ ಬಳಕೆದಾರರು ಗುಣಮಟ್ಟ ಹಾಗೂ ಬಣ್ಣದ ಕುರಿತು ತುಂಬ ಸೂಕ್ಷ್ಮವಾಗತೊಡಗಿದಂತೆ, ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯು ಬಂಗಾಲದಿಂದ ಹಾಗೂ ಭಾರತದ ಇತರೆಡೆಗಳಿಂದ ಹತ್ತಿ ಮತ್ತು ರೇಷ್ಮೆ ಬಟ್ಟೆಗಳನ್ನು ರಫ್ತು ಮಾಡಿ ಬ್ರಿಟನ್‌ನಲ್ಲಿ ಅದಕ್ಕೆ ಬಣ್ಣ ಹಾಕುವ, ಬಣ್ಣ ಹಚ್ಚುವ ಹಾಗೂ ಪ್ರಿಂಟ್ ಮಾಡುವ ಕೆಲಸವನ್ನು ನಡೆಸತೊಡಗಿತು. ಈ ಬೆಳವಣಿಗೆಗಳು ಭಾರತದಲ್ಲಿ ನೀಲಿಯ ಬಳಕೆಯ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರಿರಲೇಬೇಕು.

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ, ಭಾರತದಲ್ಲಿ ನೀಲಿ ಬಳಕೆಯ ಸ್ಥಿತಿಯು ಸುಧಾರಿಸಿದಂತೆ ಕಂಡುಬರುತ್ತದೆ. ಪಶ್ಚಿಮ ಭಾರತದ (ಅಹಮದಾಬಾದ್, ಸೂರತ್ ಹಾಗೂ ಬಾಂಬೆ) ಹತ್ತಿ ಬಟ್ಟೆ ಗಿರಣಿಗಳು ಹಾಗೂ ಬಂಗಾಲದ ಸೆಣಬಿನ ಗಿರಣಿಗಳು ನೀಲಿಗೆ ಹಾಗೂ ಇತರ ಬಣ್ಣಹಾಕುವ ಸಾಮಗ್ರಿಗಳಿಗೆ ಅಗಾಧವಾದ ಬೇಡಿಕೆಯನ್ನು ಸೃಷ್ಟಿಸಿರಬಹುದು. ಈ ಎಲ್ಲ ಗಿರಣಿಗಳಿಗೂ ಪೂರೈಕೆಯಾಗುತ್ತಿದ್ದ ನೀಲಿಯು ಮುಖ್ಯವಾಗಿ ಬಂಗಾಲ, ಉತ್ತರ ಭಾರತ ಹಾಗೂ ಮದ್ರಾಸಿನಿಂದ ಬರುತ್ತಿತ್ತು. ಇದರಿಂದ ನೀಲಿಯ ಉತ್ಪಾದಕರು ತಮ್ಮ ನೀಲಿಗೆ ಸಮೃದ್ಧವಾದ ಮಾರುಕಟ್ಟೆಯನ್ನು ಹೊಂದಿರಬಹುದು, ಆದರೆ ಈ ಗಿರಣಿಗಳಿಗೆ ಹೊಂದಿಕೊಂಡ ಬಣ್ಣದ ಮನೆಗಳು ಅದಕ್ಕೂ ಮೊದಲು ಇದ್ದ ಸಣ್ಣ ಸಣ್ಣ ವರ್ಣಕಾರರಿಗೆ ಇದ್ದ ಅಲ್ಪಸ್ವಲ್ಪ ಅವಕಾಶಗಳನ್ನು ಕೂಡ ಕಸಿದುಕೊಂಡಂತೆ ಕಾಣುತ್ತದೆ. ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಯುರೋಪಿನಿಂದ ಅಗ್ಗದ ಬಣ್ಣದ ಬಟ್ಟೆಗಳು ಹಾಗೂ ಬಣ್ಣದ ನೂಲುಗಳು ಬೃಹತ್ ಪ್ರಮಾಣದಲ್ಲಿ ಆಮದುಗೊಂಡದ್ದೂ ಕೂಡ ಭಾರತದಲ್ಲಿ ನೀಲಿ ಬಣ್ಣಹಾಕುವ ಉದ್ದಿಮೆಯ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರಿರಬಹುದು.[122] ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಕೃತಕ ನೀಲಿಯ ಆವಿಷ್ಕಾರ ಹಾಗೂ ಜನಪ್ರಿಯತೆಯು ನೈಸರ್ಗಿಕ ನೀಲಿ ಕೈಗಾರಿಕೆ ಹಾಗೂ ಹಾಗೂ ನೀಲಿ ಬಣ್ಣ ಹಾಕುವವರಿಗೆ ಮಾರಣಾಂತಿಕ ಹೊಡೆತವನ್ನು ನೀಡಿತು.

ಬಾಂಬೆಯಿಂದ ರಫ್ತು ಮಾಡಿದ ನೀಲಿಗೆ ಪಶ್ಚಿಮ ಏಶಿಯಾವು (ಮುಖ್ಯವಾಗಿ ಪರ್ಶಿಯಾ) ಪ್ರಮುಖವಾದ ಮಾರುಕಟ್ಟೆಯಾಗಿತ್ತು. ಹತ್ತೊಂಬತ್ತನೆಯ ಶತಮಾನದ ಪ್ರಾರಂಭದಲ್ಲಿ ಬಾಂಬೆಯಿಂದ ರಫ್ತು ಮಾಡುತ್ತಿದ್ದ ಬಂಗಾಲ ಹಾಗೂ ಸಿಂಧ್‌ನ ನೀಲಿಯು ಪರ್ಶಿಯನ್ ಕೊಲ್ಲಿಗೆ ಹೋಗುತ್ತಿತ್ತು. 1804-5 ಹಾಗೂ 1826-27 ರ ನಡುವೆ ಬಾಂಬೆಯಿಂದ ರಫ್ತಾಗುತ್ತಿದ್ದ ನೀಲಿಯ ಒಟ್ಟೂ ಸರಾಸರಿಯಲ್ಲಿ ಅರ್ಧಕ್ಕಿಂತ ಹೆಚ್ಚು ಪರ್ಶಿಯನ್ ಕೊಲ್ಲಿಗೆ ಹೋಗುತ್ತಿತ್ತು.[123] ಆದರೆ, ಬಂಗಾಲವು ಪರ್ಶಿಯನ್ ಕೊಲ್ಲಿಗೆ ದೊಡ್ಡ ಪ್ರಮಾಣದಲ್ಲಿ ನೀಲಿಯನ್ನು ಪೂರೈಸುತ್ತಿತ್ತು. 1807-08 ಹಾಗೂ 1857-58 ರ ನಡುವೆ ಕಲ್ಕತ್ತಾದಿಂದ ಪರ್ಶಿಯನ್ ಕೊಲ್ಲಿಗೆ ರಫ್ತಾಗುತ್ತಿದ್ದ ನೀಲಿಯ ವಾರ್ಷಿಕ

---

[122] 1891-1895 ರ ನಡುವಿನ ಅವಧಿಯಲ್ಲಿ ಕೇವಲ ಬಾಂಬೆಗೆ ಆಮದಾಗುತ್ತಿದ್ದ ಬಣ್ಣಬಳಿದ ಅಥವಾ ಬಣ್ಣ ಹಾಕಿದ ಹತ್ತಿ ಬಟ್ಟೆಗಳ ಸರಾಸರಿ ವಾರ್ಷಿಕ ಪ್ರಮಾಣವೊಂದೇ 166 ಮಿಲಿಯನ್ ಗಜಗಳಿಗಿಂತ ಹೆಚ್ಚಿತ್ತು. C.G.H. Fawcett, A Monograph on Dyes and Dying in the Bombay Presidency (Bombay, 1896), 5-6.

[123] ಈ ಅವಧಿಯಲ್ಲಿ ಪರ್ಶಿಯನ್ ಖಾರಿಗೆ ರಫ್ತಾಗುತ್ತಿದ್ದ ನೀಲಿಯ ವಾರ್ಷಿಕ ಸರಾಸರಿ ಮೌಲ್ಯವು 36,899 ರೂಪಾಯಿಗಳಷ್ಟಿತ್ತು ಹಾಗೂ ಎಲ್ಲಾಸ್ಥಳಗಳಿಗೂ ರಫ್ತಾಗುತ್ತಿದ್ದ ನೀಲಿಯ ಸರಾಸರಿ ವಾರ್ಷಿಕ ಮೌಲ್ಯವು 63, 629 ರೂಪಾಯಿಗಳಷ್ಟಿತ್ತು. MSA, Return and Statements: External and Internal Commerce, nos. 3, 4/5, 5/6, 8-16, 20-26, General Statement of the value of merchandise exported from Bombay.

ಸರಾಸರಿ ಮೌಲ್ಯವು 700,000 ರೂಪಾಯಿಗಳನ್ನು ಮೀರಿತ್ತು.[124] ನೀಲಿಯನ್ನು ಪರ್ಶಿಯಾದ ಕೆಲವು ಭಾಗಗಳಲ್ಲೂ ಬೆಳೆಯಲಾಗುತ್ತಿತ್ತು, ಆದರೆ ಅದರ ಗುಣಮಟ್ಟವು ಬಹಳ ಕಡಿಮೆ ಇತ್ತು ಹಾಗೂ ಅದರ ಉತ್ಪಾದನೆಯು ಸ್ಥಳೀಯ ಬೇಡಿಕೆಯನ್ನು ಪೂರೈಸಲು ಸಾಕಾಗುತ್ತಿರಲಿಲ್ಲ.[125] ಪರ್ಶಿಯಾದಲ್ಲಿ ಒಳ್ಳೆಯ ಗುಣಮಟ್ಟದ ನೀಲಿಯ ಬಳಕೆಯು ತುಂಬಾ ಹೆಚ್ಚಿತ್ತು ಹಾಗೂ ಅದನ್ನು ಭಾರತದಿಂದ ಆಮದು ಮಾಡಿಕೊಳ್ಳಬೇಕಾಗಿತ್ತು. ವಿಲ್ಲೆಮ್ ಫ್ಲೋರ್ ಪ್ರಕಾರ ಹತ್ತೊಂಬತ್ತನೆಯ ಶತಮಾನದಲ್ಲಿ ಇಸ್‌ಫಹಾನ್‌ನ ಬಣ್ಣದ ಕೆಲಸಗಳಿಗೆ ಪ್ರತಿದಿನಕ್ಕೆ 150 ಕಿಲೋಗ್ರಾಮ್ (330 ಪೌಂಡ್) ನೀಲಿಯು ಬಳಕೆಯಾಗುತ್ತಿತ್ತು ಹಾಗೂ ಯೆಜ್ಡ್ ನಲ್ಲಿ ಪ್ರತಿವರ್ಷಕ್ಕೆ 60,000 ಕಿಲೋಗ್ರಾಮ್ (132, 000 ಪೌಂಡ್) ಬಳಕೆಯಾಗುತ್ತಿತ್ತು.[126] ಪರ್ಶಿಯಾದ ವರ್ಣಕಾರರು ಬಳಸುತ್ತಿದ್ದ ಹೆಚ್ಚಿನ ನೀಲಿಯನ್ನು ಸಿಂಧ್, ಬಂಗಾಲ, ಹಾಗೂ ಮದ್ರಾಸಿನಿಂದ ಏಶಿಯಾ ಹಾಗೂ ಯುರೋಪಿನ ವರ್ತಕರ ಮೂಲಕ ಆಮದು ಮಾಡಿಕೊಳ್ಳಲಾಗುತ್ತಿತ್ತು. ಆದರೆ ಬಾಂಬೆಯಿಂದ ದೊಡ್ಡ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುತ್ತಿದ್ದ ಬಣ್ಣದ ಬಟ್ಟೆಗಳು ಪರ್ಶಿಯಾದ ಬಣ್ಣದ ಉದ್ದಿಮೆಯ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರಿದ್ದರಿಂದ ನೀಲಿಯ ಬೇಡಿಕೆಯು ಇಳಿಕೆಯಲ್ಲಿತ್ತು.[127] 1880ರ ವೇಳೆಗೆ ಭಾರತದಿಂದ ಆಮದಾಗುತ್ತಿದ್ದ ನೀಲಿಯ ಸರಾಸರಿ ವಾರ್ಷಿಕ ಪ್ರಮಾಣವು 14,000 ದಿಂದ 23,000 ಕಿಲೋಗ್ರಾಂಗಳಷ್ಟು (30,800-50,600 ಪೌಂಡ್‌ಗಳು) ಕುಗ್ಗಿತು. ಅದು ಹಿಂದಿನ ವರ್ಷಗಳ ಸರಾಸರಿಯ ಅರ್ಧದಷ್ಟಿತ್ತು.[128] ಪರ್ಶಿಯಾದ ವರ್ಣಕಾರರು ಹಾಗೂ ನೇಕಾರರು ಇಪ್ಪತ್ತನೆಯ ಶತಮಾನದ ಪ್ರಾರಂಭದವರೆಗೆ, ಅಂದರೆ ಕೃತಕ ಬಣ್ಣಗಳು ನೀಲಿಗಿಂತಲೂ ಅನುಕೂಲಕರವಾಗಿವೆ ಹಾಗೂ ಅವುಗಳನ್ನು ಉಪಯೋಗಿಸುವುದೂ ಸುಲಭ ಎಂಬುದನ್ನು ಕಂಡುಕೊಳ್ಳುವವರೆಗೂ, ತಮ್ಮ ನೂಲಿಗೆ ಹಾಗೂ ಬಟ್ಟೆಗೆ ಬಣ್ಣ ಹಾಕಲು ಭಾರತದ ನೀಲಿಯನ್ನು ಬಳಸುವುದನ್ನು ಮುಂದುವರಿಸಿದರು.[129]

ಹತ್ತೊಂಬತ್ತನೆಯ ಶತಮಾನದಲ್ಲಿ ಮಧ್ಯ ಏಶಿಯಾ ಹಾಗೂ ರಶಿಯಾದ ಜೊತೆಗೆ ಗಾಢವಾದ ವ್ಯಾಪಾರ ನಡೆಸುತ್ತಿದ್ದ ಭಾರತೀಯ ವರ್ತಕರಿಗೆ ನೀಲಿಯು ಬೆಲೆಬಾಳುವ ರಫ್ತಾಗಿತ್ತು.[130] ಅದನ್ನು ಬುಖಾರಾ, ಟರ್ಕಿಸ್ತಾನ್, ಮತ್ತು ಖಿವಾಗಳಿಗೆ ಗಣನೀಯ ಪ್ರಮಾಣದಲ್ಲಿ ರಫ್ತು ಮಾಡಲಾಗುತ್ತಿತ್ತು. ಲಭ್ಯವಿರುವ ಅಂದಾಜಿನ ಪ್ರಕಾರ 1830 ರಲ್ಲಿ ಮತ್ತು 1840 ರಲ್ಲಿ ನೀಲಿಯ ರಫ್ತು ವಾರ್ಷಿಕವಾಗಿ 500 ರಿಂದ 3500 ಒಂಟೆ ಹೇರುಗಳವರೆಗಿತ್ತು.[131] ಇಪ್ಪತ್ತನೆಯ ಶತಮಾನದ

---

[124] BL, Bengal Commercial Reports (P/174), 22,25, 38, 44, 48, 49, 56, 59, 61-65, 63, 64, 66, 67, 68-69.

[125] William Floor, *The Persian Gulf: Bandar Abbas, The Natural Trade Gateway of Southeast Iran* (Washington: Mage Publishers, 2011), 266-7.

[126] *Ibid.*, 513.

[127] Willem Floor, " The importation of indigo into Qajar Iran', *Studia Iranica*, vol. 35, no. 2 (2006), 242-3.

[128] Floor, *The Persian Gulf*, 513.

[129] Floor, "The importation of indigo into Qajar Iran'.

[130] Surendra Gopal, 'Indian traders in Uzbekistan in the Eighteenth Century', in Surendra Gopal (ed.), India and Central Asia: Cultural, Economic and Political Links (Delhi: Shilpa Publications, 2001), 25, 30-1; G.L. Dmitriyev, 'From the History of Indian Colony in Central Asia( 2nd half of the XIX Century-Beginning of the XX Century)',in Gopal (ed.), India and Central Asia,81-2.

[131] Devendra Kaushik, 'Economic Relations between India and Central Asia in the 19th Century', in Gopal (ed.), *India and Central Asia*, 60-1.

ಪ್ರಾರಂಭದಲ್ಲಿ ಭಾರತ ಮತ್ತು ರಷಿಯಾದ ನಡುವಿನ ವ್ಯಾಪಾರದಲ್ಲಿ ನೀಲಿಯು ಪ್ರಮುಖ ಸರಕಾಗಿ ಮುಂದುವರೆಯಿತು. ಜರ್ಮನ್ನರು ಅಗಾಧ ಪ್ರಮಾಣದಲ್ಲಿ ಕೃತಕ ಬಣ್ಣವನ್ನು ಪೂರೈಸಿದರೂ ಕೂಡ ರಶಿಯಾದ ವರ್ಣಕಾರರು ನೈಸರ್ಗಿಕ ನೀಲಿಯನ್ನು  ಬಳಸುವುದನ್ನು ಮುಂದುವರಿಸಿದರು. ಹಾಗಾಗಿ ನೀಲಿ ವ್ಯಾಪಾರವು ಮುಂದುವರಿಯಿತು. 1904ರ ನಂತರ  ನೈಸರ್ಗಿಕ ಹಾಗೂ ಕೃತಕ ಬಣ್ಣಗಳ ಮೇಲೆ ಸಮಾನ ರಫ್ತು ಸುಂಕವನ್ನು ವಿಧಿಸುವ ನೀತಿಯು ಕೃತಕ ಬಣ್ಣಗಳಿಗೆ ಅನುಕೂಲಕರವಾಗಿದ್ದರಿಂದ  ನೀಲಿಯ ವ್ಯಾಪಾರವು ನಿಧಾನವಾಗಿ ಕ್ಷೀಣಿಸಿತು.[132] 1910 ರ ದಶಕದಲ್ಲಿ ರಶಿಯಾಕ್ಕೆ  ವಾರ್ಷಿಕವಾಗಿ ಆಮದಾಗುತ್ತಿದ್ದ ಒಟ್ಟೂ ನೀಲಿಯ ಪ್ರಮಾಣವನ್ನು 12,500 ರಿಂದ 15,000  ಸಿ ಡಬ್ಲು ಟಿ (1,400,000 ರಿಂದ 1,680,000 ಪೌಂಡ್‌ಗಳು) ಗಳೆಂಬುದಾಗಿ ಅಂದಾಜಿಸಲಾಗಿದೆ. ಅದರ ಬೆಲೆಯು 200,000 ಪೌಂಡ್ ಸ್ಟರ್ಲಿಂಗ್ ಗಿಂತ ಹೆಚ್ಚಾಗುತ್ತದೆ.[133]

ಮೊದಲನೆಯ ಮಹಾಯುದ್ಧದ ನಂತರ  ಕೆಲವು ಕಾಲದವರೆಗೆ ಜಪಾನು ಭಾರತದ ನೀಲಿಯ ಪ್ರಮುಖ ಗಿರಾಕಿಯಾಗಿತ್ತು. 1918-19 ಹಾಗೂ 1920-21 ರಲ್ಲಿ ಜಪಾನಿಗೆ  ರಫ್ತಾಗುತ್ತಿದ್ದ ನೀಲಿಯ ವಾರ್ಷಿಕ ಸರಾಸರಿ ಮೌಲ್ಯವು ಸುಮಾರು 4.5 ಮಿಲಿಯನ್‌ನಷ್ಟಿತ್ತು. 1920 ರ ದಶಕದ ಮಧ್ಯಭಾಗದಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಕೃತಕ ನೀಲಿಯದೇ ಮೇಲುಗೈಯಾಯಿತು ಹಾಗೂ ಒಂದು ವಾಣಿಜ್ಯ ಬಣ್ಣವಾಗಿ ನೈಸರ್ಗಿಕ ನೀಲಿಯ  ದೀರ್ಘಕಾಲದ ಕಸರತ್ತಿಗೆ (ಲಾಂಗ್ ಡ್ಯೂರೆ) ಕೊನೆ ಕಂಡಿತು. 1934-35 ರಲ್ಲಿ ಭಾರತದಲ್ಲಿ ನೀಲಿಯ ಉತ್ಪಾದನೆಯು ಸಂಪೂರ್ಣವಾಗಿ ನಿಂತುಹೋಯಿತು. ಇಂದು ಜಗತ್ತಿನ ಕೆಲವು ಭಾಗಗಳಲ್ಲಿ ನೈಸರ್ಗಿಕ ನೀಲಿಬಣ್ಣದ ಉದ್ದಿಮೆಯನ್ನು ಪುನಶ್ಚೇತನಗೊಳಿಸಲು ಪ್ರಯತ್ನಗಳು ನಡೆಯುತ್ತಿವೆ. ಕೃತಕ ನೀಲಿಗಳಿಂದ ಆವರಿಸಲ್ಪಟ್ಟ ಜಾಗತಿಕ ಮಾರುಕಟ್ಟೆಯಲ್ಲಿ ನೈಸರ್ಗಿಕ ನೀಲಿಗೊಂದು ಸ್ಥಾನವನ್ನು ಕಲ್ಪಿಸಲು  ಇಂಥ ಪ್ರಯತ್ನಗಳು ಎಷ್ಟರ ಮಟ್ಟಿಗೆ ಯಶಸ್ವಿಯಾಗುತ್ತವೆ ಎಂಬುದನ್ನು ಕಾದು ನೋಡಬೇಕು.

**ಭಾರತದ ನೀಲಿಯ ವ್ಯಾಪಾರ: ದೀರ್ಘಕಾಲದ (ಲಾಂಗ್ ಡ್ಯೂರೆ) ಒಂದು ನೋಟ**

ಒಂದೊಮ್ಮೆ ಹತ್ತೊಂಬತ್ತನೆಯ ಶತಮಾನದಲ್ಲಿ ಭಾರತದ ನೀಲಿಯ ಜಾಗತಿಕ ವ್ಯಾಪಾರದ ವಿನ್ಯಾಸವನ್ನು ಅದಕ್ಕೂ ಹಿಂದಿನ ಅವಧಿಗೆ ಹೋಲಿಸಿದಲ್ಲಿ ಮೂರು ಪ್ರಮುಖ ಬದಲಾವಣೆಗಳು ಗೋಚರಿಸುತ್ತವೆ. ಮೊತ್ತಮೊದಲನೆಯದು, ಜಾಗತಿಕ ನೀಲಿ ಮಾರುಕಟ್ಟೆಯ ಪ್ರಮುಖ ಮರು ಸಂಯೋಜನೆ ಹಾಗೂ ಅದರಲ್ಲಿ ಭಾರತದ ಸ್ಥಾನ ಇದಕ್ಕೆ ಸಂಬಂಧಿಸಿದೆ. ಉತ್ಪಾದನೆಗೆ ಸಂಬಂಧಿಸಿದಂತೆ, ಭಾರತವು ಜಗತ್ತಿನ ಪ್ರಾಥಮಿಕ ಉತ್ಪಾದಕ ದೇಶವಾಗಿತ್ತು. ಭಾರತದ ನೀಲಿಯ ಜೊತೆಗೆ ಈ ಮೊದಲು ಸ್ಪರ್ಧಿಸಿ ಜಾಗತಿಕ ಮಾರುಕಟ್ಟೆಯಲ್ಲಿ ಪ್ರಬಲವಾಗಿದ್ದ  ಇತರ ಉತ್ಪಾದನೆ ಮತ್ತು ವಿತರಣೆಯ ಸರಪಣಿಗಳ ಮಹತ್ವವು  ಸಾಪೇಕ್ಷವಾಗಿ ಕಡಿಮೆಯಾಯಿತು. ಉದಾಹರಣೆಗೆ, ಬ್ರಿಟನ್ ಮತ್ತು ಖಂಡಾಂತರ ಯುರೋಪಿಗೆ ಬರುತ್ತಿದ್ದ ಗ್ವಾಟೆಮಾಲಾ ಹಾಗೂ ಈಸ್ಟ್ ಇಂಡಿಯಾ ಸಾಲ್ವಡಾರ್ ನೀಲಿಯ ಆಮದುಗಳು ಮುಂದುವರಿದವು ಆದರೆ ಅದು ಎಲ್ಲಾ ಸ್ಥಳಗಳಿಂದ  ಯುರೋಪಿಗೆ ಆಮದಾಗುತ್ತಿದ್ದ ಒಟ್ಟು ನೀಲಿಯ

---

[132] *Ibid.*

[133] D.T. Chadwick, *Report on Indo-Russian Trade* ( Shimla: Government Central Press, 1917), 62-3.

ಒಂದು ಸಣ್ಣ ಭಾಗವಾಗಿತ್ತು[134]. ಅದೇ ರೀತಿಯಲ್ಲಿ, ಜಾವಾದಿಂದ ಆಮದುಗಳು ಮುಂದುವರಿದವು ಹಾಗೂ 1830 ರಲ್ಲಿ 'ಕಲ್ಚರ್ ಸಿಸ್ಟಂ' ನ ಪ್ರಾರಂಭವಾದನಂತರ ಮತ್ತಷ್ಟು ವಿಸ್ತರಣೆಗೊಂಡವು, ಆದರೆ ಭಾರತದ ನೀಲಿಯ ಆಮದಿಗೆ ಹೋಲಿಸಿದರೆ ಅವು ತೀರ ಅಲ್ಪ ಪ್ರಮಾಣದಲ್ಲಿದ್ದವು. ಯುರೋಪು 19ನೆಯ ಶತಮಾನದಲ್ಲಿ ನೀಲಿಯ ಕೈಗಾರಿಕೆಯು ಉಚ್ರಾಯ ಸ್ಥಿತಿಯಲ್ಲಿದ್ದಂತೆ ಕಂಡು ಬರುತಿದ್ದ ಮನಿಲಾದಿಂದ ಸಣ್ಣ ಪ್ರಮಾಣದ ನೀಲಿಯನ್ನು ಪಡೆಯುತ್ತಿತ್ತು.[135] ಈ ಮರು ಸಂಯೋಜನೆಗೊಂಡ ಮಾರುಕಟ್ಟೆಯ ಮತ್ತೊಂದು ಆಯಾಮವೆಂದರೆ ಭಾರತದಿಂದ ಈ ಹಿಂದೆ ನೀಲಿಯನ್ನು ದೊಡ್ಡ ಪ್ರಮಾಣದಲ್ಲಿ ಆಮದುಮಾಡಿಕೊಳ್ಳದ ಪ್ರದೇಶಗಳಲ್ಲೂ ಕೂಡ ಬಳಕೆದಾರರ ಬೇಡಿಕೆಯು ವಿಸ್ತರಣೆಗೊಂಡದ್ದು. ಭಾರತೀಯ ನೀಲಿಗೆ ತುಂಬಾ ಬೇಡಿಕೆಯಿರುವ ಹೊಸ ಮಾರುಕಟ್ಟೆಗಳು ಹುಟ್ಟಿಕೊಂಡವು. ಅವುಗಳಲ್ಲಿ ಯುನೈಟೆಡ್ ಸ್ಟೇಟ್ಸ್, ಫ್ರಾನ್ಸ್, ರಶಿಯಾ, ಪೆನಾಂಗ್ (ಮಲೇಶಿಯಾ) ಹಾಗೂ ನಂತರ ಈಇಜಿಪ್ಟ್ ಹಾಗೂ ಜಪಾನುಗಳೂ ಸೇರಿದ್ದವು.

ಎರಡನೆಯ ಪ್ರಮುಖ ಬದಲಾವಣೆಯೆಂದರೆ, ಬೇಡಿಕೆ ಹಾಗೂ ಉತ್ಪಾದನೆ ಅಥವಾ ಪೂರೈಕೆಯ ನಡುವಿನ ಸಂಬಂಧ ಕಡಿದುಹೋದದ್ದು. ಹತ್ತೊಂಬತ್ತನೆಯ ಶತಮಾನದಲ್ಲಿ ನೀಲಿಗಾಗಿ ಯುರೋಪಿನ ಹಸಿವು ತೀವ್ರವಾಗಿ ಬೆಳದದ್ದು ನಿಜ, ಖಂಡಿತವಾಗಿಯೂ ಅದು ಉತ್ಪಾದನೆಯಲ್ಲಿನ ಬೆಳವಣಿಗೆಯನ್ನು ಪ್ರಚೋದಿಸಿತು ಎಂಬುದು ನಿಜ; ಆದರೆ ವಸಾಹತು ಭಾರತದಲ್ಲಿ ನೀಲಿಯ ಉದ್ದಿಮೆಯ ನಾಟಕೀಯ ಬೆಳವಣಿಗೆಯು ಯುರೋಪಿನ ಬಂಡವಾಳಶಾಹಿ ಉದ್ದಿಮೆದಾರರ ಅವಾಸ್ತವಿಕ ತೊಡಗಿಸುವಿಕೆಯ ಒಂದು ಪರಿಣಾಮ ಕೂಡಾ ಆಗಿತ್ತು. ಅವರ ಮೂಲ ಉದ್ದೇಶವು ಭಾರತದಲ್ಲಿ ಪಡೆದ ಆದಾಯವನ್ನು ಹಾಗೂ ವ್ಯಾಪಾರೀ ಲಾಭವನ್ನು ಯುರೋಪಿಗೆ ಕಳಿಸುವುದೇ ಆಗಿತ್ತು. 1819-20 ಕ್ಕೂ ಮೊದಲೇ ಬಂಗಾಲದ ವಾಣಿಜ್ಯ ಕುರಿತ ವರದಿಯೊಂದು ತಿಳಿಸುವ ಪ್ರಕಾರ' ರಫ್ತು ಮಾಡುವ ಪ್ರಮಾಣವು ಸಂಪೂರ್ಣವಾಗಿ ಬೆಳೆಯ ಇಳುವರಿಯನ್ನವಲಂಬಿಸಿತ್ತೇ ವಿನಃ ಯುರೋಪಿನ ಮಾರುಕಟ್ಟೆಗಳ ಸ್ಥಿತಿಗತಿಗಳನ್ನು ಅವಲಂಬಿಸಿರಲಿಲ್ಲ ಅಥವಾ ಯಾವ ರೀತಿಯಲ್ಲೂ ಅದರಿಂದ ಪ್ರಭಾವಿತವಾಗಿರಲಿಲ್ಲ.'[136] ಡೇವಿಡ್ ಮೆಕ್ ಕ್ರೀರಿ ಇತ್ತೀಚೆಗೆ ಸಂಕ್ಷಿಪ್ತವಾಗಿ ಹೇಳಿದ ಪ್ರಕಾರ 'ಲಂಡನ್ ಮಾರುಕಟ್ಟೆಗಳಿಗೆ ಕಳುಹಿಸಲಾಗುತ್ತಿದ್ದ ನೀಲಿಯ ಪ್ರಮಾಣವು ಅದಕ್ಕಿರುವ ನಿಜವಾದ ಅಥವಾ ನಿರೀಕ್ಷಿತವಾಗಿರುವ ಬೇಡಿಕೆಯನ್ನಾಗಲೀ, ಅಥವಾ ಅದರ ಬೆಲೆಯನ್ನಾಗಲೀ ಅವಲಂಬಿಸಿರದೇ ಬಂಗಾಲದ ಕಂಪೆನಿ ಹಾಗೂ ಖಾಸಗಿ ಉದ್ಯಮಿಗಳು ಯುರೋಪಿಗೆ ತಮ್ಮ ಹಣಸಂದಾಯ ಹಾಗೂ ಲಾಭವನ್ನು ಕಳುಹಿಸುವ ಅಗತ್ಯಕ್ಕನುಗುಣವಾಗಿ ಇದ್ದವು.[137] ಬೇಡಿಕೆ ಹಾಗೂ ಪೂರೈಕೆಯ ನಡುವಿನ ಈ ಅಂತರವು ಹಲವುಬಾರಿ ನೀಲಿಯ ಅತೀ ಹೆಚ್ಚಳಕ್ಕೆ ಕಾರಣವಾಯಿತು ಇದರಿಂದ ಯುರೋಪಿನ ಮಾರುಕಟ್ಟೆಗಳಲ್ಲಿ ಬೆಲೆ

---

[134]ಜಾನ್. ಫಿಪ್ಸ್ ಪ್ರಕಾರ 1826-27 ಮತ್ತು 1830-31 ರ ಅವಧಿಯಲ್ಲಿ ಸ್ಪೇನಿನ (ಗ್ವಾಟೆಮಾಲಾ) ನೀಲಿಯ ವಾರ್ಷಿಕ ಸರಾಸರಿ ಆಮದು 400,000 ಪೌಂಡ್‌ಗಳಷ್ಟಿತ್ತು. Phipps, *A Series of Treatises on the Principal Products of Bengal*, 19.

[135]ಚೀನಾವು ಮಾನಿಲಾ ನೀಲಿಗೆ ಪ್ರಮುಖ ಮಾರುಕಟ್ಟೆಯಾಗಿತ್ತು. ಅಲ್ಲಿಗೆ ಅದನ್ನು ದ್ರವರೂಪದಲ್ಲಿ ಅಥವಾ ತಯಾರಿಸಿದ ವಸ್ತು ರೂಪದಲ್ಲಿ ಸಾಗಿಸಲಾಗುತ್ತಿತ್ತು. Phipps, A Series of Treatises on the Principal Products of Bengal, 19. ಬಾಂಬೆಗೂ ಕೂಡ ಕೆಲವೊಮ್ಮೆ ಮಾಣಿಲಾ ನೀಲಿಯನ್ನು ಆಮದುಮಾಡಿಕೊಂಡು ಪಶ್ಚಿಮ ಏಶೀಯಾಕ್ಕೆ ಮರು ರಫ್ತು ಮಾಡಲಾಗುತ್ತಿತ್ತು.

[136] BL, Bengal Commercial Reports, 31, Report on the internal and external commerce of Bengal in 1819-20.

[137] David J. McCreery, 'Indigo Commodity Chains in the Spanish and British Empires, 1560-1860', in Steven Topik, Zephyr Frank and Carlos Marichal (eds.), *From Silver to Cocaine: Latin American Commodity Chains and the Building of the World Economy, 1500-2000* (Durham: Duke University Press, 2006), 66.

ಬಿದ್ದುಹೋಯಿತು. ಅದರಿಂದಾಗಿ ಭಾರತದಲ್ಲಿ ಹಿಂದೆಂದೂ ಕಂಡಿರದ ಪ್ರಮಾಣದಲ್ಲಿ ಉದ್ದಿಮೆಯ ವೈಫಲ್ಯಗಳು ಹಾಗೂ ಕೈಗಾರಿಕೆಯ ಬಿಕ್ಕಟ್ಟುಗಳನ್ನು ಕಾಣುವಂತಾಯಿತು.

ಕೊನೆಯದಾಗಿ, 1789 ರ ದಶಕದ ಕೊನೆಯ ಭಾಗದಿಂದಲೂ ಬಂಗಾಲದಿಂದ ರಫ಼್ತಾಗುತ್ತಿದ್ದ ಒಟ್ಟೂ ನೀಲಿಯಲ್ಲಿ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯ ಪಾಲು ಗೌಣವಾಗಿತ್ತು. ರಫ್ತುಗಳು ಮುಖ್ಯವಾಗಿ ಯುರೋಪಿನ ಖಾಸಗಿ ವರ್ತಕರು ಹಾಗೂ ಅವರ ಕಾರ್ಪೋರೇಶನ್‌ಗಳ ವಶವಾದವು. ಇಲ್ಲಿ ಗುರುತಿಸಬೇಕಾದ ಮತ್ತೊಂದು ಮುಖ್ಯ ಅಂಶವೆಂದರೆ ಆ ಶತಮಾನ ಮುಂದುವರಿದಂತೆ  ಬ್ರಿಟನ್ ಭಾರತದ  ನೀಲಿಯನ್ನು  ಆಮದು ಮಾಡಿಕೊಳ್ಳುವ ಹಾಗೂ ವಿತರಣೆ ಮಾಡುವ ಏಕೈಕ ದೇಶ ಎಂಬುದನ್ನು  ಕ್ರಮೇಣವಾಗಿ ಕಳೆದುಕೊಂಡಿತು.  ಬೃಹತ್ ಪ್ರಮಾಣದಲ್ಲಿ ನೀಲಿಯನ್ನು  ಖಂಡಾಂತರ ಯುರೋಪು ( ಮುಖ್ಯವಾಗಿ ಫ್ರಾನ್ಸ್) ಹಾಗೂ ಯುನೈಟೆಡ್ ಸ್ಟೇಟ್ಸ್‌ಗಳಿಗೆ ಭಾರತದಿಂದ ನೇರವಾಗಿ ರಫ್ತು ಮಾಡಲು ಪ್ರಾರಂಭಿಸಲಾಯಿತು.  1837 ಮತ್ತು 1858 ರ ನಡುವೆ ಕಲ್ಕತ್ತಾದ ಒಟ್ಟೂ ವಾರ್ಷಿಕ ನೀಲಿ ರಫ್ತಿನಲ್ಲಿ ಒಂದು ಮೂರಾಂಶದಷ್ಟು ಬ್ರಿಟನ್  ಬಿಟ್ಟು ಇತರ ಭಾಗಗಳಿಗೆ ಹೋಗುತ್ತಿತ್ತು. ಹತ್ತೊಂಬತ್ತನೆಯ ಶತಮಾನದ ಕೊನೆಯ ಪಾದದಲ್ಲಿ,  ಒಟ್ಟೂ ನೀಲಿ ರಫ್ತಿನ ಎರಡು ಮೂರಾಂಶದಷ್ಟು ಬ್ರಿಟನ್ ಬಿಟ್ಟು ಇತರ ಸ್ಥಳಗಳಿಗೆ ನೇರವಾಗಿ ಹೋಗುತ್ತಿತ್ತು.

ನೀಲಿಯ ಜಾಗತಿಕ ವ್ಯಾಪಾರದ ದೀರ್ಘಕಾಲದ ಕಸರತ್ತಿನ ನೋಟವು  ತೋರಿಸುವ ಪ್ರಕಾರ ಭಾರತದ ಉತ್ಪಾದನೆ ಹಾಗೂ ರಫ್ತುಗಳಲ್ಲಿ ಏರಿಳಿತಗಳ ಒಂದು ಅನಿಶ್ಚಿತವಾದ ವಿನ್ಯಾಸವಿತ್ತು. ಜಾಗತಿಕ ಮಾರುಕಟ್ಟೆಯ ರಚನೆಯಲ್ಲಿ, ಜಾಗತಿಕ ವ್ಯಾಪಾರದ ಗತಿಯಲ್ಲಿ ಹಾಗೂ ಪರಸ್ಪರ ಪೈಪೋಟಿ ನಡೆಸಿದ ನೀಲಿ ಸರಕು ಸರಪಣಿಗಳ ಅದೃಷ್ಟದಲ್ಲಿ ಅನೇಕ ಪ್ರಮುಖ ಹಾಗೂ ಪ್ರಮುಖವಲ್ಲದ ಬದಲಾವಣೆಗಳು  ನಡೆದವು.  ಬದಲಾವಣೆಯಾಗದ್ದೆಂದರೆ ನೀಲಿಗಾಗಿ ಪರ್ಯಾಯ ಬಣ್ಣದ ಮೂಲಗಳ ಹುಡುಕಾಟ.  ಸ್ಥಿರವಾದ ಹಾಗೂ ಉತ್ತಮತರವಾದ ಪರ್ಯಾಯಗಳ ಹುಡುಕಾಟಕ್ಕೆ ಮುಖ್ಯ ಕಾರಣವೆಂದರೆ ನೀಲಿಯ ಸಲುವಾಗಿ ತಮ್ಮ ರಾಜಕೀಯ ನಿಯಂತ್ರಣದಲ್ಲಿಲ್ಲದ ಪ್ರದೇಶಗಳ ಅವಲಂಬನಕ್ಕೆ ಹಾಗೂ ಅವುಗಳಿಂದ ಬರುವ ಆಮದುಗಳಿಗೆ ಪರ್ಯಾಯವನ್ನು ಬಯಸಿದ್ದು.  ನೀಲಿಯ ಪರ್ಯಾಯ ಮೂಲಕ್ಕಾಗಿ ನಡೆದ ಈ ನಿರಂತರ ಹುಡುಕಾಟವೇ ಅದನ್ನು ಜಾಗತಿಕ ಸರಕನ್ನಾಗಿ ಮಾಡಿತು,  ಉತ್ಪಾದನೆ ಮತ್ತು ವಿತರಣೆಯ ಸರಪಣಿಯಲ್ಲಿ  ಪೈಪೋಟಿಯನ್ನು ಹುಟ್ಟುಹಾಕಿತು, ಕೃತಕ ನೀಲಿಯ ಆವಿಷ್ಕಾರಕ್ಕೆ ಕಾರಣವಾಯಿತು ಹಾಗೂ ನೈಸರ್ಗಿಕ ನೀಲಿಯ ಕೈಗಾರಿಕೆಗಳ ವಿನಾಶವು ತೀವ್ರವಾಗುವಂತೆ ಹಾಗೂ  ಅದೊಂದು ವಾಸ್ತವವಾಗುವಂತೆ ಮಾಡಿತು. ಈ ದೀರ್ಘಕಾಲೀನ ಇತಿಹಾಸದ  ನಿರಂತರತೆಯ ಕಡೆಗೆ  ನಾವೀಗ ನಮ್ಮ ಲಕ್ಷ್ಯ ಹರಿಸೋಣ.

***